ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಜನವರಿ 2019 ಬೆಲೆ ರೂ. 5/-







ತಿರುಮಲ ತಿರುಪತಿ ದೇವಸ್ಥಾನಗಳು
ಶ್ರೀನಿವಾಸಮಂಗಾಪುರಂ
ಶ್ರೀಕಲ್ಯಾಣವೆಂಕಟೇಶ್ವರ ಸ್ವಾಮಿಯವರ
ವಾರ್ಷಿಕ ಬ್ರಹ್ಮೋತ್ಸವ

**24-02-2019 ರಿಂದ 04-03-2019 ರ ವರೆಗೆ**

**24-02-2019 ಭಾನುವಾರ**
ಹಗಲು: ಧ್ವಜಾರೋಹಣ,
ರಾತ್ರಿ: ದೊಡ್ಡಶೇಷವಾಹನ.

**25-02-2019 ಸೋಮವಾರ**
ಹಗಲು: ಚಿಕ್ಕಶೇಷವಾಹನ,
ರಾತ್ರಿ: ಹಂಸವಾಹನ.

**26-02-2019 ಮಂಗಳವಾರ**
ಹಗಲು: ಸಿಂಹವಾಹನ,
ರಾತ್ರಿ: ಮುತ್ತಿನಚಪ್ಪರವಾಹನ.

**27-02-2019 ಬುಧವಾರ**
ಹಗಲು: ಕಲ್ಪವೃಕ್ಷವಾಹನ,
ರಾತ್ರಿ: ಸರ್ವಭೂಪಾಲವಾಹನ.

**28-02-2019 ಗುರುವಾರ**
ಹಗಲು: ಪಲ್ಲಕ್ಕಿಯಲ್ಲಿ ಮೋಹಿನೀಅವತಾರೋತ್ಸವ,
ರಾತ್ರಿ: ಗರುಡವಾಹನ.

**01-03-2019 ಶುಕ್ರವಾರ**
ಹಗಲು: ಹನುಮದ್ವಾಹನ,
ಸಂಜೆ: ವಸಂತೋತ್ಸವ,
ರಾತ್ರಿ: ಗಜವಾಹನ.

**02-03-2019 ಶನಿವಾರ**
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ.

**03-03-2019 ಭಾನುವಾರ**
ಹಗಲು: ರಥೋತ್ಸವ,
ರಾತ್ರಿ: ಅಶ್ವವಾಹನ.

**04-03-2019 ಸೋಮವಾರ**
ಹಗಲು: ಚಕ್ರಸ್ನಾನ,
ರಾತ್ರಿ: ಧ್ವಜಾವರೋಹಣ.

ತಿರುಮಲ ತಿರುಪತಿ ದೇವಸ್ಥಾನಗಳು
ತಿರುಪತಿ
ಶ್ರೀ ಕಪಿಲೇಶ್ವರ ಸ್ವಾಮಿಯವರ
ವಾರ್ಷಿಕ ಬ್ರಹ್ಮೋತ್ಸವ

**25-02-2019 ರಿಂದ 06-03-2019 ರ ವರೆಗೆ**

**25-02-2019 ಸೋಮವಾರ**
ಹಗಲು: ಧ್ವಜಾರೋಹಣ,
ರಾತ್ರಿ: ಹಂಸವಾಹನ.

**26-02-2019 ಮಂಗಳವಾರ**
ಹಗಲು: ಸೂರ್ಯಪ್ರಭವಾಹನ,
ರಾತ್ರಿ: ಚಂದ್ರಪ್ರಭವಾಹನ

**27-02-2019 ಬುಧವಾರ**
ಹಗಲು: ಭೂತವಾಹನ
ರಾತ್ರಿ: ಸಿಂಹವಾಹನ.

**28-02-2019 ಗುರುವಾರ**
ಹಗಲು: ಮಕರವಾಹನ,
ರಾತ್ರಿ: ಶೇಷವಾಹನ.

**01-03-2019 ಶುಕ್ರವಾರ**
ಹಗಲು: ತಿರುಚ್ಚಿ ಉತ್ಸವ
ರಾತ್ರಿ: ಅಧಿಕಾರ ನಂದಿವಾಹನ.

**02-03-2019 ಶನಿವಾರ**
ಹಗಲು: ವ್ಯಾಘ್ರವಾಹನ
ರಾತ್ರಿ: ಗಜವಾಹನ

**03-03-2019 ಭಾನುವಾರ**
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಅಶ್ವವಾಹನ.

**04-03-2019 ಸೋಮವಾರ**
ಹಗಲು: ರಥೋತ್ಸವ
ರಾತ್ರಿ: ನಂದಿವಾಹನ(ಮಹಾಶಿವರಾತ್ರಿ)

**05-03-2019 ಮಂಗಳವಾರ**
ಹಗಲು: ಪುರುಷಾಮೃಗವಾಹನ
ರಾತ್ರಿ: (ಕಲ್ಯಾಣೋತ್ಸವ) ತಿರುಚ್ಚಿ ಉತ್ಸವ

**06-03-2019 ಬುಧವಾರ**
ಹಗಲು: ಸೂರ್ಯಪ್ರಭ ವಾಹನದಲ್ಲಿ ನಟರಾಜಸ್ವಾಮಿ
ತ್ರಿಶೂಲಸ್ನಾನ
ರಾತ್ರಿ: ಧ್ವಜಾವರೋಹಣಂ ರಾವಣಾಸುರ ವಾಹನ



ಭೂಷಣಕೆ ಭೂಷಣವು ಇದು ಭೂಷಣ
ಶ್ರೀ ಶೇಷಗಿರಿವಾಸ ಶ್ರೀ ವೆಂಕಟೇಶ

ನಾಲಗ್ಗೆ ಭೂಷಣ ನಾರಾಯಣ ನಾಮ
ಕಾಲಿಗೆ ಭೂಷಣ ಹರಿಯಾತ್ರೆಯು

ಆಲಯಕೆ ಭೂಷಣ ತುಳಸಿ ವೃಂದಾವನವು
ವಿಶಾಲ ಕರ್ಣಕೆ ವಿಷ್ಣುಕಥೆ ಭೂಷಣ

ದಾನವೇ ಭೂಷಣ ಎರಡು ಹಸ್ತಂಗಳಿಗೆ
ಮಾನವೇ ಭೂಷಣ ಮಾನವರಿಗೆ

ಜ್ಞಾನವೇ ಭೂಷಣ ಮುನಿಯೋಗಿವರರಿಗೆ
ಮಾನಿನಿಗೆ ಭೂಷಣ ಪತಿ ಭಕ್ತಿಯು

ರಂಗನ್ನ ನೋಡುವುದೆ ಕಂಗಳಿಗೆ ಭೂಷಣ
ಮಂಗಳಾಂಗಗೆ ಮಣಿವ ಶಿರಭೂಷಣ

ಶೃಂಗಾರ ತುಳಸಿಮಣಿ ಕಂಠಕ್ಕೆ ಭೂಷಣ
ರಂಗವಿಠಲ ನಿನ್ನ ನಾಮವತಿ ಭೂಷಣ

ಶ್ರೀ ಪಾದರಾಜರು

ಜನ್ಮ ಕರ್ಮ ಚ ಮೇ ದಿವ್ಯಂ ಏವಂ ಯೋ ವೇತ್ತಿ ತತ್ತ್ವತಃ
ತ್ಯಕ್ತ್ವಾ ದೇಹಂ ಪುನರ್ಜನ್ಮ ನೈತಿ ಮಾಮೇತಿ ಸೋಽರ್ಜುನ
(ಶ್ರೀ ಮದ್ಭಗವದ್ಗೀತೆ ಅಧ್ಯಾಯ - 4, ಶ್ಲೋಕ - 9)



ದಿವ್ಯವಾದ ನನ್ನ ಹುಟ್ಟನ್ನೂ
ಕರ್ಮವನ್ನೂ ಹೀಗೆ
ಯಥಾವತ್ತಾಗಿ ತಿಳಿದವನು
ದೇಹವನ್ನು ಬಿಟ್ಟ ಮೇಲೆ ಮತ್ತೆ
ಹುಟ್ಟನ್ನು ಹೊಂದುವುದಿಲ್ಲ.
ಅವನು ನನ್ನನ್ನು
ಪಡೆಯುತ್ತಾನೆ.

# ದಯಾಶತಕಮ್

- ಎನ್. ನರಸಿಂಹಾಚಾರ್ಯ



**ಕರುಣೇ ದುರಿತೇಷು ಮಾಮಕೇಷು ಪ್ರತಿಕಾರಾಂತರದುರ್ಜಯೇಷು ಖಿನ್ನಃ।**
**ಕವಚಾಯಿತಯಾ  ತ್ವಯೈವ ಶಾರ್ಙ್ಗೀ ವಿಜಯಸ್ಥಾನ ಮುಪಾಶ್ರಿತೋ ವೃಷಾದ್ರಿಮ್ ॥ ೨೮॥**

ಎಲ್ಲರ ಪಾಪಗಳಿಗಿಂತಲೂ ತಮ್ಮ ಪಾಪಗಳು ಅತ್ಯಧಿಕವಾದುದರಿಂದಲೂ (ಅತ್ಯಂತ ಶ್ರೇಷ್ಠರಾದುದರಿಂದ  ಇತರರಿಗೆ ದಾರಿತೋರಿಸಲು ಹಾಗೆ ಹೇಳಿಕೊಂಡಿರುವರಷ್ಟೆ? ) ಶಕ್ತಿಯುತವಾದುದರಿಂದಲೂ, ಇವುಗಳನ್ನು ಜಯಿಸುವ ವಿಚಾರದಲ್ಲಿ ಈಶ್ವರನು ಅತ್ಯಂತ ಚಿಂತಾಕ್ರಾಂತನಾಗಿ ಕೊನೆಗೆ ಒಂದು ಉಪಾಯವನ್ನು ಕಂಡು ಹಿಡಿದರೆಂದು ತಿಳಿಸುತ್ತಾರೆ. ತಮ್ಮ ಪಾಪಗಳ ವಿಷಯವಾಗಿ " ಆಪಿ ನಿಖಿಲಲೋಕ... " ಎಂಬ ಹನ್ನೆರಡನೆಯ ಪದ್ಯದಲ್ಲಿ ಹೇಳಿರುತ್ತಾರೆ. ಅಪರಾಧ ಮಾಡಿದವನಲ್ಲಿ ಪ್ರಭುವಿಗೆ ಮೊದಲು ಕೋಪವುಂಟಾಗುವುದು. ಹಾಗೆ ಅಪರಾಧವನ್ನು ಮಾಡಿದವನು ತನ್ನ ಮಗನಂತೆ ಬೇಕಾದವನಾಗಿದ್ದರೆ ಅವನು ಮಾಡಿದ ಅಪರಾಧವನ್ನು ದಂಡನೆಯಿಲ್ಲದೆ ತಪ್ಪಿಸುವುದಕ್ಕಾಗಿಯೂ ಇನ್ನು ಮುಂದೆ ಹಾಗೆ ಅಪರಾಧವನ್ನೇ ಮಾಡದಿರುವುದಕ್ಕೂ ಉಪಾಯವನ್ನು ಹುಡುಕುವುದರಲ್ಲಿ ಅವನ ಮನಸ್ಸಿನ ಕೋಪವು ಚಿಂತೆಯಾಗಿ ಪರಿಣಮಿಸುವುದು. ಅದೇ ರೀತಿಯಾಗಿ ಮುಂದೆ ೩೪ ನೇ ಪದ್ಯದಲ್ಲಿ ಪ್ರಾರ್ಥಿಸಿರುವಂತೆ ತಮ್ಮ ಪಾಪಗಳನ್ನು ಯಾವ ರೀತಿಯಿಂದಲೂ  ನಾಶವಾಗಲಾರವಾದುದರಿಂದ ಅವುಗಳನ್ನು ಜಯಿಸುವುದು ಹೇಗೆ? ಅಂದರೆ, ಅವುಗಳಿಗೆ ತಕ್ಕ ದಂಡನೆಯಿಲ್ಲದೆ ಹೇಗೆ ಕಾಪಾಡುವುದೆಂಬ ವಿಷಯದಲ್ಲಿ ಅತ್ಯಂತ ಚಿಂತೆಯುಳ್ಳವನಾಗಿಯೂ, ಶಾರ್ಙ್ಗವೆಂಬ ಬಿಲ್ಲನ್ನು ಹಿಡಿದವನಾಗಿಯೂ ಇರುವ ಪರಮಪುರುಷನು, ಅವರು (ಕವಿ) ಮಾಡುವ ಪಾಪಗಳು ಅತ್ಯಂತ ತೀಕ್ಷ್ಣವಾದ ಅಗ್ರವುಳ್ಳ ಬಾಣಗಳಂತೆ ಹೃದಯವನ್ನು ಭೇದಿಸಿ ತುಂಡರಿಸದಂತೆ ಮಾಡಿಕೊಳ್ಳುವುದಕ್ಕಾಗಿ ದಯೆಯೆಂಬ ಸುದೃಢವಾದ ಕವಚವನ್ನುತೊಟ್ಟು ಕೊಂಡು , ಅವರವರು ಬೇಡಿದ ವಿಷಯದಲ್ಲಿ ಜಯವನ್ನು ಕೊಡುವಂತಹ ಕ್ಷೇತ್ರ  ಪ್ರಭಾವವುಳ್ಳ ವೃಷಾದ್ರಿ ಎಂಬ ಪರ್ವತವನ್ನೇರಿ, ಅವರ ಪಾಪಗಳನ್ನು ಜಯಿಸುವುದಕ್ಕಾಗಿ ಸಮಯವನ್ನು ಕಾಯುತ್ತಿರುವನೆಂಬುದು ಕವಿಯ ಉತ್ಪ್ರೇಕ್ಷೆ.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ


ತಿರುಮಲೆ ತಿರುಪತಿ ದೇವಸ್ಥಾನಗಳು
ಸಚಿತ್ರ ಮಾಸಪತ್ರಿಕೆ
ಸಪ್ತಗಿರಿ

ಶ್ರೀ ವಿಳಂಬಿನಾಮ ಸಂವತ್ಸರ
ಮಾರ್ಗಶಿರ - ಪುಷ್ಯಮಾಸ
ಸಂಚಿಕೆ





ಸಂಪುಟ - 49

ಸಂಚಿಕೆ - 8


# ಜನವರಿ 2019

## ವಿಷಯಸೂಚಿಕೆ


| | |
|---|---|
| ಸಂಪಾದಕೀಯ | 6 |
| ಹಸಿರುತೋರಣ | |
| ತಿರುಮಲೆ ಸ್ವಾಮಿಯ ನಿತ್ಯ ಕಲ್ಯಾಣೋತ್ಸವ<br>- ಕೆ. ನರಸಿಂಹಮೂರ್ತಿ | 7 |
| ಕುಮಾರವ್ಯಾಸ ಜಯಂತಿ<br>- ಶ್ರೀಮತಿ. ಕೆ.ವಿ. ಪದ್ಮಾವತಿ | 13 |
| ಆರೋಗ್ಯದ ನೈವೇದ್ಯ ಬೆಲ್ಲ<br>- ಶ್ರೀಮತಿ | 15 |
| ಸಂಸ್ಕಾರ ಸಮನ್ವಿತ ಜೀವನವೃತ್ತಿ<br>- ರಾ.ನ.ನ. ಮೂರ್ತಿ | 18 |
| ಪುರಂದರ ದಾಸರ ರಚನೆಗಳಲ್ಲಿ ಬರುವ ವಂದನಾಭಕ್ತಿ<br>- ಶ್ರೀಮತಿ. ಸುಧಾಮಧುಸೂದನ್ | 20 |
| ದ್ವಂದ್ವಗಳನ್ನು ಮರೆ; ಕರ್ತವ್ಯದಲ್ಲಿ ಮೆರೆ<br>- ಡಿ.ಎಸ್. ಭೂಮಿಕ | 22 |
| ಶ್ರೀ ತ್ಯಾಗರಾಜರ ಆರಾಧನೆ<br>- ಡಾ॥ ಗುರುರಾಜ ಪೋಶೆಟ್ಟಿಹಳ್ಳಿ | 24 |
| ಸಂಕ್ರಾಂತಿ<br>-ಡಾ॥ ಎಂ.ಜಿ. ನಂದನರಾವ್ | 31 |
| ಶ್ರೀ ಆಂಡಾಳ್ ಮನೋರಥ ಶ್ರೀ ರಂಗನಾಥನ ಕಲ್ಯಾಣ ರಥ<br>- ಶ್ರೀಮತಿ. ಬಿ. ಪದ್ಮಜ | 35 |
| ಕೀಲಪಟ್ಲ ದೇವಾಲಯ<br>- ಶ್ರೀಮತಿ. ಎಸ್. ಸುರೇಖ | 41 |
| ಆರೋಗ್ಯದಲ್ಲಿ ನುಗ್ಗೇ ಕಾಯಿಯ ಮಹತ್ವ<br>- ಡಾ॥ ಸುಮಾ ಎಸ್.ಎಸ್. ಜೋಷಿ | 43 |
| ಧರ್ಮ ಪರೀಕ್ಷಣೆ<br>-ಡಿ. ಎಸ್. ಬದ್ರಿನಾಥ್ | 47 |
| ತಿರುಪತಿ ಶ್ರೀ ವೆಂಕಟೇಶ್ವರ<br>- ದಿ॥ ಬಿ.ಎನ್. ಶ್ರೀನಿವಾಸನ್ | 51 |



**ಗೌರವ ಸಂಪಾದಕರು**
ಶ್ರೀ ಅನಿಲ್‌ಕುಮಾರ್ ಸಿಂಘಾಲ್ ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ ಆರ್.ವಿ. ವಿಜಯಕುಮಾರ್, ಐ.ಎ.ಐ.ಇಡಿ.,
ಉಪಕಾರ್ಯನಿರ್ವಹಣಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ, ತಿರುಪತಿ.
ಶ್ರೀ ಪಿ. ಶಿವಪ್ರಸಾದ್ ತಿ.ತಿ.ದೇ., ತಿರುಪತಿ.
ವಿಶ್ರಾಂತಿ ಚಿತ್ರಕಾರರು

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.



| | | |
|---|---|---|
| ಬಿಡಿ ಪ್ರತಿ | ರೂ. | 05/- |
| ವಾರ್ಷಿಕ ಚಂದಾ | ರೂ. | 60/- |
| ಆಜೀವ ಚಂದಾ | ರೂ. | 500/- |

ಲೇಖನ / ಚಂದಾ
ಮಿಕ್ಕ ವಿವರಗಳಿಗೆ



ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ-517507
9866329955
0877 - 2264543

24x7 ಕೆಲಸ ಮಾಡುವ
ದೂರವಾಣಿ ಸಂಖ್ಯೆ
0877 - 2277777,
2233333,

ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@tirumala.org

ಸಲಹೆ/ದೂರುಗಳಿಗೆ ಟೋಲ್ ಫ್ರೀ
ಸಂಖ್ಯೆ:
1800 - 425 - 4141



ಸಪ್ತಗಿರಿಯಲ್ಲಿ ಪ್ರಕಟ
ವಾಗುವ ಲೇಖನಗಳಲ್ಲಿನ
ಅಭಿಪ್ರಾಯಗಳು ಸಂಪಾದಕ
ವರ್ಗದ, ಪತ್ರಿಕೆಯ, ಅಭಿ
ಪ್ರಾಯಗಳೇ ಆಗಿರಬೇಕು
ಎಂದಿಲ್ಲ. - ಸಂಪಾದಕ


ಮುಖಚಿತ್ರ - ಶ್ರೀ ಭೂದೇವಿಯರೊಂದಿಗೆ ಮಲ್ಲೆಯಪ್ಪಸ್ವಾಮಿ, (ತಿರುಮಲೆ)
ಹಿಂಬದಿಚಿತ್ರ - ಶ್ರೀ ಪದ್ಮಾವತಿ ಅಮ್ಮನವರು, (ತಿರುಚಾನೂರು)

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು **www.tirumala.org** ಮೂಲಕ ವೀಕ್ಷಿಸಬಹುದು.

## ಸಂಪಾದಕೀಯ

# ಮನಸೇ ಆನಂದನಿಲಯ

ಭಗವಂತ ನಮ್ಮವನೇ! ತಿರುಮಲೆ ಸ್ವಾಮಿಯವರ ದರ್ಶನಕ್ಕಾಗಿ ಲಕ್ಷಗಟ್ಟಲೆ ಭಕ್ತರು ದಿನನಿತ್ಯವೂ ದೂರವನ್ನು ಹಾಗೂ ಭಾರವನ್ನು ಲೆಕ್ಕಿಸದೇ ಬರುತ್ತಾರೆ. ಇವರೆಲ್ಲರೂ ಸುಲಭವಾಗಿ ದರ್ಶನವನ್ನು ಪಡೆಯಲು ತಿ.ತಿ.ದೇ.,ಯವರು ಎಷ್ಟೊಂದು ವಿಶೇಷ ಪದ್ಧತಿಗಳನ್ನೂ ಆಗಿಂದಾಗ್ಗೆ ಅನುಸರಿಸುತ್ತಿರುತ್ತಾರೆ. ಅದರಲ್ಲಿ ವಿಶೇಷವಾದುದೆಂದರೆ ಲಕ್ಕಿ ಡಿಪ್ ಮೂಲಕ ಸ್ವಾಮಿಯವರ ಸೇವೆ ಮಾಡುವ ಅವಕಾಶವನ್ನು ತಿ.ತಿ.ದೇ. ಕಲ್ಪಿಸಿದೆ.

ಆದರೆ. ತಾವಂದುಕೊಂಡಂತೆ ತಮಗೆ ಆ ಅವಕಾಶ ಸಿಗಲಿಲ್ಲವೆಂದು ಕೆಲವು ಭಕ್ತರು ನೊಂದುಕೊಳ್ಳುತ್ತಾರೆ. ಲಕ್ಕಿಡಿಪ್ ಪದ್ಧತಿಯಲ್ಲಿ ಯಾರಿಗೂ ಪ್ರತ್ಯೇಕ ಅವಕಾಶ ಕೊಡುವ ಪ್ರಮೇಯವೇ ಇಲ್ಲ. ಅವರವರ ಭಾಗ್ಯಕ್ಕೆ ಅನುಗುಣವಾಗಿ ಸ್ವಾಮಿಯವರ ಸೇವಾ ಟಿಕೆಟ್ಟುಗಳು ಲಭಿಸುತ್ತಿರುತ್ತವೆ.ನಮಗೆ ಸಿಗಲಿಲ್ಲವೆಂದು ನೊಂದು ಕೊಳ್ಳುವುದಕ್ಕಿಂತ "ನಮಗೂ ಬೇಗನೇ ನಿನ್ನ ಪೂಜಾ ಸೇವೆ ಮಾಡುವ ಭಾಗ್ಯ ಕಲ್ಪಿಸು" ಎಂದು ಸ್ವಾಮಿಯವರನ್ನು ಪ್ರಾರ್ಥಿಸುವುದೇ ಒಳ್ಳೆಯದು.ಭಗಂವತನ ಅನುಗ್ರಹವಿದ್ದರೆ ಭಗವಂತನು ನಮ್ಮ ಆಶಯವನ್ನು ಖಂಡಿತ ನೆರವೇರಿಸುತ್ತಾನೆ.

ಭಗವಂತನ ಕೃಪೆಗಾಗಿ ಎಷ್ಟೋ ಮಹರ್ಷಿಗಳು ಸಹ ಬಹಳ ವರ್ಷಗಳು ನಿರೀಕ್ಷೆ ಮಾಡಿದ್ದಾರೆ. ಭಾಗವತದಲ್ಲಿ ಗಜೇಂದ್ರನು ಸಹ 1000 ವರ್ಷ ಮಕರನೊಂದಿಗೆ ಹೋರಾಡಿದ ನಂತರ ಅಚಲ ಭಕ್ತಿಯಿಂದ ವಿಷ್ಣುವನ್ನು ಪ್ರಾರ್ಥಿಸಿದಾಗ ಸ್ವಾಮಿ ಕರುಣಿಸಿ ದ್ದಾನೆ. ಆದ್ದರಿಂದ ನಾವು ಸಹ ಸ್ವಾಮಿಯ ಕೃಪೆಗಾಗಿ ಭಕ್ತಿಯಿಂದ ಪ್ರಾರ್ಥಿಸುತ್ತಾ ನಿರೀಕ್ಷಿಸಬೇಕೇ ಹೊರತು ಅಸಹನೆ ಹೊಂದ ಬಾರದು. ಮಾನಸಿಕ ಆರೋಗ್ಯಕ್ಕೆ ಅಸಹನೆಯು ಒಳ್ಳೆಯದಲ್ಲ. ಅಸಹನೆಯಿಂದ ಭಕ್ತಿ ದೂರವಾಗುತ್ತದೆ.

ತಿರುಮಲೆಗೆ ಬರುವ ಭಕ್ತರು ಕೂಡಾ ಸಹನೆಯಿಂದ ಭಕ್ತಿಯಿಂದ ಸಂಯಮವನ್ನು ಹೊಂದಿ ಸ್ವಾಮಿಯನ್ನು ದರ್ಶಿಸಿ ಆತನ ಕೃಪೆಗೆ ಪಾತ್ರರಾಗಬೇಕು. ಸ್ವಇಚ್ಛೆಯಿಂದ ಇತರ ಭಕ್ತರು ಸ್ವಾಮಿಯನ್ನು ಕಣ್ಣಾರೆ ದರ್ಶಿಸಲು ಅವಕಾಶ ನೀಡುತ್ತಾ ಕ್ಯೂಲೈನ್ ಪದ್ಧತಿಗೆ ಭಂಗ ಮಾಡದೆಯೇ, ನೂಕು ನುಗ್ಗಲು ಮಾಡದೆಯೇ ಪ್ರಶಾಂತವಾಗಿ ಎಲ್ಲರೂ ದರ್ಶಿಸುವುದಕ್ಕೆ ಸಹಕರಿಸ ಬೇಕಾದ ಅನಿವಾರ್ಯತೆ ಇದೆ.

ಲಕ್ಷಗಟ್ಟಲೆ ಭಕ್ತರು ಸರದಿಯಲ್ಲಿ ಬರುತ್ತಿರುವಾಗ ನಾವು ಮಾತ್ರ ಬಹಳ ಹೊತ್ತು ಸ್ವಾಮಿಯವರನ್ನು ದರ್ಶಿಸಬೇಕೆಂದು ಅಲ್ಲಿಯೇ ನಿಂತರೆ ನಂತರ ಬರುವ ಭಕ್ತರಿಗೆ ಅವಕಾಶ ಸಿಗುವುದಿಲ್ಲ. ಒಂದು ಕ್ಷಣಕಾಲ ಭಗವಂತನನ್ನು ಕಣ್ತುಂಬ ಭಕ್ತಿಯಿಂದ ದರ್ಶಿಸಿದರೆ ಆ ಮಧುರ ಕ್ಷಣವು ಎಷ್ಟು ವರ್ಷವಾದರೂ ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲುತ್ತದೆ. ಆ ರೂಪವನ್ನು ಮನಸ್ಸಿನ ನೇತ್ರಗಳಲ್ಲಿ ದರ್ಶಿಸುತ್ತಾ ಯಾತ್ರೆಯ ಸಂಪೂರ್ಣಫಲ ಪಡೆಯಬೇಕು.

ಪೂರ್ವಯುಗಗಳಲ್ಲಿ ತಪೋಸಕ್ತರಾದ ಋಷಿಗಳು ಭಗವಂತನ ದರ್ಶನಾನುಗ್ರಹಕ್ಕಾಗಿ ಯುಗಗಳ ಪರ್ಯಂತ ತಪಸ್ಸು ಮಾಡುತ್ತಿದ್ದರು. ಆದರೆ ಕಲಿಯುಗ ವಾಸಿಗಳಾದ ನಮ್ಮ ಅದೃಷ್ಟದ ಫಲವಾಗಿ ಯಾವ ತಪಸ್ಸು ಇಲ್ಲದೆಯೇ ಅಂದು ಕೊಂಡಾಕ್ಷಣ ತಿರುಮಲೆಗೆ ಬಂದು ಕೆಲವು ಗಂಟೆಗಳಲ್ಲಿಯೇ ಆ ಪರಂಧಾಮನನ್ನು ದರ್ಶಿಸುವ ಅತ್ಯುನ್ನತ ಅವಕಾಶ ನಮಗೆ ಸಿದ್ಧಿಸಿದೆ. ಇದು ಕಲಿಯುಗದ ಮಹಿಮೆ. ಕಲಿಯುಗ ವಾಸಿಗಳು ಮನಸಾರೆ ಭಕ್ತಿಯಿಂದ ಕೆಲವು ಕ್ಷಣಗಳು ಸ್ವಾಮಿಯನ್ನು ಪ್ರಾರ್ಥಿಸಿದ ಕ್ಷಣವೇ ಸ್ವಾಮಿಯವರ ಅನುಗ್ರಹ ಲಭಿಸುತ್ತದೆ. ಇದು ಈ ಯುಗದ ವೈಶಿಷ್ಟ್ಯತೆ.

ಮೇಲಿನ ವಿಷಯವನ್ನು ಗಮನಿಸಿ ಭಕ್ತರು ನಿರಾಶೆ, ನಿಸ್ಪೃಹತೆ ಹಾಗೂ ಅಸಹನೆ ಪಡದೇ ಭಕ್ತಿಯಿಂದ ಸಹನೆಯಿಂದ ಆನಂದ ನಿಲಯನನ್ನು ದರ್ಶಿಸಲು ಸಹಕರಿಸಿ! ಅದರ ಮೂಲಕ ಮನಸ್ಸನ್ನೂ ಆನಂದಮಯ ಮಾಡಿಕೊಳ್ಳಿ!!

# ತಿರುಮಲೆ ಸ್ವಾಮಿಯ ನಿತ್ಯ ಕಲ್ಯಾಣೋತ್ಸವ



- ಮೂಲ: ಡಾ॥ ಎನ್. ನರಸಿಂಹಚಾರ್ಯ
- ಅನುವಾದ: ಕೆ. ನರಸಿಂಹಮೂರ್ತಿ

ಶ್ರೀನಿವಾಸನು ನಿತ್ಯಕಲ್ಯಾಣ ಚಕ್ರವರ್ತಿ: ನಿತ್ಯೋತ್ಸವ ಮೂರ್ತಿ ಶ್ರೀ ವೆಂಕಟೇಶ್ವರ ಸ್ವಾಮಿಯವರಿಗೆ ನಿತ್ಯವೂ ಕಲ್ಯಾಣೋತ್ಸವವು ಜರಗುತ್ತದೆ.

ಸ್ವಾಮಿಗೆ ಜರಗುವ ನಿತ್ಯೋತ್ಸವಗಳಲ್ಲಿ ಅತ್ಯಂತ ಪ್ರಮುಖವಾದುದು ನಿತ್ಯ ಕಲ್ಯಾಣೋತ್ಸವವು. ಪ್ರತಿ ದಿನ ಸಂಪಂಗಿ ಪ್ರಾಕಾರದಲ್ಲಿರುವ ನಿತ್ಯಕಲ್ಯಾಣೋತ್ಸವ ಮಂಟಪದಲ್ಲಿ ಜರಗುವ ಈ ಕಲ್ಯಾಣೋತ್ಸವದಲ್ಲಿ ಸಾವಿರಾರು ಮಂದಿ ಗೃಹಸ್ಥರು ಪಾಲ್ಗೊಳ್ಳುತ್ತಾರೆ. ವಿಶೇಷ ಉತ್ಸವಗಳಿರುವ ದಿನಗಳನ್ನು ಹೊರತು ಪಡಿಸಿ ಕಲ್ಯಾಣೋತ್ಸವ ಪ್ರತಿನಿತ್ಯ ಸಲ್ಲುವ ಸೇವೆಯೇ ಆಗಿದೆ. ಆದ್ದರಿಂದಲೇ ಶ್ರೀನಿವಾಸನು ನಿತ್ಯಕಲ್ಯಾಣ ಚಕ್ರವರ್ತಿಯಾಗಿದ್ದಾನೆ.

### ಶ್ರೀ ವೇಂಕಟೇಶ್ವರ ಸ್ವಾಮಿಯವರ ಕಲ್ಯಾಣೋತ್ಸವ

ಭಗವಂತನ ಕಲ್ಯಾಣೋತ್ಸವದಂಥಹ ಕಾರ್ಯಕ್ರಮಗಳು ಮುಖ್ಯವಾಗಿ ನಮ್ಮ ಯೋಗಕ್ಷೇಮಕ್ಕಾಗಿಯೇ ನಿರ್ವಹಿಸಲಾಗುತ್ತದೆ.ಸುಯೋಗವೆಂದರೆ ಹೊಸತಾಗಿ ಬರುವುದು - ಅಂದರೆ ಸಂತಾನವಿಲ್ಲದವರಿಗೆ ಸಂತಾನವುಂಟಾದರೆ ಅದು ಸಂತಾನಯೋಗ. ವಾಹನವಿಲ್ಲದವರು ವಾಹನ ಖರೀದಿಸಿದರೆ ಅದು ವಾಹನಯೋಗವು. ಕ್ಷೇಮವೆಂದರೆ ಇದ್ದದ್ದು ಹಾಗೆಯೇ ಸುರಕ್ಷಿತವಾಗಿರುವುದು ಸಾಮಾನ್ಯವಾಗಿ ಲೋಕದಲ್ಲಿ ಜನ ತಮ್ಮಲ್ಲಿ ಎನಿಲ್ಲವೋ ಅದನ್ನು ಪಡೆಯಬೇಕೆಂದು ಬಯಸುತ್ತಾರೆ. ಇದ್ದದ್ದು ಹಾಗೆಯೇ ಇರಬೇಕೆಂದು ಆಶಿಸುತ್ತಾರೆ.ಆ ಯೋಗಕ್ಷೇಮಗಳೆರಡೂ ಕೂಡಾ ಭಗವತ್ ಕಲ್ಯಾಣದಿಂದ ಸಿದ್ಧಿಸುತ್ತವೆ.

### ಕಲ್ಯಾಣವೆಂದರೆ?

"ಕಲ್ಯಾಣ" ಎನ್ನುವ ಪದಕ್ಕೆ ಅರ್ಥವನ್ನು ಒಮ್ಮೆ ಪರಿಶೀಲಿಸಿದರೆ 'ಕಲ್ಯಂ ಸುಖಂ ನಯತಿ ಪ್ರಾಪಯತಿ'- ಇತಿ ಕಲ್ಯಾಣಂ ಸುಖವನ್ನು ಒದಗಿಸುವುದೇ ಕಲ್ಯಾಣ ಎಂಬುದು ಅರ್ಥ. ಈ ಕಲ್ಯಾಣವನ್ನು ವಿವಾಹ, ಉದ್ವಾಹ, ಪರಿಣಯ ಪಾಣಿಗ್ರಹಣ ಮೊದಲಾದ ಅನೇಕ ಹೆಸರುಗಳಿಂದ ವ್ಯವಹರಿಸುತ್ತಾರೆ.ಜಾನಪದರು ತೆಲುಗು ಭಾಷೆಯಲ್ಲಿ ಮದುವೆ, ವಿವಾಹವೆಂದೂ ಕನ್ನಡದಲ್ಲಿ 'ಲಗ್ನ' 'ಮದುವೆ' ಎಂದೂ ತಮಿಳಿನಲ್ಲಿ 'ತಿರುವಣಂ' ಎಂದು ಕರೆಯುತ್ತಾರೆ.

ವಾಸ್ತವದಲ್ಲಿ ಪದ್ಮಾವತಿ - ಶ್ರೀನಿವಾಸರ ಕಲ್ಯಾಣವು 5 ಸಾವಿರ ವರ್ಷಗಳಿಂದೆಯೇ ನಡೆದಿದೆ. ನಾವು ಜರುಗಿಸುವ ಕಲ್ಯಾಣವೇನೂ ಆತನಿಗೆ ಅವಶ್ಯವಿಲ್ಲ. ಆದರೆ ನಮ್ಮ ಯೋಗಕ್ಷೇಮಕ್ಕಾಗಿ ಆತನ ಕಲ್ಯಾಣೋತ್ಸವವನ್ನು ನಿರ್ವಹಿಸುತ್ತಿದ್ದೇವೆ.



ತಿರುಮಲೆಯಲ್ಲಿ ಶ್ರೀ ವೇಂಕಟೇಶ್ವರಸ್ವಾಮಿಯ ಉತ್ಸವ ಮೂರ್ತಿಗಳಾದ ಶ್ರೀದೇವಿ,ಭೂದೇವಿ ಸಮೇತ ಮಲೆಯಪ್ಪಸ್ವಾಮಿಗೆ ಪ್ರತಿನಿತ್ಯ ಅಭಿಜಿತ್‌ಲಗ್ನದಲ್ಲಿ ಜರಗುವ ಕಲ್ಯಾಣ ಮಹೋತ್ಸವಕ್ಕೆ ಸಾವಿರಾರು ಗೃಹಸ್ಥರು ಹಾಜರಾಗುತ್ತಾರೆ.

### ಶ್ರೀನಿವಾಸ ಕಲ್ಯಾಣದ ಪೌರಾಣಿಕ ಹಿನ್ನೆಲೆ

ಹಿಂದೆ ಒಂದು ಸಾರಿ ಮಹರ್ಷಿಗಳಿಗೆ "ಮೋಕ್ಷವನ್ನು ಅನುಗ್ರಹಿಸಬಲ್ಲ ದೇವತೆಯಾರು? ಎಂಬ ಸಂದೇಹವುಂಟಾಗಿದೆ. ಋಷಿಗಳ ಕೋರಿಕೆ ಮೇರೆಗೆ ಭೃಗುಮಹರ್ಷಿ ತ್ರಿಲೋಕಗಳನ್ನು ಸಂಚರಿಸಿ ಬ್ರಹ್ಮ, ವಿಷ್ಣು ಮಹೇಶ್ವರರನ್ನು ಪರೀಕ್ಷಿಸಿದ್ದಾನೆ. ಕಟ್ಟ ಕಡೆಗೆ ವಿಷ್ಣುವೇ ಆ ಮೋಕ್ಷದಾತನೆಂದು ನಿಗದಿಸಿದ್ದಾನೆ. ಈ ಪರೀಕ್ಷಾ ಪ್ರಕ್ರಿಯೆಯಲ್ಲಿ ಶ್ರೀಮಹಾವಿಷ್ಣುವಿನ ವಕ್ಷಃಸ್ಥಳವನ್ನು ಕಾಲಲ್ಲಿ ಹೊದೆದ ಭೃಗುವಿನ ಮೇಲೆ ಕೋಪಗೊಂಡ ಲಕ್ಷ್ಮಿದೇವಿ ವೈಕುಂಠವನ್ನು ತೊರೆದು ಭೂಲೋಕಕ್ಕೆ ಬಂದಿಳಿದಿದ್ದಾಳೆ. ಆಕೆಯನ್ನು ಅನ್ವೇಷಿಸುತ್ತಾ ಬಂದ ನಾರಾಯಣನು ಶ್ರೀನಿವಾಸನಾಗಿ ವೇಷಧರಿಸಿ ವಕುಳ ಮಾತೆಯನ್ನು ಆಶ್ರಯಿಸಿದ್ದಾನೆ. ದ್ವಾಪರಯುಗದಲ್ಲಿ ಶ್ರೀಕೃಷ್ಣನ ವಿವಾಹವನ್ನು ನೋಡುವ ಸೌಭಾಗ್ಯವನ್ನು ಪಡೆಯದೇ ಆ ಭಾಗ್ಯವನ್ನು ಕಲಿಯುಗದಲ್ಲಿ ತೀರಿಸಿಕೊಳ್ಳಲು ಜನಿಸಿದ ಯಶೋದಾದೇವಿಯೇ ಈ ವಕುಳಾಮಾತೆ.


ನಾರಾಯಣವನದಲ್ಲಿ ಆಕಾಶರಾಜನು ಸಂತಾನ ವಿಹೀನವಾಗಿ ಸಂತಾನಾರ್ಥವಾಗಿ ಯಾಗವನ್ನು ಮಾಡಲು ಸಂಕಲ್ಪಿಸಿ ಭೂಮಿಯನ್ನು ಶುದ್ಧಿ ಮಾಡಲು ನೇಗಲಿನಿಂದ ಉಳುತ್ತಿರುವಾಗ ಆ ಬಯಲಿನಿಂದ ಒಂದು ಸ್ವರ್ಣಪೆಟ್ಟಿಗೆ ದೊರೆಯುತ್ತದೆ. ಅದ ರೊಳಗೆ ವಿಕಸಿತ ಕಮಲದ ಮೇಲೆ ಮುದ್ದಾದ ಹಸಿಗೂಸಾಗಿ ಮಹಾಲಕ್ಷ್ಮಿ ಆವಿರ್ಭವಿಸುತ್ತಾಳೆ ಆಕೆಯೇ ಪದ್ಮಾವತಿ.

ಪದ್ಮಾವತಿದೇವಿ ಬೆಳೆದು ದೊಡ್ಡವಳಾಗಿ ತಾರಣ್ಯವನ್ನು ಹೊಂದಿ ತನ್ನ ಸೋದರಿ ಸಖಿಯರೊಂದಿಗೆ ಕ್ರೀಡಾವನದಲ್ಲಿ ಕ್ರೀಡಿಸುತ್ತಿರಲು ಆಕಸ್ಮಿಕವಾಗಿ ಮದಗಜವೊಂದು ಅವರನ್ನು ಅಟ್ಟಿಸಿಕೊಂಡು ಬಂದಿದೆ. ಅದೇ ಸಮಯಕ್ಕೆ ಸರಿಯಾಗಿ ವಕುಳಮಾತೆಯ ಆಶ್ರಮದಲ್ಲಿದ್ದ ಶ್ರೀ ವೈಕುಂಠ ವಿರಕ್ತನಾದ ಶ್ರೀಮನ್ನಾರಾಯಣನು **'ಶ್ರೀನಿವಾಸ'** ನೆಂಬ ನಾಮಧೇಯದಿಂದ ಪದ್ಮಾವತಿಯನ್ನು ಸಮೀಪಿಸಿ ಮದಗಜವನ್ನು ಬೆಂಡೆತ್ತಿದ್ದಾನೆ. ಈ ಸಂದರ್ಭದಲ್ಲಿ ಪದ್ಮಾವತಿ ಶ್ರೀನಿವಾಸರು ಒಬ್ಬರ ಸೌಂದರ್ಯ ಕ್ಕೊಬ್ಬರು ಮಾರುಹೋಗಿ ಲೋಕವನ್ನು ಮರೆಯುತ್ತಾರೆ. ಶ್ರೀನಿವಾಸನು ಪದ್ಮಾವತಿಯ ವಿವರಗಳನ್ನು ಕೇಳಲಾಗಿ ರೊಚ್ಚಿಗೆದ್ದ ಬಾಲೆಯರು ಆತನ ಮೇಲೆ ಆತನ ತುರಗದ ಮೇಲೆ ಕಲ್ಲುಗಳ ಮಳೆಯನ್ನೇ ಸುರಿಯುತ್ತಾರೆ. ಶ್ರೀನಿವಾಸನನ್ನೇ ತದೇಕ ದೃಷ್ಟಿಯಿಂದ ನೋಡುತ್ತಾ ನಿಂತ ಪದ್ಮಾವತಿಯನ್ನು ಸಖಿಯರು ಅಂತಃಪುರಕ್ಕೆ ಕರೆದೊಯ್ಯುತ್ತಾರೆ.

ಅಂದಿನಿಂದ ಇಬ್ಬರೂ ವಿರಹವೇದನೆಗೊಳಗಾಗುತ್ತಾರೆ. ಪದ್ಮಾವತಿಯ ತಾಯಿ ಧರಣಿದೇವಿ ವಿಷಯವನ್ನು ತಿಳಿದುಕೊಂಡು ಪದ್ಮಾವತಿಯನ್ನು ಸಮಾಧಾನಗೊಳಿಸುತ್ತಾಳೆ.

ಇನ್ನೊಂದು ಕಡೆ ಶ್ರೀನಿವಾಸನು ವಕುಳಾದೇವಿಗೆ ವಿಷಯವನ್ನು ತಿಳಿಸಿ ಆಕಾಶರಾಜ - ಧರಣೀದೇವಿಯ ಕುಮಾರಿಯಾದ ಪದ್ಮಾವತಿಯಲ್ಲಿ ತನ್ನ ವಿವಾಹ ಪ್ರಸ್ತಾಪವನ್ನು ಮಾತಾಡಿ ಬರಲು ಒಪ್ಪಿಸಿ ಕಳಿಸುತ್ತಾನೆ.

ಈ ಕಾರ್ಯವನ್ನು ವಕುಳಾಮಾತೆ ನಿರ್ವಹಿಸಬಲ್ಲಳೋ ಇಲ್ಲವೋ ಎನ್ನುವ ಸಂಶಯದಿಂದ ತಾನೇ ಒಂದು ಕೊರವಂಜಿ ರೂಪವನ್ನು ಧರಿಸಿ ಧರಣಿದೇವಿ ಅಂತಃಪುರದ ಬಳಿ ಭವಿಷ್ಯವಾಣಿ ನುಡಿಯುವಂತೆ ನಟಿಸುತ್ತಾ ಇರಲು,ಧರಣಿದೇವಿ ಸಂಕಷ್ಟ







ವನ್ನು ತಿಳಿಸಿ ಪದ್ಮಾತಿಯ ಅನಾರೋಗ್ಯ ಸ್ಥಿತಿಯನ್ನು ವಿವರಿಸಿ ನಿಜದಲ್ಲಿ ನಡೆದ ವಿಷಯವೇನೆಂದು ತಿಳಿಸಲು ಒಳ ಕರೆದೊಯ್ಯುತ್ತಾಳೆ.

ಧರಣಿದೇವಿ ಪದ್ಮಾವತಿಯನ್ನು ತೋರಿಸಿ ಆಕೆಯ ಅನಾರೋಗ್ಯಕ್ಕೆ ಕಾರಣವೇನೆಂದು ಕೇಳಲು "ಈಕೆ ಶ್ರೀನಿವಾಸನಲ್ಲಿ ಅನುರಕ್ತಳಾಗಿದ್ದಾಳೆ. ಆತನಿಗೆ ಕೊಟ್ಟು ಮದುವೆ ಮಾಡದಿದ್ದಲ್ಲಿ ನಿನ್ನ ಮಗಳು ನಿನಗೆ ಸಿಗುವುದಿಲ್ಲ. ಈ ವಿವಾಹ ಪ್ರಸ್ತಾಪಕ್ಕೆಂದೇ ಶೀಘ್ರದಲ್ಲಿ ಅವನ ತಾಯಿ ಇಲ್ಲಿಗೆ ಬರಲಿದ್ದಾಳೆ" ಎಂದು ಹೇಳಿ ಅಲ್ಲಿಂದ ಹೊರಟು ಹೋಗಿದ್ದಾಳೆ.

ತದನಂತರ ವಕುಳಮಾತೆ ಧರಣಿದೇವಿ - ಆಕಾಶರಾಜರೊಂದಿಗೆ ಪದ್ಮಾವತಿ - ಶ್ರೀನಿವಾಸರ ಮದುವೆಯ ವಿಷಯ ಪ್ರಸ್ತಾಪಿಸಲು ಅವರು ತಮ್ಮ ಸಮ್ಮತಿಯನ್ನು ಅರಹುತ್ತಾರೆ. ವಕುಳಮಾತೆ ಆಶ್ರಮಕ್ಕೆ ಹಿಂತಿರುಗಿ ಶ್ರೀನಿವಾಸನಿಗೆ ಶುಭವಾರ್ತೆಯನ್ನು ತಿಳಿಸಿದ್ದಾಳೆ. ಆದರೆ ಮಹಾರಾಜರೊಂದಿಗಿನ ಸಂಬಂಧವಾದ್ದರಿಂದ ವಿವಾಹದ ಖರ್ಚಿನ ಬಗ್ಗೆ ವಕುಳಮಾತೆ ಪ್ರಸ್ತಾಪವೆತ್ತಿದ್ದಾಳೆ. ಶ್ರೀನಿವಾಸನು ಅಲಕಾಪುರಾಧೀಶನಾದ ಕುಬೇರನನ್ನು ಕೇಳಲಾಗಿ ಕುಬೇರನು ವಿವಾಹಕ್ಕೆ ಬೇಕಾದ ಧನಸಹಾಯ ಮಾಡಿದ್ದಾನೆ. ಕಲಿಯುಗದ ಕಾರಣದಿಂದಾಗಿ ಕುಬೇರನು ಶ್ರೀನಿವಾಸನಿಗೆ ಪತ್ರವನ್ನು ಬರೆದುಕೊಡಬೇಕೆಂದು ಕೋರಲಾಗಿ ಶ್ರೀನಿವಾಸನು ಕುಬೇರನಿಗೆ ಪತ್ರವನ್ನು ಬರೆದುಕೊಟ್ಟಿದ್ದಾನೆ. ಅದರಲ್ಲಿ ವೇಂಕಟಾಚಲದ ಮೇಲೆ ನೆಲೆಸಿರುವವರೆಗೂ ತನಗೆ ಭಕ್ತರು ಸಲ್ಲಿಸುವ ಕಾಣಿಕೆಗಳನ್ನೆಲ್ಲಾ ಯುಗಾಂತದವರೆಗೆ ಬಡ್ಡಿಯಾಗಿ ಕೊಡುವೆನೆಂದು ಶ್ರೀನಿವಾಸನು ತಿಳಿಸಿ ಕೊಟ್ಟಿದ್ದಾನೆ.

ದೇವಗುರುವಾದ ಬೃಹಸ್ಪತ್ಯಾಚಾರ್ಯರು
ಶ್ರುತ್ವಾಬ್ರಾವೀ ತ್ಸ ಧಿಷಣ ಸ್ತಯೋ ರುತ್ತರಫಲ್ಗುನಿ
ಸಮ್ಮತಾಸುಖ ವೃದ್ಧ್ಯರ್ಥಂ ಪ್ರಾಚ್ಯತೇ ದೈವಚಿಂತಕೈ ಃ
ತಯೋ ರುತ್ತರಫಲ್ಗುನ್ಯಾ ವಿವಾಹಃ ಕ್ರಿಯತಾ ಮಿತಿ
ವೈಶಾಖಮಾಸೇ ವಿಧಿವತ್ ಕ್ರಿಯತಾ ಮಿತಿ ಸೋಬ್ರಾವಿತ್॥

ಅರ್ಥಾತ್ ವೈಶಾಖಮಾಸ ಉತ್ತರಫಲ್ಗುಣಿ ನಕ್ಷತ್ರ ಶುಭಮುಹೂರ್ತವನ್ನು ಪದ್ಮಾವತಿ - ಶ್ರೀನಿವಾಸರ ಅಭಿವೃಧಿಕಾರಕವಾದ ಪರಿಣಯ ಮುಹೂರ್ತವನ್ನಾಗಿ ನಿಶ್ಚಯಿಸಿದ್ದಾರೆ.

ಬೃಹಸ್ಪತ್ಯಾಚಾರ್ಯರು ನಿಶ್ಚಯಿಸಿದ ಶುಭ ಮುಹೂರ್ತ ವಿಷಯವನ್ನು ಸಕಲದೇವತೆಗಳಿಗೂ ತಿಳಿಸಿ, ವಿವಾಹಕ್ಕೆ ಬರುವುದಾಗಿ ಶ್ರೀನಿವಾಸನು ಗರುಡನ ದ್ವಾರ ಆಹ್ವಾನವನ್ನು ಕಳಿಸಿದ್ದಾನೆ.

ಬ್ರಹ್ಮರುದ್ರಾದಿ ಸಕಲದೇವತಾ ಪರಿವಾರ ಸಮೇತವಾಗಿ ಶ್ರೀನಿವಾಸನು ಆಕಾಶರಾಜ ಏರ್ಪಾಟು ಮಾಡಿದ ವಿವಾಹ ವೇದಿಕೆಯಾದ ನಾರಾಯಣವನಕ್ಕೆ ನವ ವರನಾಗಿ ಸಕಲ ಮಂತ್ರ, ಪುರೋಹಿತ, ದಂಡನಾಯಕ ಸಪರಿವಾರ ಸಮೇತವಾಗಿ ಶ್ರೀನಿವಾಸನು ಬರಲು ಆಕಾಶರಾಜ ಎದುರುಗೊಂಡು ಮದುಮಗನನ್ನು ಸ್ವಾಗತಿಸಿದ್ದಾನೆ.

ಹಸೆಮಣೆಯ ಮೇಲೆ ವಧುವರರು ಆಸೀನರಾಗಲು ಬೃಹಸ್ಪತ್ಯಾಚಾರ್ಯರು ಸಕಲ ಮುನಿಗಣ ಸಮೇತರಾಗಿ ವೇದ ಮಂತ್ರಗಳನ್ನು ಉಚ್ಚರಿಸಿದ್ದಾರೆ. ಸಾಕ್ಷಾತ್ ಶ್ರೀಮನ್ನಾರಾಯಣ ಸ್ವರೂಪನಾದ ಶ್ರೀನಿವಾಸನಿಗೆ ಸಾಕ್ಷಾತ್ ಶ್ರೀ ಮಹಾಲಕ್ಷ್ಮಿ ಸ್ವರೂಪಿಣಿಯಾದ ಪದ್ಮಾವತಿಯನ್ನು ಆಕಾಶರಾಜ ಧರಣಿ ದೇವಿಯರು ಕನ್ಯಾದಾನ ಮಾಡಿದ್ದಾರೆ. ಸಕಲ ಲೋಕಗಳು



ಆನಂದ-ಹರ್ಷಾತಿರೇಕಗೊಂಡಿರಲು ಸಕಲ ದೇವಗಣ ಸಾಕ್ಷಿಯಾಗಿ ಶ್ರೀನಿವಾಸನು ಜಗನ್ಮಾತೆಯಾದ ಪದ್ಮಾವತಿ ದೇವಿಗೆ ಮಾಂಗಲ್ಯ ಧಾರಣೆಯನ್ನು ಮಾಡಿದ್ದಾನೆ.

ಇದು ಪುರಾಣಾಂತರ್ಗತವಾದ ಪದ್ಮಾವತಿ ಶ್ರೀನಿವಾಸ ಕಲ್ಯಾಣವು.

### ಶ್ರೀನಿವಾಸ ಕಲ್ಯಾಣ - ಚಾರಿತ್ರಿಕ ಹಿನ್ನೆಲೆ

ಶ್ರೀವೇಂಕಟೇಶ್ವರನ ಪರಮ ಭಕ್ತೆಯಲ್ಲೊಬ್ಬಳಾದ ತರಿಗೊಂಡ ವೆಂಗಮಾಂಬ ಪದ್ಮಾವತಿ - ಶ್ರೀನಿವಾಸರ ವಿವಾಹ ಮುಹೂರ್ತವನ್ನು "ಸುರುಚಿರ ವೈಶಾಖ ಶುಕ್ಲದಶಮಿ ಶುಕ್ರವಾರದಂದು ಶುಭಮುಹೂರ್ತ" ಎಂದು ತನ್ನ ವೇಂಕಟಾಚಲ ಮಹಾತ್ಮೆಯಲ್ಲಿ ಹೇಳಿದ್ದಾರೆ. ಸುಮಾರು ಐದು ಸಾವಿರ ವರ್ಷಗಳ ಹಿಂದೆ ಕಲಿಯುಗಾರಂಭದಲ್ಲಿ ಜರುಗಿದ ಪದ್ಮಾವತಿ - ಶ್ರೀನಿವಾಸರ ಕಲ್ಯಾಣ ಮಹೋತ್ಸವ ಕಾರ್ಯಕ್ರಮವನ್ನು ಕ್ರಿ.ಶ. 15 ನೇ ಶತಮಾನದವರೆಗೂ ತಿರುಮಲೆಯಲ್ಲಿ ವಿಶೇಷ ದಿನಗಳಂದೂ ಬ್ರಹ್ಮೋತ್ಸವಗಳಲ್ಲಿ ಮಾತ್ರವೇ ಜರುಗಿಸಲಾಗುತ್ತಿತ್ತು.

ನಂದಕಾಂಶ ಸಂಭೂತನೂ, ಪದಕವಿತ ಮಹಾನ್ ಪಿತಾಮಹನೂ, ಶ್ರೀನಿವಾಸನ ಪರಮಭಕ್ತನಾದ ತಾಳ್ಳಪಾಕ ಅನ್ನಮಾಚಾರ್ಯರು ತಿರುಮಲೆಗೆ ಬಂದಾಗ ಸ್ವಾಮಿಯ ಕಲ್ಯಾಣೋತ್ಸವವನ್ನು ಪ್ರಾರಂಭಿಸುವುದೊಂದೇ ಅಲ್ಲದೇ ತಾನೇ ಸ್ವತಃ ಕನ್ಯಾದಾತನೆಂದೂ ಸಹ ವ್ಯವಹರಿಸುತ್ತಿದ್ದರು. ಆದರೆ ವೇಂಕಟೇಶ್ವರ ಸ್ವಾಮಿಯವರದು ಭಾರದ್ವಾಜ ಗೋತ್ರ ಅನ್ನಮಾಚಾರ್ಯರದ್ದು ಸಹಾ ಭಾರದ್ವಾಜ ಗೋತ್ರವೇ ಸ್ವಗೋತ್ರವಾದರೂ ತಾಯಿಯ ಪಕ್ಷವಹಿಸಿ ಸ್ವಯಂ ತಾನೇ ಆಕಾಶರಾಜನ ಸ್ಥಾನದಲ್ಲಿ ನಿಂತು ಕನ್ಯಾದಾನ ಮಾಡುವುದನ್ನು ಸ್ವಯಂ ಭಗವಂತನೇ ತಮಗೆ ಹೆಚ್ಚು ಮಹಾಭಾಗ್ಯವೆಂದು ಭಾವಿಸುತ್ತಿದ್ದರು. ಆನಂದನಿಲಯನು ನಿತ್ಯ ಮದುಮಗನಾದರೆ ಅನ್ನಮಾಚಾರ್ಯರು ನಿತ್ಯ ಕನ್ಯಾದಾತರು. ಇದೇ ಸಂಪ್ರದಾಯವನ್ನು ಅನುಸರಿಸುತ್ತಾ ಇಂದಿಗೂ ತಿರುಮಲೆಯಲ್ಲಿ ಜರಗುವ ಶ್ರೀನಿವಾಸನ ನಿತ್ಯ ಕಲ್ಯಾಣೋತ್ಸವದಲ್ಲಿ ಅನ್ನಮಾಚಾರ್ಯರ ವಂಶಸ್ಥರೇ ಕನ್ಯಾದಾತರಾಗಿ ವ್ಯವಹರಿಸುತ್ತಾ ಪ್ರಮುಖ ಪಾತ್ರವಹಿಸುತ್ತಾರೆ.

ಜಗತ್ಕಲ್ಯಾಣ ಚಕ್ರವರ್ತಿಯಾದ ಶ್ರೀ ವೇಂಕಟೇಶ್ವರ ಸ್ವಾಮಿಯ ನಿತ್ಯಕಲ್ಯಾಣ ಇಂದಿಗೂ ನಿರ್ವಿಘ್ನವಾಗಿ ಸಾಗುತ್ತಾ ಆ ಮೂಲಕ ಶ್ರೀನಿವಾಸ ಮಹಾಪ್ರಭುವಿನ ಕೃಪಾಕಟಾಕ್ಷ ಹೊಂದಲು ಅತ್ಯಂತ ಶುಭಪ್ರದವಾದ, ವಿಶೇಷ ಸೇವೆಯಾಗಿ ಇಂದಿಗೂ ಭಕ್ತಿ ಲೋಕದಲ್ಲಿ ಗುರುತು ಮಾಡುತ್ತದೆ. ಅನ್ನಮಾಚಾರ್ಯರ ತದನಂತರ ತಾಳ್ಳಪಾಕ ವಂಶಸ್ಥರು ಶ್ರೀನಿವಾಸಕಲ್ಯಾಣ ನಿಮಿತ್ತ ಅನೇಕ ಗ್ರಾಮಗಳು ಅಗ್ರಹಾರಗಳು, ಮುಂತಾದುವುಗಳನ್ನು ಪಡೆದುದಾಗಿ ಶಾಸನಗಳು ಈ ಮೂಲಕ ತಿಳಿಸಿಕೊಡುತ್ತದೆ.

ತಿರುಮಲೆಯ ಶ್ರೀ ವೇಂಕಟೇಶ್ವರ ಸ್ವಾಮಿಯ ಕಲ್ಯಾಣೋತ್ಸವದ ಚರಿತ್ರೆ ಮೊದಲುಗೊಂಡುದಾದರೂ ಹೇಗೆ?

ತಾಳ್ಳಪಾಕ ಅನ್ನಮಾಚಾರ್ಯರ ಮಗನು ದೊಡ್ಡ ತಿರುಮಲಾಚಾರ್ಯ ಅವರ ಮಗನ ಹೆಸರು ತಿರುವೆಂಕಟನಾಥನ್ ಇವರನ್ನು ಚಿಕ್ಕಯ್ಯ ಎಂದೂ ಕೂಡಾ ಕರೆಯುತ್ತಾರೆ. ಕೊಂಡವೀಟಿ ಸೆಂದಲೂರು, ಪ್ರಾಂತ್ಯಕ್ಕೆ ಸೇರಿದ ಮಲ್ಲವರ ಗ್ರಾಮದಿಂದ ಬರುವ 120 ವರಹಗಳ (ಶ್ರೀಸ್ವಾಮಿಯ ಕಲ್ಯಾಣೋತ್ಸವಕ್ಕೆ ತಗಲುವ ಖರ್ಚು) ನ್ನು ದೇವಾಲಯದ ಕೋಶಕ್ಕೆ ಸೇರುವಂತೆ ಏರ್ಪಾಟು ಮಾಡಿದ್ದಾರೆ. ಕಲ್ಯಾಣೋತ್ಸವ ಪ್ರಾರಂಭವಾದಾಗ ಕೇವಲ ಐದು ದಿನಗಳು ಮಾತ್ರವೇ ನಿರ್ವಹಿಸಲಾಗಿದೆ. ಈ ಐದು ದಿನಗಳಲ್ಲಿ ದೇವತೆಗಳಿಗೆ ಪ್ರತ್ಯೇಕವಾದ ನೈವೇದಗಳನ್ನು ನಿವೇದಿಸಲಾಗುತ್ತಿತ್ತು. ಈ ಉತ್ಸವಗಳನ್ನು ಮಹಾಸಂಪ್ರದಾಯಗಳಂತೆ ನೆರವೇರಿಸುತ್ತಿದ್ದರು.

ಫಲ್ಗುಣ ಮಾಸ (ಚಂದ್ರಮಾನದಲ್ಲಿರುವ ಫಲ್ಗುಣ ಮಾಸ) ಅನುರಾಧ ನಕ್ಷತ್ರದಲ್ಲಿ ಪ್ರಾರಂಭಗೊಂಡು ಉತ್ತರಾಷಾಢ ನಕ್ಷತ್ರದಲ್ಲಿ ಕೊನೆಗೊಳ್ಳುತ್ತದೆ. ತಾಳ್ಳಪಾಕ ವಂಶಸ್ಥರು ಶ್ರೀನಿವಾಸನನ್ನು ಅಳಿಯನಾಗಿ, ಪದ್ಮಾವತಿಯನ್ನು ತಮ್ಮ ಪುತ್ರಿಯನ್ನಾಗಿ ಭಾವಿಸಿ 1546 ರಲ್ಲಿ ಈ ಕಲ್ಯಾಣೋತ್ಸವವನ್ನು ಪ್ರಾರಂಭಿಸಿದ್ದಾರೆ.

ತಾಳ್ಳಪಾಕ ಅನ್ನಮಾಚಾರ್ಯರ ಮೊಮ್ಮಗ ತಾಳ್ಳಪಾಕ ಚಿಕ್ಕ ತಿರುಮಲಾಚಾರ್ಯರು (ಶಾಸನ ನಂ. 354-97) ವನ್ನು ತಿರುಮಲೆಯ ಗೋವಿಂದರಾಜ ಸ್ವಾಮಿಯ ದೇವಾಲಯದಲ್ಲಿ 1547 ರಂದು ಕಲ್ಯಾಣೋತ್ಸವವನ್ನು ವಿನೂತನವಾಗಿ ನಿರೂಪಿಸಲು

ಮೊದಲಿಟ್ಟಾಗ ಮೊದಲ ಐದು ದಿನಗಳೊಂದಿಗೆ ಮೇಲೈದು ದಿನಗಳವರೆಗೆ ಜರಗುವಂತೆ ಏರ್ಪಾಟು ಮಾಡಿದ್ದಾರೆ. ಐದನೇ ದಿನ ರೋಹಿಣಿ ನಕ್ಷತ್ರ ಬರುವ ದಿನದಿಂದ ಮುಂದೆ ನಾಲ್ಕು ದಿನ ವೈಭವದಿಂದ ಜರುಗಿಸಲಾಗುತ್ತಿತ್ತು. ಪ್ರತಿದಿವಸ ಯಾವ ನೈವೇದ್ಯ ನಿವೇದಿಸಬೇಕು ಮತ್ತು ಪ್ರಧಾನ ಅರ್ಚಕರು, ಪುರೋಹಿತರಿಗೆ ಎಷ್ಟೆಷ್ಟು ದಕ್ಷಿಣೆ ಕೊಡಬೇಕೆಂಬ ವಿವರಣೆಗಳನ್ನು ಈ ಶಾಸನದಲ್ಲಿ ತಿಳಿಸಲಾಗಿದೆ. ಈ ಉತ್ಸವವು ತಿರುಪತಿ ಗೋವಿಂದರಾಜನ ಆಲಯದಲ್ಲಿ ಶ್ರೀ ಲಕ್ಷ್ಮಿದೇವಿ ಮಂಟಪ (ಪುಂಡರೀಕವಲ್ಲಿ ತಾಯಿಯ ಸನ್ನಿಧಿ)ಯಲ್ಲಿ ಜರುಗಿಸಲಾಗುತ್ತದೆ.



ತಾಳ್ಳಪಾಕ ಪರಿವಾರದವರು ಪ್ರಾರಂಭಿಸಿದ ಈ ಉತ್ಸವಗಳಲ್ಲಿ ಕಾಣಿಕೆಯಾಗಿ ವೀಳೆದೆಲೆ ಮತ್ತು ಅಡಿಕೆಯನ್ನು ಮಾತ್ರವೇ ಕೊಡುತ್ತಿದ್ದರು. ಈ ವಿವಾಹ ಮಹೋತ್ಸವಕ್ಕೆ 250 ವರಹಗಳ ವೆಚ್ಚವನ್ನು ಮಾಡುತ್ತಿದ್ದರು. ನೆಡಿಯಾ ಗ್ರಾಮದಿಂದ ಬರುವ ಆದಾಯದಲ್ಲಿ 150 ವರಹಗಳನ್ನು ಕಲ್ಯಾಣೋತ್ಸವದ ಖರ್ಚಿಗಾಗಿ ಆಲಯದ ಖಜಾನೆಯಲ್ಲಿ ಜಮಾ ಮಾಡಲಾಗುತ್ತಿತ್ತು. ಈ ಪದ್ಧತಿಯನ್ನು ತಾಳ್ಳಪಾಕ ಚಿನ್ನ ತಿರುಮಲಯ್ಯಂಗಾರರು ಪ್ರಾರಂಭಿಸಿದರು. ಈ ಉತ್ಸವವು ಹೇಗೂ ಐದು ದಿನಗಳವರೆಗೆ ಕ್ರಮವಾಗಿ ತಿರುಮಲೆ ಹಾಗೂ ತಿರುಪತಿಯಲ್ಲಿ ತಪ್ಪದೇ ನಿರ್ವಹಿಸುತ್ತಿದ್ದರು. ತುಪ್ಪಿಲಿ ಅಗ್ರಹಾರದಿಂದ ಬರುವ ಆದಾಯವನ್ನು ಮತ್ತು 'ನಗರಿ ಸಿರಿಮಾಯಿ' ಪ್ರಾಂತ್ಯಕ್ಕೆ ಸೇರಿದ ಅಂಬತ್ತೂರಿನಿಂದ ಬರುವ 400 ಸ್ವರ್ಣ ನಾಣ್ಯಗಳನ್ನು ಕೂಡಾ ಈ ಉತ್ಸವಕ್ಕೆ ಉಪಯೋಗಿಸಲಾಗುತ್ತಿತ್ತು. ಈ ಆದಾಯ ಕೇವಲ ಗೋವಿಂದರಾಜಸ್ವಾಮಿ ಕಲ್ಯಾಣೋತ್ಸವಕ್ಕೆ ಮಾತ್ರವೇ ಅಲ್ಲದೇ ತಿರುಮಲೆಯಲ್ಲಿನ ಶ್ರೀ ವೇಂಕಟೇಶ್ವರ ಸ್ವಾಮಿಯ ನಿತ್ಯ ಕೈಂಕರ್ಯಕ್ಕೂ ಕೂಡಾ ಖರ್ಚು ಮಾಡುತ್ತಿದ್ದರು.

ಕಲ್ಯಾಣೋತ್ಸವ ಸಮಯದಲ್ಲಿ ನಾಲ್ಕು ದಿಕ್ಕುಗಳಲ್ಲಿರುವ ರಾಜಬೀದಿಗಳಲ್ಲಿ ಮೆರವಣಿಗೆಗಳು, ದೇವತೆಗಳಿಗೆ ಪ್ರತ್ಯೇಕ ನೈವೇದ್ಯಗಳು ಸಮರ್ಪಿಸಲಾಗುತ್ತಿತ್ತು. ಈ ಕಲ್ಯಾಣೋತ್ಸವದಲ್ಲಿ ಮಲೆಯಪ್ಪಸ್ವಾಮಿ ಮದುಮಗ - ಶ್ರೀದೇವಿ, ಭೂದೇವಿಯರು ಮದುಮಕ್ಕಳು. ಆ ಸಮಯದಲ್ಲಿ ಇಡೀ ಪ್ರಾಂತ್ಯದಲ್ಲೇ ಹಬ್ಬದ ವಾತಾವರಣ ಅಂಗರಂಗ ವೈಭವ ಸಡಗರಗಳು ಮೈತಳೆಯುತ್ತಿದ್ದವು.

ಈ ಉತ್ಸವದಲ್ಲಿ ಪಾಲ್ಗೊಳ್ಳುವ ಆಚಾರ್ಯರಿಗೆ, ಪುರೋಹಿತರುಗಳಿಗೆ ಏಕಾಂಗ ವೇದ ಪಾರಾಯಣಿಕರಿಗೆ, ಉಳಿದ ಕಾರ್ಯಪರರಿಗೆ ದಕ್ಷಿಣೆ ಮತ್ತು ಇತರ ಗೌರವಾದರಗಳನ್ನು ಸಲ್ಲಿಸಲಾಗುತ್ತಿತ್ತು. ಕಾಲಕ್ರಮೇಣ 150 ಸ್ವರ್ಣ ನಾಣ್ಯಗಳು ಈ ಉತ್ಸವಕ್ಕೆ ಸಾಲದೇ ಹೋಗಿವೆ. ಕೊಂಡವೀಡು ರಾಜ್ಯಕ್ಕೆ ಸೇರಿದ ವಿನುಕೊಂಡ ಸಿರಿಮಾಯಿ ಪ್ರಾಂತ್ಯದ ಆದಾಯವನ್ನು ಅನುಭವಿಸುತ್ತಿದ್ದ ದೊಡ್ಡ ತಿರುಮಲಾಚಾರ್ಯರ ಕುಮಾರನಾದ ತಿರುವೇಯ್ಯನ್ (ತಿರುವೆಂಗಳನಾಥನ್) ತಮ್ಮ ಆದಾಯವನ್ನು ಉತ್ಸವಕ್ಕೆ ಖರ್ಚು ಮಾಡಲು ನಿರ್ಣಯಿಸಿದ್ದಾರೆ. ಈ ಲೆಕ್ಕವನ್ನು ವರ್ಷವೂ ಬರುವ 470 ಸ್ವರ್ಣ ನಾಣ್ಯಗಳ ಆದಾಯವನ್ನು 1554 ನೇ ಇಸವಿಯಲ್ಲಿ 'ಶ್ರೀ ಭಂಡಾಗಾರ' (ಆಲಯದ ಕೋಶ) ದಲ್ಲಿ ಜಮಾ ಮಾಡಲಾಯಿತು. ಈ ಹಣವನ್ನು ಉತ್ಸವಗಳಿಗೆಲ್ಲಾ ಖರ್ಚುಮಾಡಲಾಗುತ್ತಿತ್ತು ಮತ್ತೆ ತಿರುಗಿ ಉಳಿದ ಹಣವು ದೇವರುಗಳ ನೈವೇದ್ಯಕ್ಕೆ ಖರ್ಚು ಮಾಡಲಾಗುತ್ತಿತ್ತು (ಶಾಸನ ನಂ 419 - ಜಿಟಿ) ತಿರುವೆಂಗಳನಾಥನ್ ದ್ವಾರಾ 1558 ರ ಸಮಯಕ್ಕೆ ಶ್ರೀ ವೇಂಕಟೇಶ್ವರನ ಕಲ್ಯಾಣೋತ್ಸವ ಮತ್ತಷ್ಟು ನೈವೇದ್ಯಗಳಿಂದ ಆಚರಿಸಲ್ಪಡುತ್ತಿತ್ತು. ಐದು ದಿನಗಳವರೆಗೆ ಜರಗುವ ಕಲ್ಯಾಣೋತ್ಸವದಲ್ಲಿ ತಿರುವೆಂಗಳನಾಥನ್ ನೇತೃತ್ವದಲ್ಲಿ ಮೊದಲದಿನ ಸಂಪ್ರದಾಯ ಬದ್ಧವಾಗಿ ಧ್ವಜಾರೋಹಣ ಕಾರ್ಯಕ್ರಮ ಮೊದಲಾದವು. (ಧ್ವಜಾರೋಹಣ ಕಾರ್ಯಕ್ರಮ ಸಾಮಾನ್ಯವಾಗಿ ಬ್ರಹ್ಮೋತ್ಸವ ಸಮಯದಲ್ಲಿ ನಿರ್ವಹಿಸಲಾಗುತ್ತದೆ. ಆದರೆ ವೈಖಾನಸ ಆಗಮದ ಪ್ರಕಾರ ಇದು ಯಾವುದೇ ಉತ್ಸವಕ್ಕೆ ಮುಂಚೆ ಪರಿಪಾಲಿಸಬಹುದಾದ ಪದ್ಧತಿಯಾಗಿದೆ.)

ಊಟಕ್ಕೆ ಗತಿಯಿಲ್ಲದ ಬಡವರಿಂದ ಹಿಡಿದು ಕೋಟಿಗಟ್ಟಲೆ ಎಣಿಸುವ ಕೋಟೀಶ್ವರರವರೆಗೆ ಎಲ್ಲರೂ ಸಮಾನವಾಗಿ ಪಾಲ್ಗೊಳ್ಳುವ ಶ್ರೀನಿವಾಸನ ನಿತ್ಯಕಲ್ಯಾಣೋತ್ಸವದಲ್ಲಿ ಪಾಲ್ಗೊಳ್ಳುವ ಭಕ್ತರ ಸಂಖ್ಯೆ ದಿನೇ ದಿನೇ ಬೆಳೆಯುತ್ತಲೇ ಇದೆ. ಶ್ರೀನಿವಾಸನ ಪ್ರತಿರೂಪವಾದ ಮಲೆಯಪ್ಪ ಸ್ವಾಮಿಯು ಶ್ರೀದೇವಿ ಭೂದೇವಿ ಸಮೇತವಾಗಿ ಪಾಲ್ಗೊಳ್ಳುವ ಈ ಕಲ್ಯಾಣೋತ್ಸವ ಮುಂಚೆ ಬಂಗಾರದ ದ್ವಾರದ ಮುಂದೆಯೇ ಜರುಗುತ್ತಿತ್ತು. ಅನಂತರ ಭಕ್ತರ ಸೌಕರ್ಯಾರ್ಥವಾಗಿ ವಿಮಾನ ಪ್ರದಕ್ಷಿಣೆ ಮಾರ್ಗದಲ್ಲಿರುವ ಕಲ್ಯಾಣ ಮಂಟಪದಲ್ಲಿ, ಬಳಿಕ ಸ್ವಲ್ಪಕಾಲ ರಂಗನಾಯಕ ಮಂಟಪದಲ್ಲೂ ಆಚರಿಸಲ್ಪಡುತ್ತಿತ್ತು. ದಿನದಿನಕ್ಕು ಕಲ್ಯಾಣೋತ್ಸವದಲ್ಲಿ

ಪಾಲ್ಗೊಳ್ಳುವ ಭಕ್ತರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಅಲ್ಲಿಂದಲೂ ವೇದಿಕೆಯನ್ನು ಬದಲಾಯಿಸಿ ಪ್ರಸ್ತುತ ಸಂಪಂಗಿ ಪ್ರದಕ್ಷಿಣಕ್ಕೆ ದಕ್ಷಿಣದಲ್ಲಿರುವ 'ಶ್ರೀ ವೇಂಕಟೇಶ್ವರ ಸ್ವಾಮಿ ಕಲ್ಯಾಣ ಮಂಟಪ' ಎನ್ನುವ ಹೆಸರಿನಿಂದ ಪ್ರತ್ಯೇಕವಾಗಿ ಏರ್ಪಾಟು ಮಾಡಿರುವ ವೇದಿಕೆಯಲ್ಲಿ ಶ್ರೀನಿವಾಸ ಕಲ್ಯಾಣವನ್ನು ನಿರ್ವಹಿಸುತ್ತಾರೆ.

### ಆರ್ಜಿತಸೇವೆಯಾಗಿ ಕಲ್ಯಾಣೋತ್ಸವ

ಕಾಲಾಂತರದಲ್ಲಿ ಕಲ್ಯಾಣೋತ್ಸವ ಆರ್ಜಿತ ಸೇವೆಯಾಗಿ ಮಾರ್ಪಟ್ಟಿತು.ವೈಖಾನಾಗಮದ ಪ್ರಕಾರ ವಿಷ್ಣುವಿಗೆ ಜರುಗಿಸಲಾಗುವ ಮೂರು ಉತ್ಸವಗಳಲ್ಲಿ ಈ ಕಲ್ಯಾಣೋತ್ಸವವು ಮಾತ್ರ ಶ್ರದ್ಧೋತ್ಸವ ಅಥವಾ ಕಾಮ್ಯೋತ್ಸವವೆಂದು ಕರೆಯಲ್ಪಟ್ಟಿದೆ ಉಳಿದೆರಡು ಕಾಲೋತ್ಸವ ಹಾಗೂ ನೈಮಿತ್ತಿಕೋತ್ಸವ ಎಂದು ಕರೆಯಲ್ಪಟ್ಟಿವೆ. ವೇಂಕಟೇಶ್ವರಸ್ವಾಮಿ ಕೃಪಾಕಟಾಕ್ಷ ಹೊಂದಿದ ಭಕ್ತರು ಪ್ರಸ್ತುತ ರೂ. 1000/- ಸಂದಿಸಿ ಶ್ರೀನಿವಾಸನ ನಿತ್ಯ ಕಲ್ಯಾಣೋತ್ಸವದಲ್ಲಿ ಪಾಲ್ಗೊಳ್ಳಬಹುದು. ಗೃಹಸ್ಥರೂ ಹಾಗೂ ದಂಪತಿಗಳಿಬ್ಬರಿಗೆ ಮಾತ್ರವೇ ಅನುಮತಿಯಿರುತ್ತದೆ. ಇವರಿಗೆ ಕಲ್ಯಾಣೋತ್ಸವದ ನಂತರ ಒಂದು ಶಲ್ಯ ಹಾಗೂ ಒಂದು ಕುಪ್ಪಸ, 2 ದೊಡ್ಡ ಲಡ್ಡುಪ್ರಸಾದ, 2 ವಡೆಗಳು, ಮತ್ತು ಚಿಕ್ಕ ಲಡ್ಡುಗಳನ್ನು ಪ್ರಸಾದವಾಗಿ ಕೊಡುತ್ತಾರೆ.

### ಸ್ವಾಮಿಯ ಕಲ್ಯಾಣೋತ್ಸವ ಹೇಗೆ ಜರುಗುತ್ತದೆಂದರೆ

ಸ್ವಾಮಿಯ ಅರ್ಚಕರ ನಿವಾಸದಿಂದ ಕಲ್ಯಾಣೋತ್ಸವದ ಕೈಂಕರ್ಯವನ್ನು ನಿರ್ವಹಿಸುವ ವ್ಯವಸ್ಥಾಪಕ ಅರ್ಚಕರು ಬೃಹಸ್ಪತಿಯಾಗಿ ವ್ಯವಹರಿಸುವ ಮತ್ತೊಬ್ಬ ಅರ್ಚಕನೊಂದಿಗೆ ಅರಸಿನ ಬಟ್ಟೆಗಳನ್ನು ಧರಿಸಿ 'ವೋಜಿ' ಎಂಬ ದೀವಟಿಗೆಯ ಪಾಣಿಯೊಬ್ಬನ ಸಹಾಯದಿಂದ ಸಂಪಂಗಿ ಪ್ರಾಕಾರದಲ್ಲಿರುವ ಕಲ್ಯಾಣ ಮಂಟಪವನ್ನು ಪ್ರವೇಶಿಸಿ ಸ್ವಾಮಿಯ ಪಾದಸೇವೆ ಗೈಯುತ್ತಾರೆ.

ಈ ಹೊತ್ತಿಗಾಗಲೇ ಮಲೆಯಪ್ಪಸ್ವಾಮಿ ಪೂರ್ವತೋಮುಖವಾಗಿ ಒಂದು ಬಂಗಾರ ಸಿಂಹಾಸನದ ಮೇಲೆ ವಿರಾಜಿಸಿರುತ್ತಾರೆ. ಶ್ರೀ ಸ್ವಾಮಿಯ ಬಲಭಾಗದಲ್ಲಿ ಮತ್ತೊಂದು ಬಂಗಾರಪೀಠದ ಮೇಲೆ ಶ್ರೀದೇವಿ, ಭೂದೇವಿ ಮಾತೆಯರು ಅಸೀನರಾಗಿರುತ್ತಾರೆ. ಉತ್ಸವ ಮೂರ್ತಿಗಳನ್ನು ಶ್ರೇಷ್ಠವಾದ ಪುಷ್ಪಮಾಲೆಗಳಿಂದಲಂಕರಿಸಿ ಕಲ್ಯಾಣೋತ್ಸವಕ್ಕೆ ತಯಾರಾಗಿ ನಿಂತಿರುತ್ತಾರೆ. ಮಧ್ಯಾಹ್ನ 12 ಗಂಟೆಗೆ ಅಭಿಜಿತ್ ಲಗ್ನದಲ್ಲಿ ನಿತ್ಯಕಲ್ಯಾಣೋತ್ಸವವು ಸಭಾ ಪ್ರಾರ್ಥನೆಯೊಂದಿಗೆ ಆರಂಭಗೊಳ್ಳುತ್ತದೆ. ತದನಂತರ ಕ್ರಮವಾಗಿ ವಿಶ್ವಕ್ಸೇನಾರಾಧನೆ, ಪುಣ್ಯಾಹಚನೆ, ಸದ್ಯೋ ಅಂಕುರಾರ್ಪಣೆ, ರಕ್ಷಾಬಂಧನ, ಅಗ್ನಿಪ್ರತಿಷ್ಠೆಯಂತಹ ವೈದಿಕ ಕ್ರಿಯೆಗಳು ನಿರ್ವಹಣೆಗೊಳ್ಳುತ್ತವೆ. ಅನಂತರ ಶ್ರೀನಿವಾಸನಿಗೆ ಮಧುಪರ್ಕ ಸಮರ್ಪಣೆ, ಪಾದಪ್ರಕ್ಷಾಲನೆ, ಪೀಠಪ್ರಧಾನಗಳನ್ನು ಜರುಗಿಸಿ ಸ್ವಾಮಿಯನ್ನು ಮಾತೆಯರ ಮಧ್ಯೆ ಮಂತ್ರ ಪೂರ್ವಕವಾಗಿ ಅಂತಃ ಪಟವನ್ನು ಹಿಡಿಯಲಾಗುತ್ತದೆ. ಸ್ವಾಮಿಗೆ ಮಾತೆಯರಿಗೆ ನೂತನವಸ್ತ್ರ ಸಮರ್ಪಣೆಯೂ ನಡೆಯುತ್ತದೆ. ಮಹಾಸಂಕಲ್ಪದ ಅಂಗವಾಗಿ ಸ್ವಾಮಿಯ ಹಾಗೂ ಮಾತೆಯರ ಗೋತ್ರ - ಪ್ರವರಗಳ ಪಠನ ಮಾಡಲಾಗುತ್ತದೆ. ನಂತರ ಮಾಂಗಲ್ಯಧಾರಣೆಯನ್ನು ನಿರ್ವಹಿಸಿ, ಸ್ವಾಮಿಯ ಕೈಯಿಂದ ಮುಟ್ಟಿಸಿದ ಮಂಗಳ ಸೂತ್ರವನ್ನು ಮಾತೆಯರಿಗೆ ಧಾರಣೆ ಮಾಡಿಸಿ ಮಂಗಳಾರತಿಗಳನ್ನು ಮಾಡುತ್ತಾರೆ. ಅರ್ಚಕರು ಹೋಮಕುಂಡದಲ್ಲಿ ಪ್ರಧಾನಹೋಮ, ಲಾಜ ಹೋಮ ಪೂರ್ಣಾಹುತಿ, ರಕ್ಷಾತಿಲಕ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಹಿಂದೆಯೇ ವಾರಣವಾಯಿರ ಹಾಗೂ ಮಾಲಪರಿವರ್ತನೆ, ಅಕ್ಷತಾರೋಹಣ ಶಾಸ್ತ್ರೋಕವಾಗಿ ನಿರ್ವಹಿಸಿ ಕರ್ಪೂರ ನೀರಾಜನವನ್ನು ಬೆಳಗುತ್ತಾರೆ. ಆದ ನಂತರ ಮಹಾನಿವೇದನೆಯನ್ನು ನಿರ್ವಹಿಸಿ ಕರ್ಪೂರದಾರತಿಯನ್ನು ಸಮರ್ಪಿಸುವ ಮೂಲಕ ಶ್ರೀ ಸ್ವಾಮಿಯ ನಿತ್ಯ ಕಲ್ಯಾಣೋತ್ಸವ ವೈಭವೋಪೇತವಾಗಿ ಮುಕ್ತಾಯಗೊಳ್ಳುತ್ತದೆ.

### ಕಲ್ಯಾಣೋತ್ಸವದ ಫಲ

"ಉಭಯದೇವತೆಗಳಿಂದ ಕೂಡಿದ ಸ್ವಾಮಿಯ ಈ ಕಲ್ಯಾಣೋತ್ಸವವನ್ನು ಜರುಗಿಸುವ ಮೂಲಕ ಸ್ವಾಮಿಯನ್ನು ಸೇವಿಸುವವರ ಪಾಪಗಳು ಆ ಕ್ಷಣವೇ ತೊಲಗಿ ಹೋಗುವುದೊಂದೇ ಅಲ್ಲದೇ ಅವರ ಮಾತಾ - ಪಿತೃಗಳ ವಂಶಗಳಲ್ಲಿ ಮುಂದಿನ ಹತ್ತು ತಲೆಮಾರು ಮತ್ತು ಅದರ ಮುಂದಿನ ಹತ್ತು ತಲೆಮಾರಿನವರೂ ಸಹಾ ಪಾಪದಿಂದ ವಿಮುಕ್ತರಾಗಿ ವಿಷ್ಣು ಲೋಕವನ್ನು ಹೊಂದುತ್ತಾರೆ. ಸ್ತ್ರೀಯರು ನಿತ್ಯ ಸೌಭಾಗ್ಯದಿಂದ ಸುಮಂಗಲಿಯರಾಗುತ್ತಾರೆ." ಎಂದು ಮರೀಚಿ ಮಹರ್ಷಿ "ವಿಮಾನಾರ್ಚನ ಕಲ್ಪಂ" ಎಂಬ ಗ್ರಂಥದಲ್ಲಿ ಕಲ್ಯಾಣೋತ್ಸವದ ಫಲಿತವನ್ನು ಕೀರ್ತಿಸಿದ್ದಾರೆ.

# ಕುಮಾರವ್ಯಾಸ ಜಯಂತಿ

- ಶ್ರೀಮತಿ. ಕೆ.ವಿ. ಪದ್ಮಾವತಿ

ಕುಮಾರವ್ಯಾಸ ಕಾವ್ಯನಾಮದಿಂದ ಪ್ರಸಿದ್ಧನಾಗಿರುವ ಗದುಗಿನ ನಾರಣಪ್ಪನು ಸಮೀಪದ ಕೋಳಿವಾಡದವನಾದರೂ ಅವನ ಕಾವ್ಯ ಪ್ರತಿಭೆ ಬೆಳಗಿದ್ದು ಗದುಗಿನ ವೀರನಾರಾಯಣ ದೇವಸ್ಥಾನದಲ್ಲಿ. ಪಂಚಮ ವೇದದ ತತ್ವಾರ್ಥದ ಹೂವು ಅರಳಿದ್ದು ಈ ನೆಲದ ಬಳ್ಳಿಯಲ್ಲಿ.

ಗದುಗಿನ ಭಾರತ, ಕರ್ಣಾಟ ಭಾರತ ಕಥಾಮಂಜರಿ, ಕುಮಾರವ್ಯಾಸ ಭಾರತ ಇತ್ಯಾದಿ ಹೆಸರುಗಳಿಂದ ಕರೆಯಲ್ಪಡುವ ಅಪೂರ್ವ ಗ್ರಂಥವನ್ನು ರಚಿಸಿದ ಕುಮಾರವ್ಯಾಸ ಕೊನೇರಿ ತೀರ್ಥದ ಜಲದಲ್ಲಿ ನಿತ್ಯ ಮಿಂದು ವೀರನಾರಾಯಣ ದೇವಸ್ಥಾನದ ರಂಗ ಮಂಟಪದ ಎರಡನೇ ಕಂಬದ ಹತ್ತಿರ ಶ್ರೀ ವೀರನಾರಾಯಣನ ಸಮ್ಮುಖದಲ್ಲಿ ಒದ್ದೆ ಬಟ್ಟೆ ಉಟ್ಟು ಬರೆಯಲು ಕುಳಿತರೆ ಶ್ರೀ ವೀರನಾರಾಯಣನೇ ಕವಿಯಾಗಿ, ಕುಮಾರವ್ಯಾಸ ಲಿಪಿಕಾರನಾಗಿ ಪಂಚಮ ವೇದವು ಕೃಷ್ಣ ಕಥೆಯಾಗಿ ಬರುತ್ತದೆ. ಆದರೆ ಭಾರತ ಕಥೆಯನ್ನು ಹೇಳುವಾಗ ದೇವರು ಒಂದು ಷರತ್ತು ವಿಧಿಸಿರುತ್ತಾನೆ. ಕಥನಕಾರನ ದನಿಯನ್ನು ಮಾತ್ರ ಕೇಳಬೇಕೇ ವಿನಾ ಯಾರು ಎಂದು ನೋಡುವ ಆಸಕ್ತಿ ತೋರಬಾರದು. ಅನೇಕ ವರ್ಷ ಹೀಗೇ ನಡೆಯುತ್ತದೆ.ಆದರೆ ಒಮ್ಮೆ ಕುಮಾರವ್ಯಾಸನಿಗೆ ಕಥನಕಾರದ ಕುರಿತು ತಿಳಿಯುವ ಕುತೂಹಲ ತಡೆಯಲಾಗದೆ ನೋಡುವ ಪ್ರಬಲೇಚ್ಛೆ ತೋಡಿಕೊಳ್ಳುತ್ತಾನೆ. ಪರಮಾದ್ಭುತವೆಂಬಂತೆ ಸ್ವತಃ ದೇವರೇ ಕಥನಕಾರನಾಗಿರುತ್ತಾನೆ.ಆದರೆ ಷರತ್ತು ಮುರಿದಿದ್ದರಿಂದ ದೇವರು ಅದೃಶ್ಯನಾಗಿ ಬಿಡುತ್ತಾನೆ. ಭಾರತ ಕಥೆ ಅಲ್ಲಿಗೇ ನಿಂತು ಬಿಡುತ್ತದೆ.

ಕುಮಾರವ್ಯಾಸ ಆದಿಪರ್ವದ ಪೀಠಿಕಾ ಸಂಧಿಯಲ್ಲಿ ವೀರನಾರಾಯಣನೆ ಕವಿ 'ಲಿಪಿಕಾರ ಕುಮಾರವ್ಯಾಸ' ಎಂದು ಹೇಳಿದ್ದಾನೆ. ಅಂದರೆ, ಬರೆಯುವವ ತಾನಾದರೂ ಹೇಳುವವ ಇನ್ನೊಬ್ಬ ಇದ್ದಾನೆ. ಎಂಬ ಭಾವ ವ್ಯಾಸ ಹೇಳಿದ್ದನ್ನು ಗಣಪತಿ ಬರೆದುಕೊಂಡ ಎಂಬುದು ವ್ಯಾಸಭಾರತದ ಬಗ್ಗೆ ಒಂದು ಕತೆ. ಅದನ್ನು ನೆನಪಿಸುವಂತೆ ಅಲ್ಲಿ ಕವಿ ವೀರನಾರಾಯಣ; ತಾನಲ್ಲ ಎಂಬ ಭಕ್ತಿ. ಈ ಭಕ್ತಿಯ ಆಚೆಯ ಭಾಷೆಯ ಇನ್ನೊಂದು ಅರ್ಥವನ್ನೂ ನಾವು ಗ್ರಹಿಸಬೇಕು.ತಾನು ಕವಿಯಾದರೂ ತನ್ನದು ಮಾತ್ರವಲ್ಲದ ಈ ಲೋಕದ ಕತೆಯನ್ನು, ದೇವರ ಕತೆಯನ್ನು ತಾನೊಬ್ಬ ಬರಹಗಾರ ಮಾತ್ರನಾಗಿ ಹೇಳುತ್ತಿದ್ದೇನೆ ಎಂಬ ಭಾವವನ್ನು ವಿನಯವನ್ನೂ ಗಮನಿಸಬೇಕು.ದೇವರ ಕತೆಯನ್ನು ಲೋಕಾನುಭವದಲ್ಲಿ, ಜನರ ಮಾತುಗಳಲ್ಲಿ (ದೇಸಿ) ಹೇಳುವವ ತಾನು ಎಂಬ ಅಂತರ್ಗತ ನಿಲುವು.

ಅದಕ್ಕೇ, ಕುಮಾರವ್ಯಾಸ ಭಾರತ ಹತ್ತೇ ಅಧ್ಯಾಯಗಳಿರುವುದು ಎಂಬ ಅಭಿಪ್ರಾಯವಿದೆ. ಆದರೂ ಈ ಕೃತಿಯ ಸೊಬಗು, ಶೈಲಿ ಬಹು ಕಾಲದಿಂದ ರಸಿಕರ ಮನಸೂರೆಗೊಳ್ಳುತ್ತಲೇ ಇದೆ. ಇಲ್ಲಿ ಕವಿಯು ಕೃಷ್ಣನನ್ನು ಕಥಾನಾಯಕನಾಗಿಸಿ ಕೊಂಡಿದ್ದಾನೆ.ಅದಕ್ಕೆ ಈ ಕೃಷ್ಣ ಕಥೆ, 'ಹಲವು ಜನ್ಮದ ಪಾಪರಾಶಿಯ ತೊಳೆವ ಜಲವಿದು'. ಇದು ಪದುಮ ನಾಭನ ಲೀಲಾವಿಲಾಸ.

ಕುಮಾರವ್ಯಾಸನ ಕರ್ಣಾಟ ಭಾರತ ಕಥಾ ಮಂಜರಿ ಕರ್ನಾಟಕ ಸಾಹಿತ್ಯದ ಮೇರುಪುಷ್ಪ, ಗಮಕ ಕಲಾಭಿಮಾನಿಗಳಿಗೆ ನೆಚ್ಚಿನ ಗ್ರಂಥ. ಕುಮಾರವ್ಯಾಸ ಭಾರತ ಭಾಮಿನೀ ಷಟ್ಪದಿ ಛಂದಸ್ಸಿನಲ್ಲಿ ರಚನೆಯಾಗಿದೆ. ಸುಮಾರು 10 ಪರ್ವಗಳನ್ನು ಒಳಗೊಂಡಿದೆ.ಇದರಲ್ಲಿ ವೀರ ಶೃಂಗಾರ ರಸಗಳ ಸನ್ನಿವೇಶಗಳು ಯಥೇಚ್ಛವಾಗಿ ಬಳಕೆಯಾಗಿದೆ. ಮೊದಲ ಐದು ಪರ್ವಗಳನ್ನು ಆದಿ ಪಂಚಕವೆಂದು, ಕರೆಯಲಾಗಿದೆ. ಕುಮಾರವ್ಯಾಸನ ಪದಗಳೆ ಛಂದ ಎನ್ನುವ ಮಾತಿನಂತೆ ಕುಮಾರವ್ಯಾಸ ಶೋಭಿಸುವುದು ಆತನ ರೂಪಕಗಳಿಂದ, ಉದಾ: ಬವರ ವಾದರೆ ಹರನ ವದನಕೆ ಬೆವರ ತಹೆನು (ಅಭಿಮನ್ಯುವಿನ ವೀರೋಕ್ತಿ!) ನರಶರದ ಜುಂಜುವೊಳೆಯಲಿ ಜಾರುವನೆ ಜಾಹ್ನವೀಧರ (ಕಿರಾತಾರ್ಜುನೀಯ ಪ್ರಸಂಗದಲ್ಲಿ) ಜವನ ಮೀಸೆಯ ಮುರಿದನೋ (ಉತ್ತರನ ಪೌರುಷದಲ್ಲಿ).ಕುವೆಂಪುರವರು ತಮ್ಮ ತೋರಣ ನಾಂದಿಯಲ್ಲಿ ಕುಮಾರವ್ಯಾಸನ ಪ್ರತಿಭೆ ಭಾಷೆಯಲ್ಲಿ ಅವತರಿಸುವ ಸೊಗಸೇ ಸೊಗಸು. ಅಂಥ ಸೊಗಸನ್ನು ಹೆಚ್ಚಿಸಿರುವುದು ಅವನ ರೂಪಕ ನಿರ್ಮಾಣ ಶಕ್ತಿ. ಅವನನ್ನು ರೂಪಕ ಸಾಮ್ರಾಜ್ಯ ಚಕ್ರವರ್ತಿ ಎಂದು ಕರೆದಿರುವುದು ಅತ್ಯಂತ ಸೂಕ್ತವೇ ಆಗಿದೆ.ಕುಮಾರವ್ಯಾಸ ಕಾಣುವುದು ರೂಪಕಗಳನ್ನು ಮಾತನಾಡುವುದು ರೂಪಕಗಳನ್ನು ಅಷ್ಟೇ ಏಕೆ ಅವನ ಸಾಧಾರಣತಮ ಭಾಷೆಯೂ ರೂಪಕದಿಂದ ದೀಪ್ತಗೊಂಡಿರುತ್ತದೆ. ಈ ಭೂಮಿಕೆಯಲ್ಲಿ ಅವನನ್ನು ಸರಿ ಗಟ್ಟುವ ಕವಿ ಕನ್ನಡದಲ್ಲಿ ಇಲ್ಲವೇ ಇಲ್ಲ ಎನ್ನುತ್ತಾರೆ.

ಕುಮಾರವ್ಯಾಸರಿಗೆ ತಮ್ಮ ವ್ಯಾಸನ ಪುತ್ರ ಎಂದೇ ಕರೆದುಕೊಳ್ಳುತ್ತಾನೆ ತನ್ನ ಕೃತಿ ಮಹಾಭಾರತವಾದರೂ ಕತೃ ವೀರನಾರಾಯಣ ಎನ್ನುವ ಮೂಲಕ ತನ್ನ ಕೃತಿ ಮಹಾಭಾರತಕ್ಕಿಂತ ಪ್ರತ್ಯೇಕ ಎನ್ನುತ್ತಾನೆ.ತಾನೆಷ್ಟೇ ಪಂಡಿತನಾಗಿದ್ದರೂ ಮೊದಲು ತಾನೊಬ್ಬ ಭಕ್ತ ಎನ್ನುವ ಅವನ ವಿನೀತ ಭಾವ ನಿಜಕ್ಕೂ ಸ್ಮರಣೀಯ.?

ಕರ್ಣಾಟ ಭಾರತ ಕಥಾಮಂಜರಿಯ ಕುಮಾರವ್ಯಾಸ ಮಮತೆಯ ಸುಳಿಯನ್ನು ಹಿಡಿದು ಮಹಾಕಾವ್ಯ ರಚಿಸಿರುವ ಮಹಾಕವಿ. ಅವನಿಗೆ ಸಂಬಂಧಗಳ ಪ್ರಪಂಚ



ವೆಂದರೆ ಅಚ್ಚುಮೆಚ್ಚು. ಸಂಬಂಧ ಮೀಮಾಂಸೆ ಅವನ ಕಾವ್ಯದ ಹೃದಯ ಕಲಶ ಎಂದರೂ ಸರಿ. ಈ ಕಲಶದಲ್ಲಿ ಅವನು ತನ್ನ ಪರಮಪ್ರಿಯ ಕೃಷ್ಣ ರೂಪವಾದ ಗದುಗಿನ ವೀರನಾರಾಯಣನನ್ನು ಇರಿಸಿದ್ದಾರೆ.

ನಿಧಾನವಾಗಿ ಸಮಾಧಾನದಲ್ಲಿ ಓದಿದರೆ, ಆಡು ಮಾತುಗಳು ಹುದುಗಿರುವ ('ತಾಯೆಭಿನ್ನಹಃ ಇಂದು ನಿಮ್ಮ ರಾಯ ಸೋತನು, ಜೂಜಿನಲ್ಲಿ; ಕುರುರಾಯ ಗೆಲಿದನು; ಕೋಶವಂ ಕರಿ, ತುರಗ, ರಥ ಸಹಿತ) ಕುಮಾರವ್ಯಾಸ ನನ್ನು ನಾವೇ ಓದಿ ಅರ್ಥಮಾಡಿಕೊಳ್ಳಬಹುದು. ಅವಕಾಶವಿದ್ದರೆ ಗಮಕಿಗಳ ಹಾಡುಗಳ ವ್ಯಾಖ್ಯಾನಕಾರರ ವಿವರಣೆ ಮೂಲಕವೂ ಕೃತಿ ಪ್ರವೇಶ ಮಾಡಬಹುದು.

### 'ತಿಳಿಯ ಹೇಳುವೆ ಕೃಷ್ಣ ಕಥೆಯನು'

ತಿಣಿಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ ತಿಂಥಿಣಿಯ ರಘುವರ ಚರಿತೆಯಲಿ ಕಾಲಿಡಲು ತೆರಪಿಲ್ಲ!

ಎಂದು ಚಿಂತಿಸಿದ ಗದುಗಿನ ನಾರಣಪ್ಪ, ಕನ್ನಡದಲ್ಲಿ 'ತಿಳಿಯ ಹೇಳುವೆ ಕೃಷ್ಣ ಕಥೆಯನು' ಎನ್ನುತ್ತ ಮಹಾ ಭಾರತವನ್ನು ಬರೆದ. ಈ ಕಾರಣದಿಂದಲೇ ಕನ್ನಡದ 'ವ್ಯಾಸ' ನೆಂದು ಹೆಸರಾದ. ಈತನಿಗಿಂತಲೂ ಮೊದಲು ಕನ್ನಡದಲ್ಲಿ ರಾಮಾಯಣದ ಹಲವಾರು ಪುನರ್‌ರಚಿತ ಕೃತಿಗಳು ಬಂದಿದ್ದವೆಂದು ತೋರುತ್ತದೆ. ಆದರೆ ಕುಮಾರವ್ಯಾಸ ಹೇಳುವಂತೆ 'ಫಣಿರಾಯ ಭಾರದಿಂದ ತಿಣುಕುವಷ್ಟು' ಸಂಖ್ಯೆ ಯಲ್ಲಿ ಅವನ ಹಿಂದಿನ ಕಾಲಘಟ್ಟದಲ್ಲಿ ರಚನೆಗೊಂಡ ರಾಮಾಯಣ ಕೃತಿಗಳು ಲಭ್ಯವಾಗಿಲ್ಲ.

ನಡುಗನ್ನಡ ಸಾಹಿತ್ಯದಲ್ಲಿ ಹದಿನೈದನೇ ಶತ ಮಾನದ ಪೂರ್ವಾರ್ಧದಲ್ಲಿದ್ದ ನಾರಾಣಪ್ಪ 'ರೂಪಕ ಸಾಮ್ರಾಜ್ಯದ ಚಕ್ರವರ್ತಿ' ಎಂದು ಬಿರುದಾಂಕಿತ 'ಕರ್ಣಾಟ ಭಾರತ ಕಥಾ ಮಂಜರಿ',ಕುಮಾರವ್ಯಾಸ ಧಾರ್ಮಿಕ ಗ್ರಂಥವನ್ನು ಕನ್ನಡಕ್ಕೆ ತಂದು ಶ್ರದ್ಧಾವಂತರಿಗೆ ಉಪಕರಿಸಿದ್ದಷ್ಟೇ ಅಲ್ಲ, ಕನ್ನಡ ಸಾಹಿತ್ಯದ ಬೆಳವಣಿಗೆ ಮೇಲೆಯೂ ಬಹಳಷ್ಟು ಪ್ರಭಾವ ಬೀರಿದ್ದಾನೆ. ಕನ್ನಡ ಭಾರತವನ್ನು ಇಂದಿಗೂ ಪಾರಾಯಣ ಮಾಡಲಾಗುತ್ತದೆ, ವ್ಯಾಖ್ಯಾನ ಮಾಡಲಾಗು ತ್ತದೆ.

ಚಂಪೂ ಕಾವ್ಯವನ್ನು ವಾಚಿಸಲು ಕನ್ನಡದಲ್ಲಿ 'ಗಮಕ' ಎಂಬ ಒಂದು ವಿಶಿಷ್ಟ ಶೈಲಿಯೇ ರೂಪುಗೊಂಡಿದ್ದು,ಭಾರತೀಯ ಭಾಷಾ ಪರಂಪರೆಯಲ್ಲಿಯೇ ಬಲು ಅಪರೂಪದ್ದಾಗಿದೆ.

ಕುಮಾರವ್ಯಾಸ ಭಾರತವನ್ನು ಸಾಮಾನ್ಯವಾಗಿ ಗಮಕಿಗಳು ಹಾಡುತ್ತಾರೆ ಮತ್ತು ವ್ಯಾಖ್ಯಾನಕಾರರು ಅದರ ಅರ್ಥ ವಿವರಣೆ ಮಾಡುತ್ತಾರೆ. ಇಂತಹ ಗಮಕ ವಾಚನಗಳನ್ನು ಆಯೋಜಿಸಿ ಕಾವ್ಯರಸಿಕರಿಗೆ ಹರ್ಷ ನೀಡುವ ಕಾರ್ಯಕ್ರಮಗಳು ಇಂದಿಗೂ ಅಲ್ಲಲ್ಲಿ ನಡೆಯುತ್ತದೆ.

ಶ್ರೀ ವನಿತೆಯರಸನೇ ಎಂದು ಮೊದಲಾಗುವ ಗದುಗಿನ ಭಾರತದ ಪ್ರಸಿದ್ಧ ಮಂಗಳ ಪದ್ಯ ವೀರನಾರಾಯಣನನ್ನು ಕುರಿತ ಸ್ತುತಿಯೇ ಆಗಿದೆ. ಕುಮಾರವ್ಯಾಸನಿಗಿಂತಲೂ ಐದಾರು ಶತಮಾನಗಳಷ್ಟು ಮುಂಚಿತವಾಗಿಯೇ ಈ ಊರಿನಲ್ಲಿ ನೆಲೆಸಿದ ವೀರನಾರಾಯಣನು ಹಲವು ರಾಜವಂಶಗಳ ಪೂಜೆಯನ್ನು ಸ್ವೀಕರಿಸಿದ್ದಾನೆ.

ಹೊಯ್ಸಳ ಅರಸ ವಿಷ್ಣುವರ್ಧನನು ಶ್ರೀ ರಾಮಾನುಜರ ಪ್ರಭಾವಕ್ಕೊಳಗಾಗಿ ವೈಷ್ಣವ ಧರ್ಮವನ್ನು ಸ್ವೀಕರಿಸಿದ ಮೇಲೆ ನಿರ್ಮಿಸಿದ ಹಲವು ನಾರಾಯಣ ಕ್ಷೇತ್ರಗಳಲ್ಲಿ ಇದೂ ಒಂದೊಂದು ಪ್ರತೀತಿ.

ಕುಮಾರವ್ಯಾಸನು ಅಸೀನನಾಗಿದ್ದ ಕಲ್ಲು ಮಂಟಪಕ್ಕೆ ವರ್ಣರಂಜಿತ ನೆಲಹಾಸುಗಳನ್ನು ಅಳವಡಿಸಿಯೋ ಪ್ರಾಚೀನ ಕಂಬ, ಶಿಲ್ಪಗಳಿಗೆ ಗಾಢವಾದ ಬಣ್ಣ ಬಳಿದೋ ಆಧುನಿಕರೂ ತಮ್ಮ ಕಾಣಿಕೆ ಸಲ್ಲಿಸಿದ್ದಾಗಿದೆ.

# ಆರೋಗ್ಯದ ನೈವೇದ್ಯ ಬೆಲ್ಲ



ಮೂಲ. ಡಾ|| ಸಿ.ಬಿ. ಮಧುಸೂದನಶರ್ಮ

ಅನುವಾದ : ಶ್ರೀಮತಿ

ಭಾರತೀಯ ಸಂಸ್ಕೃತಿ ಸಂಪ್ರದಾಯಗಳಲ್ಲಿ, ಆಚಾರ ವ್ಯವಹಾರಗಳಲ್ಲಿ ಬೆಲ್ಲದ್ದೇ ಅಗ್ರಸ್ಥಾನವೆಂದರೆ ಅತಿಶಯೋಕ್ತಿಯಾಗಲಾರದು.

ಪೂಜೆ - ಪುನಸ್ಕಾರ, ಹಬ್ಬ - ಹರಿದಿನ, ವ್ರತ - ನೇಮ, ಮದುವೆ ಸಮಾರಂಭಗಳು.ಹೀಗೆ ವಿವಿಧ ಸಂದರ್ಭಗಳಲ್ಲಿ ನಾವು ಬೆಲ್ಲವನ್ನು ಸರ್ವೇಸಾಧಾರಣವಾಗಿ ಬಳಸುತ್ತಲೇ ಇರುತ್ತೇವೆ.

ಭಗವಂತನಿಗೆ ನಿವೇದಿಸುವ ವಿವಿಧಮಯ ಆಹಾರ ಪದಾರ್ಥಗಳಲ್ಲಿ ಹೆಚ್ಚಾಗಿ ಕಬ್ಬಿನ ರಸದಿಂದ ತಯಾರಾಗುವ ಬೆಲ್ಲ ಇಲ್ಲವೇ ಸಕ್ಕರೆಯಿಂದ ತಯಾರಿಸಿದ ಸಿಹಿ ಪದಾರ್ಥಗಳನ್ನು ಬಳಸುವುದೇ ಹೆಚ್ಚು. ಅತ್ಯಂತ ಪ್ರಶಸ್ತವಾದ, ಪವಿತ್ರವಾದ ಸತ್ವಯುತವಾದ ಶುಭ್ರವಾಗಿ ತಯಾರಿಸಿದ ಆ ಪ್ರಸಾದವನ್ನು ನಾವು ಸ್ವೀಕರಿಸುವುದರಿಂದ ನಮ್ಮ ದೈಹಿಕ ಮಾನಸಿಕ ದೋಷಗಳು ಸಂದಿಸಿ, ಸಮನ್ವಯ ಸ್ಥಿತಿ ಏರ್ಪಡುತ್ತದೆ.

ಕಬ್ಬಿನ ರಸವನ್ನು ಚೆನ್ನಾಗಿ ಕುದಿಸಿ,ಘನೀಕರಿಸಿ ಬೆಲ್ಲವನ್ನು ತಯಾರು ಮಾಡುತ್ತಾರೆ. ಸಂಸ್ಕೃತದಲ್ಲಿ 'ಗುಡಂ' ಎಂದೂ, ಹಿಂದಿಯಲ್ಲಿ 'ಗೂಡ್' ಎಂದೂ, ಕನ್ನಡದಲ್ಲಿ 'ಬೆಲ್ಲ' ವೆಂದೂ, ತಮಿಳಿನಲ್ಲಿ 'ವೆಲ್ಲಂ' ಎಂದೂ ಮಲಯಾಳದಲ್ಲಿ 'ಶರ್ಕರ' ಎಂದೂ, ಆಂಗ್ಲ ಭಾಷೆಯಲ್ಲಿ 'ಜಾಗೇರಿ' ಅಥವಾ 'ಟ್ರಿಯಾಕಿಲ್' ಎಂದು ಕರೆಯುತ್ತಾರೆ.

"ಗ್ರಾಮಿನೇ" ಎಂಬ ವೃಕ್ಷ ಕುಟುಂಬಕ್ಕೆ ಸೇರಿದ ಕಬ್ಬನ್ನು ಶಾಸ್ತ್ರೀಯವಾಗಿ 'ಷಾಕೇರಂ ಅಫೀಷ್‌ನಾಲಿಸ್' ಎಂದು ವ್ಯವಹರಿಸುತ್ತಾರೆ.

ಹಳೆಯ ಬೆಲ್ಲವು ಪಥ್ಯಕರವೊಂದೇ ಅಲ್ಲದೇ ಶರೀರಕ್ಕೆ ಹಿತಕರವಾದುದು. ಹೊಸ ಬೆಲ್ಲ ಅಪಥ್ಯ ಹಾಗೂ ಅಹಿತಕರವಾದುದೆಂದೂ ನಮ್ಮ ಸಾಂಪ್ರದಾಯಿಕ ವೈದ್ಯ ಶಾಸ್ತ್ರವು ಘೋಷಿಸುತ್ತದೆ. ಈ ಬೆಲ್ಲವನ್ನು ಆಹಾರ ಪದಾರ್ಥಗಳ ಹಾಗೂ ಪಾಕಶಾಲೆಯ ತಯಾರಿಕೆಗಳಲ್ಲೊಂದೇ ಅಲ್ಲದೆ ವಿವಿಧ ವ್ಯಾಧಿಗಳ ನಿವಾರಣೆಯಲ್ಲಿ ಸಹಾ ಔಷಧಿಯಾಗಿ ನಮ್ಮ ವೈದ್ಯಕೀಯ ರಂಗದಲ್ಲಿ ಬಳಸುತ್ತಾರೆ.

ಯಾವ್ಯಾವ ವ್ಯಾಧಿಗಳ ನಿವಾರಣೆಯಲ್ಲಿ ಈ ಬೆಲ್ಲವನ್ನು ವಿನಿಯೋಗಿಸಿ ಸಮಸ್ಯೆಗಳಿಂದ ಹೇಗೆ ಹೊರ ಬರಬಹುದೆಂದು ಪ್ರಸ್ತುತ ತಿಳಿದುಕೊಳ್ಳೋಣ.

**ಋತುಕ್ರಮದ ನೋವಿಗೆ**

ಮುಟ್ಟಾದ ಕೂಡಲೇ ಹೆಂಗಸರು ಅಥವಾ ಬಾಲೆಯರು ಎರಡು ಟೀ ಚಮಚ ಬೆಲ್ಲ, ಒಂದು ಟೀಸ್ಪೂನ್ ತುಪ್ಪ, ಕಾಲು ಸ್ಪೂನ್ ಕರಿಮೆಣಸಿನ ಪುಡಿ ಕಲಿಸಿ ತಿನ್ನಬೇಕು. ಎರಡನೇ ದಿನ,ಮೂರನೇ ದಿನ ಹೀಗೆ ಮುಟ್ಟಿನ ದಿನಗಳವರೆಗೆ ಹೀಗೆಯೇ ಸೇವಿಸಬೇಕು. ಹೀಗೆ ಪ್ರತಿ ಮುಟ್ಟಿನ ಸಮಯದ ಮೂರೂ ದಿನಗಳು ಹೇಳಿದ ಮಸಾಲವನ್ನು ಸೇವಿಸುವುದರಿಂದ ಸೂಕ್ತವಾದ ಫಲಿತಾಂಶ ದೊರೆಯುತ್ತದೆ.

ಇಲ್ಲವೇ ಮುಟ್ಟಾದ ಮೂರನೇ ದಿನ ಎರಡು ಬಾರಿ ಒಂದು ಬಾರಿಗೆ ಗುಲ ಗಂಜಿಯಷ್ಟು ಬೆಲ್ಲವನ್ನು ಕುಟ್ಟಿ ಮಧ್ಯೆದಲ್ಲಿ ಬಟಾಣಿಯಷ್ಟು ಸುಣ್ಣವನ್ನು ತೂರಿಸಿ ಮಾತ್ರೆಗಳಂತೆ ಮಾಡಿ ನುಂಗಬೇಕು. ಇದರಿಂದ ಒಳ್ಳೆಯ ಪರಿಣಾಮ ದೊರಕುತ್ತದೆ.

### ಪಾರ್ಶ್ವ ತಲೆನೋವಿಗೆ

100 ಗ್ರಾಂ ತುಪ್ಪದಲ್ಲಿ 100 ಗ್ರಾಂ ಬೆಲ್ಲದ ಪುಡಿಯನ್ನು ಕಲಸಿಟ್ಟುಕೊಂಡು ದಿನವೂ ಎರಡು ಬಾರಿ ಒಂದು ಬಾರಿಗೆ 5 ರಿಂದ 10 ಗ್ರಾಂ ಔಷಧಿಯನ್ನು ಸೇವಿಸುತ್ತಿರಬೇಕು.

ನೋವಿದ್ದಾಗ ಮಾತ್ರ ಬೆಲ್ಲ, ಶುಂಠಿಯನ್ನು ತೆಗೆದುಕೊಂಡು ಚೆನ್ನಾಗಿ ನಾದಿ ರಸವನ್ನು ತೆಗೆದು ಒಂದೊಂದು ಮೂಗಿನ ಹೊಳ್ಳೆಯಲ್ಲಿ 2-3 ಹನಿ ಹಾಕಿಕೊಳ್ಳುತ್ತಿದ್ದರೆ ಸಮಸ್ಯೆ ಕ್ಷಣದಲ್ಲಿ ದೂರವಾಗುತ್ತದೆ.

### ಸಲೀಸು ಮೂತ್ರವಿಸರ್ಜನೆಗೆ

50 ಗ್ರಾಂ ಬೆಲ್ಲದ ಪುಡಿ, 50 ಗ್ರಾಂ ಜೀರಿಗೆ ಪುಡಿ ಕಲಸಿಟ್ಟುಕೊಂಡು ಬೆಳಗ್ಗೆ, ಸಂಜೆ ಒಂದು ಬಾರಿಗೆ ಅರ್ಧ ಟೀ ಸ್ಪೂನ್‌ನಂತೆ 100 ಮಿ.ಲೀ.ನೀರಿನಲ್ಲಿ ಕಲಸಿ ಕುಡಿಯುತ್ತಿದ್ದರೆ ಮೂತ್ರದಲ್ಲಿ ಉರಿ, ನೋವುಗಳು ತಗ್ಗಿ ವಿಸರ್ಜನೆ ಸಲೀಸಾಗುತ್ತದೆ.

### ಮೊಣಕಾಲು ಮತ್ತು ಸೊಂಟ ನೋವಿಗೆ

ಬೆಲ್ಲ ಮತ್ತು ಸುಣ್ಣವನ್ನು ಕಲಸಿ ಸ್ವಲ್ಪವೇ ನೀರು ಸೇರಿಸಿ ಅಥವಾ ಬೆಲ್ಲ ಮತ್ತು ಹುಣಸೇ ಹಣ್ಣಿನ ನೀರಿನ ಗೊಜ್ಜನ್ನಾಗಲೀ ಕಲಸಿ, ಮೆತ್ತಗೆ ನಾದಿ ಲೇಪಿಸಿಕೊಳ್ಳುತ್ತಿರಬೇಕು. ಇದರಿಂದ ಸಂದಿ - ಕೀಲು ನೋವುಗಳು ಸಹಾ ಗುಣವಾಗುತ್ತವೆ.

ಒಂದು ಅಗಲವಾದ ಗಾಜಿನ ಸೀಸೆಯಲ್ಲಿ ಒಂದು ಅಳತೆ ನೆಲ್ಲಿಕಾಯಿಗಳನ್ನು ಹಾಕಿ ಅದರ ಮೇಲೆ ಬೆಲ್ಲದ ಪುಡಿಯನ್ನು ಸುರಿಯಬೇಕು. ಅದರ ಮೇಲೆ ಮತ್ತೊಂದು ಸಾರಿ ನೆಲ್ಲಿಕಾಯಿ, ಬೆಲ್ಲದ ಪುಡಿ ಹಾಕಬೇಕು. ಹೀಗೆ 3-4 ಪದರಗಳು ಹಾಕಿ ಬಾಯಿ ಮುಚ್ಚಿ 4-5 ದಿನಗಳು ಹಾಗೆಯೇ ಇದ್ದಲ್ಲಿ ನೆಲ್ಲಿ ಕಾಯಿಗಳು ಮೆತ್ತಗಾಗುತ್ತದೆ. ನಂತರ ನಿತ್ಯ ಒಂದು ನೆಲ್ಲಿಕಾಯನ್ನು ಸೇವಿಸುತ್ತಿದ್ದರೆ ರೋಗನಿರೋಧಕ ಶಕ್ತಿ ವೃದ್ಧಿಗೊಂಡು ಯಾವ ವ್ಯಾಧಿಗಳು ಬಾಧಿಸದೇ ಇರುತ್ತವೆ.



### ಊತ - ಬಾವುಗಳಿಗೆ

25 ಗ್ರಾಂ ಜೊತೆಗೆ ಹಳೆಯ ಬೆಲ್ಲ, ಶುಂಠಿ, ಹಿಪ್ಪಲಿ, ಕರಿಎಳ್ಳು ಚೂರ್ಣಗಳನ್ನು ಕಲಸಿ ಅದರಲ್ಲಿ ಆಯುರ್ವೇದ ಔಷಧಾಲಯಗಳಲ್ಲಿ ದೊರೆಯುವ 'ಪುರನ್ನವಾದಿ ಮಂಡೂರ' ಎಂಬ ಔಷಧಿಯನ್ನು 10 ಗ್ರಾಂ ಕಲಸಿಟ್ಟುಕೊಂಡು ದಿನಕ್ಕೆರಡು ಬಾರಿ ಬಾರಿಯೊಂದಕ್ಕೆ 1-2 ಗ್ರಾಂ ಪುಡಿಯನ್ನು ಹಿಡಿಸುವಷ್ಟು ಜೇನಿನಲ್ಲಿ ಕಲಸಿ ಸೇವಿಸುತ್ತಿದ್ದರೆ ಕೈಕಾಲು, ಬಾವು ಮತ್ತು ಮುಖ ಊದುವುದು ತಗುತ್ತದೆ.

### ಕೀಲು ನೋವಿಗೆ

ದಿನವೂ ಒಂದೆರಡು ಸಾರಿ ಒಂದು ಬಾರಿಗೆ 200 ಮಿ.ಲಿ. ಹಾಲಿನಲ್ಲಿ 5 ಗ್ರಾಂ ಬೆಲ್ಲ,5 ಮಿ.ಲೀ ತುಪ್ಪ, ಒಂದೆರಡು ಗ್ರಾಂ ಶುಂಠಿ ಪುಡಿ ಕಲಸಿ ಸೇವಿಸುತ್ತಿರಬೇಕು.

### ರೋಗ ನಿರೋಧಕ ಶಕ್ತಿ ವೃದ್ಧಿಗೆ

ಅರ್ಧ ಕಿಲೋ ಬೆಲ್ಲ, ಅರ್ಧ ಕಿಲೋ ನೆಲ್ಲಿ ಕಾಯಿಯನ್ನು ತೆಗೆದುಕೊಂಡು ಮೊದಲು ಒಂದು ಅಗಲವಾದ ಗಾಜಿನ ಸೀಸೆಯಲ್ಲಿ ಒಂದು ಅಳತೆ ನೆಲ್ಲಿಕಾಯಿಗಳನ್ನು ಹಾಕಿ ಅದರ ಮೇಲೆ ಬೆಲ್ಲದ ಪುಡಿಯನ್ನು ಸುರಿಯಬೇಕು. ಅದರ ಮೇಲೆ ಮತ್ತೊಂದು ಸಾರಿ ನೆಲ್ಲಿಕಾಯಿ, ಬೆಲ್ಲದ ಪುಡಿ ಹಾಕಬೇಕು. ಹೀಗೆ 3-4 ಪದರಗಳು ಹಾಕಿ ಬಾಯಿ ಮುಚ್ಚಿ 4-5 ದಿನಗಳು ಹಾಗೆಯೇ ಇದ್ದಲ್ಲಿ ನೆಲ್ಲಿ ಕಾಯಿಗಳು ಮೆತ್ತಗಾಗುತ್ತದೆ. ನಂತರ ನಿತ್ಯ ಒಂದು ನೆಲ್ಲಿಕಾಯನ್ನು ಸೇವಿಸುತ್ತಿದ್ದರೆ ರೋಗನಿರೋಧಕ ಶಕ್ತಿ ವೃದ್ಧಿಗೊಂಡು ಯಾವ ವ್ಯಾಧಿಗಳು ಬಾಧಿಸದೇ ಇರುತ್ತವೆ.

### ಮಲಬದ್ಧತೆಗೆ

50 ಗ್ರಾಂ ಬೆಲ್ಲದ ಪುಡಿಯಲ್ಲಿ 50 ಗ್ರಾಂ ಸುನಾಮುಖಿ ಪುಡಿಯನ್ನು ಕಲಸಿ ಕುಟ್ಟಿಟ್ಟುಕೊಂಡು ರಾತ್ರಿ ಮಲಗುವಾಗ 100 ಮಿ.ಲೀ ಉಗುರುಬೆಚ್ಚಗಿನ ನೀರಿನಲ್ಲಿ 3 ರಿಂದ 5 ಗ್ರಾಂ ಚೂರ್ಣವನ್ನು ಕಲಸಿ ಸೇವಿಸುತ್ತಿರಬೇಕು.

### ಚೇಳು ಕಡಿತಕ್ಕೆ

ಬೆಲ್ಲ ಹಾಗೂ ಸಾಸಿವೆ ಯನ್ನು ಸಮಾನವಾಗಿ ಕಲಸಿ ನಾದಿ ಮೇಲೆ ಬಾರ್ಡರಿನ ತರಹ ಹಾಕಿದಲ್ಲಿ ಚೇಳುಗಳಿಂದ ಉಂಟಾಗಬಹುದಾದ ನೋವು ಉರಿ, ವೇದನೆಗಳು ತಗ್ಗುತ್ತವೆ.



**ಜಲಬಾಧೆಗಳು**

ಬೆಲ್ಲ ಪುಡಿ, ಸಾಸಿವೆ ಪುಡಿ, 10 ಗ್ರಾಂ ತೆಗೆದು ಕೊಂಡು ಹಿಡಿಸುವಷ್ಟು ನೀರನ್ನು ಕಲಿಸಿ ನಾದಿ ಬಟಾಣಿ ಗಾತ್ರದಷ್ಟು ಮಾತ್ರೆಗಳನ್ನು ಮಾಡಿ 2 ಅಥವಾ 3 ಸಾರಿ ಒಂದು ಸಾರಿಗೆ ಒಂದರಂತೆ ಸೇವಿಸಬೇಕು.

**ರಕ್ತಹೀನತೆ,ಕ್ಯಾಲ್ಸಿಯಂ ಲೋಪಗಳಿಗೆ**

ಬೆಲ್ಲ, ಕಡಲೆಕಾಯಿ ಬೀಜಗಳನ್ನು ಸೇರಿಸಿ ಕುಟ್ಟಿದ ಚೂರ್ಣವನ್ನು, ಬಿಳಿಯೆಳ್ಳು ಕುಟ್ಟಿ ಮಾಡಿದ ಚೂರ್ಣ, ರಾಗಿಯನ್ನು ಬೀಸಿ ಮಾಡಿದ ಚೂರ್ಣವನ್ನು ಒಂದೊಂದನ್ನು 100 ಗ್ರಾಂನಂತೆ ಕಲಿಸಿಟ್ಟುಕೊಂಡು ಮುಂಜಾನೆ ಸಂಜೆ ಒಂದು ಬಾರಿಗೆ ಅರ್ಧ ಟೀ ಚಮಚದಿಂದ ಒಂದು ಟೀ ಚಮಚದವರೆಗೆ 50 ಮಿ.ಲೀ. ಉಗುರು ಬೆಚ್ಚಗಿನ ನೀರಿನಲ್ಲಿ ಕಲಿಸಿ ಸೇವಿಸುತ್ತಿರಬೇಕು. ಇದರಿಂದ ರಕ್ತ ಹೀನತೆಯ ಸಮಸ್ಯೆ ಬಗೆ ಹರಿಯುವುದೊಂದೇ ಅಲ್ಲದೇ ಶರೀರಕ್ಕೆ ಬೇಕಾದಷ್ಟು ಕ್ಯಾಲ್ಸಿಯಂ ಕೂಡ ದೊರೆಯುತ್ತದೆ.ಒಳ್ಳೆಯ ಪೋಷಕ ದ್ರವ್ಯವಾಗಿ ಆಹಾರ ಔಷಧಿಯಾಗಿ ಉಪಯೋಗ ಗೊಳ್ಳುತ್ತದೆ.

**ಮೈಯುರಿಗೆ**

ದಿನವೂ ಎರಡು ಬಾರಿ ಒಂದು ಬಾರಿಗೆ 1-2 ಗ್ರಾಂ ಬೆಲ್ಲದ ಪುಡಿಯನ್ನು 20 ಮಿ.ಲೀ. ಕೊತ್ತಂಬರಿ ರಸದಲ್ಲಿ ಕಲಿಸಿ ಸೇವಿಸಬೇಕು.

**ಅತಿಆಯಾಸ, ಶ್ರಮದಿಂದಾಗುವ ಬಳಲಿಕೆಗೆ**

200 ಮಿ.ಲೀ. ನೀರಿನಲ್ಲಿ ಅರ್ಧ ಟೀ ಸ್ಪೂನ್ ಪುಡಿ ಅರ್ಧದಷ್ಟು ನಿಂಬೆರಸ, 3-4 ಚಿಟಿಕೆಯಷ್ಟು ಕಾಳಮೆಣಸಿನ ಪುಡಿ ಕಲಿಸಿ ಸೇವಿಸಬೇಕು.

**ನಿದ್ರೆಯಲ್ಲಿ ಮೂತ್ರ ವಿಸರ್ಜನಕ್ಕೆ**

ಬೆಲ್ಲ, ಕರಿಯೆಳ್ಳು ಪುಡಿ, ಜೋಳದ ಕಾಳಿನ ಪುಡಿ, ಎರಡು ಕೊಬ್ಬರಿ ತುರಿ ಒಂದೊಂದನ್ನು 50 ಗ್ರಾಂನಂತೆ ಕಲಿಸಿಟ್ಟುಕೊಂಡು ಮುಂಜಾನೆ.ಸಂಜೆ ವಯಸ್ಸಿಗನುಸಾರವಾಗಿ 1 ರಿಂದ 5 ಗ್ರಾಂ ಔಷಧವನ್ನು ಚಪ್ಪರಿಸಬೇಕು.

ವಿವಿಧ ರಸಾಯನಗಳು, ಲೇಹ್ಯಗಳಂಥ ಆಯುರ್ವೇದ ಔಷಧಿಗಳ ತಯಾರಿಕೆಯಲ್ಲಿ ಕೂಡಾ ಬೆಲ್ಲವನ್ನು ವಿಶೇಷವಾಗಿ ಬಳಸುತ್ತಾರೆ.





# ಸಂಸ್ಕಾರ ಸಮನ್ವಿತ ಜೀವನವೃತ್ತಿ

ರಾ.ನ.ನ.ಮೂರ್ತಿ

(ಕಳೆದ ಸಂಚಿಕೆಯಿಂದ ಮುಂದುವರಿಯುವುದು)

ಇಂತಹ ಮಾನಸಪೂಜೆಯ ಸಂಕ್ಷಿಪ್ತ ವಿಧಾನವನ್ನು ಸಹ ಪುರಾಣಗಳಲ್ಲಿ ವರ್ಣಿಸಿದ್ದಾರೆ. ಅವು ಹೀಗಿವೆ.

1.ಓಂ ಲಂ ಪೃಥಿವ್ಯಾತ್ಮಕಂ ಗಂಧಂ ಪರಿಕಲ್ಪಯಾಮಿ।

(ಪ್ರಭೋ! ನಾನು ಪೃಥ್ವಿರೂಪ ಗಂಧ (ಚಂದನ)ವನ್ನು ತಮಗೆ ಅರ್ಪಿಸುತ್ತೇನೆ.)

2.ಓಂ ಹಂ  ಆಕಾಶಾತ್ಮಕಂ ಪುಷ್ಪಂ ಪರಿಕಲ್ಪಯಾಮಿ।

(ಪ್ರಭೋ ಆಕಾಶರೂಪದ ಪುಷ್ಪವನ್ನು ನಾನು ತಮಗೆ ಅರ್ಪಿಸುತ್ತೇನೆ)

3.ಓಂ ಯಾಂ ವಾಯ್ವಾತ್ಮಕಂ ಧೂಪಂ ಪರಿಕಲ್ಪಯಾಮಿ।

(ಪ್ರಭೋ! ವಾಯುದೇವನ ರೂಪದಲ್ಲಿ ಧೂಪವನ್ನು ನಿಮಗೆ ಅರ್ಪಿಸುತ್ತೇನೆ.)

4.ಓಂ ರಂ ವಹ್ನ್ಯಾತ್ಮಕಂ ದೀಪಂ ದರ್ಶಯಾಮಿ।

(ಪ್ರಭೋ! ನಾನು ಅಗ್ನಿದೇವನ ರೂಪದಲ್ಲಿ ದೀಪವನ್ನು ತಮಗೆ ಅರ್ಪಿಸುತ್ತಿದ್ದೇನೆ.)

5.ಓಂ ವಂ ಅಮೃತಾತ್ಮಕಂ ನೈವೇದ್ಯಂ ನಿವೇದಯಾಮಿ।

(ಪ್ರಭೋ! ನಾನು ಅಮೃತಕ್ಕೆ ಸಮಾನವಾದ ನೈವೇದ್ಯವನ್ನು ನಿಮಗೆ ಅರ್ಪಿಸುತ್ತೇನೆ.)

6.ಓಂ ಸೌಂ ಸರ್ವಾತ್ಮಕಂ ಸರ್ವೋಪಚಾರಂ ಸಮರ್ಪಯಾಮಿ।

(ಪ್ರಭೋ! ನಾನು ಸರ್ವಾತ್ಮಕ ರೂಪದಲ್ಲಿ ಜಗತ್ತಿನ ಎಲ್ಲ ಉಪಚಾರ (ಸೇವೆ)ಗಳನ್ನು ತಮ್ಮ ಚರಣಗಳಲ್ಲಿ ಸಮರ್ಪಿಸುತ್ತೇನೆ.)

ಈ ಮಂತ್ರಗಳಿಂದ ಭಾವನಾಪೂರ್ವಕ ಮಾನಸ ಪೂಜೆಯನ್ನು ಮಾಡಬಹುದಾಗಿದೆ.

ಭೋಜನದ ರಸದಿಂದಲೇ ಶರೀರ, ಪ್ರಾಣ ಮತ್ತು ಮನಸ್ಸು ನಿರ್ಮಾಣಗೊಂಡಿರುವುದು. ಮಾನಚಿತ್ತದಿಂದ ದೇವರು ಮತ್ತು ಮಂತ್ರದ ಫಲ ಪ್ರಾಪ್ತಿ (ಪ್ರಸಾದ) ಸಿದ್ಧವಾಗುವುದಿಲ್ಲ. ಅಶುದ್ಧ ಆಹಾರದಿಂದ ರೋಗ, ಕ್ಷೋಭೆ ಮತ್ತು ದುಃಖವಾಗುತ್ತದೆ. ಶುದ್ಧ ಭೋಜನದಿಂದ ಮನಸ್ಸು ಪವಿತ್ರವಾಗುತ್ತದೆ. ಅನ್ಯಾಯ, ಅಪ್ರಾಮಾಣಿಕತೆ, ಕಳ್ಳತನ ದರೋಡೆ ಇತ್ಯಾದಿಗಳಿಂದ ಸಂಪಾದಿಸಿದ ದೂಷಿತವಾದ ಆಹಾರಗಳ ಮೂಲಕ ಶುದ್ಧ ಚಿತ್ತ ನಿರ್ಮಾಣವಾಗುವುದು ಅಸಂಭವವೇ ಸರಿ, ಹೀಗೆಯೇ  ಅಶುದ್ಧ ಸ್ಥಳದಲ್ಲಿಟ್ಟ ಹಾಲು, ಮೊಸರು ಮುಂತಾದವು. ನಾಯಿ ಮುಂತಾದ ಪ್ರಾಣಿಗಳಿಂದ ಸ್ಪರ್ಷವಾದ ಪದಾರ್ಥಗಳೂ ಸಹ ತ್ಯಾಜ್ಯಯೋಗ್ಯವೇ. ಹಸುವಿನ ಹಾಲು, ಮೊಸರು ತುಪ್ಪ, ಬಿಳಿ ಎಳ್ಳು , ಹೆಸರುಕಾಳು, ಗೆಡ್ಡೆ - ಗೆಣಸು, ಬಾಳೆಹಣ್ಣು, ಮಾವು, ತೆಂಗು, ಮೊಸಂಬಿ, ಕಿತ್ತಲೆ, ನೆಲ್ಲಿಕಾಯಿ, ತೊಳೆದ ಅಕ್ಕಿ, ಜೋಳ, ಜೀರಿಗೆ ಮುಂತಾದವು  ಹವಿಷ್ಯಾನ್ನ ವ್ರತಗಳಲ್ಲಿ ಉಪಾದೇಯಗಳು. ಜೇನುತುಪ್ಪ, ಕ್ಷಾರ ಉಪ್ಪು, ಎಣ್ಣೆ, ಶುಂಠಿ, ಈರುಳ್ಳಿ, ಗಜ್ಜರಿ (ಕ್ಯಾರೆಟ್) ಉದ್ದು, ಕೆಂಪು ಬೇಳೆ, ಕಡ್ಲೆಕಾಳು,ತಂಗಳು ಪದಾರ್ಥ ಮತ್ತು ಪರಾನ್ನ ಇತ್ಯಾದಿಗಳು ತ್ಯಾಜ್ಯ. ಭಿಕ್ಷೆಯನ್ನು ಪಡೆಯುವ ಅಧಿಕಾರ ಹೊಂದಿರುವ ಸನ್ಯಾಸಿಗಳಿಗೆ (ಮುಂತಾದವರಿಗೆ) ಭಿಕ್ಷೆ ಪರಾನ್ನವಲ್ಲ. ಆದರೆ ಭಿಕ್ಷೆಯನ್ನು ಸದಾಚಾರಿಯಾದವನು ಹಾಗೂ ಪವಿತ್ರ ಗೃಹಸ್ಥನಿಂದಲೇ ಪಡೆಯಬೇಕು.

ಮಂತ್ರಾನುಷ್ಠಾನದಲ್ಲಿ ಬ್ರಹ್ಮಚರ್ಯ ಹಾಗೂ ಪಾವಿತ್ರ್ಯ ಪೂರ್ವಕ ಭೂ - ಶಯನ ಇತ್ಯಾದಿ ಅವಶ್ಯಕ. ಅನುಷ್ಠಾನ ಕಾಲದಲ್ಲಿ ಕುಟಿಲ ವ್ಯವಹಾರ, ಕ್ಷೌರ ಕರ್ಮ,ತೈಲಾಭ್ಯಂಗ ಹಾಗೂ ಭೋಗಹೊಂದಿ ಭೋಜನ ಮಾಡುವಂತಿಲ್ಲ. ಸಾಧಕನಾದವನು ಯಥಾ ಸಾಧ್ಯ ಪವಿತ್ರನದಿಗಳು, ದೇವ ತೀರ್ಥಗಳು, ಸರೋವರ, ಪುಷ್ಕರಿಣಿ ಮುಂತಾದವುಗಳಲ್ಲಿ ಮಂತ್ರೋಚ್ಚಾರ ಪೂರ್ವಕ ಸ್ನಾನ ಮಾಡಬೇಕು.ಸಾಧ್ಯವಾದಷ್ಟೂ ಮೂರು ಹೊತ್ತೂ (ತ್ರಿಸಂಧ್ಯೆ) ಸಂಧ್ಯಾವಂದನೆ ಮತ್ತು ಇಷ್ಟ ದೇವತಾ

ಪೂಜೆ ಮಾಡಬೇಕು. ಶಿಖೆಯನ್ನು ಬಿಚ್ಚಿ, ನಿರ್ವಸ್ತ್ರರಾಗಿ,ಒಂದು ವಸ್ತ್ರಧರಿಸಿ,ತಲೆಗೆ ಪೇಟಕಟ್ಟಿ (ರುಮಾಲು),ಅಪವಿತ್ರರಾಗಿ, ಅಲ್ಲದೆ ಓಡಾಡಿಕೊಂಡು ಜಪ ಮಾಡುವುದು ನಿಷಿದ್ಧ. ಜಪದ ಸಮಯದಲ್ಲಿ ಒಂದು ಸುತ್ತು ಮಂತ್ರವನ್ನು ಜಪಮಾಣಿ ಪೂರೈಸದೇ ನಡುವೇ ಮಾತನಾಡುವಂತಿಲ್ಲ.ಜಪದ ಪ್ರಾರಂಭ ಮತ್ತು ಅಂತ್ಯದಲ್ಲಿ ಆಚಮನ ಮಾಡುವುದು ವಿಧಿ, ಕೊಳಕು ಬಟ್ಟೆಯನ್ನುಟ್ಟು, ಕೇಶ ಹರಡಿಕೊಂಡು ಮತ್ತು ಉಚ್ಚ ಸ್ವರದಲ್ಲಿ ಜಪ ಮಾಡುವುದು ಶಾಸ್ತ್ರ ವಿರುದ್ಧ. ಜಪಮಾಡುವಾಗ ಈ ಕರ್ಮಗಳೆಲ್ಲ ನಿಷಿದ್ಧವು.ಸೋಮಾರಿತನ, ಜಂಭ, ನಿದ್ರೆ, ಸೀನು, ಉಗಿಯುವುದು, ಹೆದರಿಕೆ, ಅಪವಿತ್ರ ಅಂಗಗಳ ಸ್ಪರ್ಶ ಮತ್ತು ಕೋಪ ಜಪ ಮಾಡುವಾಗ ಸ್ತ್ರೀಯರು, ಅಬ್ರಾಹ್ಮಣರು, ಪತಿತರು, ವ್ರಾತ್ಯರು,ನಾಸ್ತಿಕರು ಮುಂತಾದವರೊಂದಿಗೆ ಮಾತನಾಡಬಾರದು. ಎತ್ತರ ಧ್ವನಿಯಲ್ಲಿ ಮಾತುಕತೆ, ಸುಳ್ಳು ಮತ್ತು ಮೋಸದ ಮಾತುಗಳನ್ನು ಆಡಬಾರದು. ತಮ್ಮ ಆಸನ, ಶಯ್ಯೆ, ವಸ್ತ್ರ ಮುಂತಾದವುಗಳನ್ನು ಶುದ್ಧ ಹಾಗೂ ಸ್ವಚ್ಛವಾಗಿಡಬೇಕು. ಅಂಗಲೇಪ, ಅತ್ತರು (ಸೆಂಟ್) , ಹೂವಿನಹಾರವನ್ನು ಬಳಸಬಾರದು ಸುಡುವ ಬಿಸಿನೀರಿನಿಂದ ಸ್ನಾನಮಾಡಬಾರದು. ಮಲಗಿ, ಆಸನವಿಲ್ಲದೆ,ನಡೆದಾಡಿಕೊಂಡು, ಏನನ್ನಾದರೂ ತಿನ್ನುತ್ತಾ! ಮಾಲೆಧರಿಸದೆ ಯಾರು ಜಪ ಮಾಡುತ್ತಾರೋ ಅದನ್ನು ಅನುಷ್ಠಾನದ ಲೆಕ್ಕಕ್ಕೆ ಸೇರಿಸುವುದಿಲ್ಲ. ಯಾರ ಮನಸ್ಸಿನಲ್ಲಿ ವ್ಯಾಕುಲತೆ, ಕ್ಷೋಭೆ, ಭ್ರಾಂತಿ, ಹಸಿವು ಶಾರೀರಿಕ ನೋವು, ಅಶುದ್ಧ ಸ್ಥಳ, ಕಗ್ಗತ್ತಲು ಆವರಿಸಿಕೊಂಡಿರುವುದೋ ಅಂತಹ ಸಂದರ್ಭ ಜಪ ಮಾಡಬಾರದು ಚಪ್ಪಲಿ ಹಾಕಿಕೊಂಡು, ಕಾಲುಗಳನ್ನು ಚಾಚಿಕೊಂಡು,ಜಪಿಸುವುದೂ ಸಹ ನಿಷಿದ್ಧ. ಇನ್ನೂ ಹಲವು ನಿಯಮಗಳಿವೆ. ಅವುಗಳನ್ನು ತಿಳಿದು ಯಥಾ ಶಕ್ತಿ ಪಾಲಿಸುವುದು ಒಳ್ಳೆಯದು. ಇವೆಲ್ಲವೂ ಮಾನಸಜಪದ ನಿಯಮಗಳಲ್ಲ.

ಶಾಸ್ತ್ರಗಳಲ್ಲಿ ಜಪಯಜ್ಞವನ್ನು ಎಲ್ಲ ಯಜ್ಞಗಳಿಗಿಂತಲೂ ಶ್ರೇಷ್ಠವೆನ್ನುತ್ತಾರೆ. ಪದ್ಯಹಾಗೂ ನಾರದ ಪುರಾಣದಲ್ಲಿ ಸಮಸ್ತ ಯಜ್ಞವಾಚಿಕ (ಯಜ್ಞ)ಜಪದ ಹೋಲಿಕೆಯಲ್ಲಿ 1/16 ಭಾಗಕ್ಕೂ ಸಮನಲ್ಲ. ಉಪಾಂಶು ಜಪದ ಫಲವು ವಾಚಿಕ ಜಪಕ್ಕಿಂತ ನೂರರಷ್ಟು ಮತ್ತು ಮಾನಸಜಪಕ್ಕಿಂತ ಸಾವಿರದಷ್ಟು ಶ್ರೇಷ್ಠ.

ಮಾನಸ ಜಪವೆಂದರೆ - ಅರ್ಥಚಿಂತನೆ ಮಾಡುತ್ತಾ ಮನಸ್ಸಿನಲ್ಲಿಯೇ ಮಂತ್ರದ ವರ್ಣನೆ, ಸ್ವರ ಮತ್ತು ಪದಗಳನ್ನು ಆವೃತ್ತಿ ಮಾಡುವುದು. ಉಪಾಂಶು ಜಪದಲ್ಲಿ ಸ್ವಲ್ಪ ನಾಲಿಗೆ ಮತ್ತು ತುಟಿಗಳ ಚಲನೆ ಇರುತ್ತದೆ. ತಮ್ಮ ಕಿವಿಯವರೆಗಷ್ಟೇ ಅವರ ಧ್ವನಿ ಸೀಮಿತವಾಗಿರುತ್ತದೆ. ಬೇರೆಯವರು ಕೇಳಲಾರರು. ವಾಚಿಕಾ ಜಪವನ್ನು ಮಾತಿನ ಮೂಲಕ ಉಚ್ಚರಿಸುತ್ತಾರೆ.ಮೂರೂ ಪ್ರಕಾರದ ಜಪಗಳಲ್ಲಿ ಮನಸ್ಸಿನ ಮೂಲಕ ಇಷ್ಟ ದೈವ ಚಿಂತನೆಯಾಗಬೇಕು. ಮಾನಸಿಕ ಸ್ತೋತ್ರ ಪಾಠ ಮತ್ತು ಎತ್ತರದ ಧ್ವನಿಯಲ್ಲಿ ಉಚ್ಚಾರ ಪೂರ್ವಕ ಮಂತ್ರ ಜಪದಿಂದ ಫಲವೇನೂ ದೊರಕಲಾಗದು,ಸಾಧಕರಿಗೆ ಜಪಮಾಲೆ ಭಗವಂತನನ್ನು ಸ್ಮರಿಸಲು ಮತ್ತು ನಾಮ ಜಪದ ಸಂಖ್ಯೆಯ ಲೆಕ್ಕಕ್ಕೆ ಬಹಳ ಅನುಕೂಲವಾಗುತ್ತದೆ. ಇದರಿಂದ ಸಾಕಷ್ಟು ಲೆಕ್ಕದ ಪೂರೈಕೆಗೆ ಪ್ರೇರಣೆ ಸಿಕ್ಕುತ್ತದೆ. ಅಲ್ಲದೆ ಉತ್ಸಾಹ ಮತ್ತು ಶ್ರದ್ಧೆಗೆ ಯಾವುದೇ ರೀತಿಯಲ್ಲಿಯೂ ಕೊರತೆ ಉಂಟಾಗುವುದಿಲ್ಲ.ಯಾವುದೇ ಸಂಖ್ಯೆಯನ್ನು ಲೆಕ್ಕ ಹಾಕದೆ ಜಪ ಮಾಡುವವರೆಗೆ, ತಾವು ಜಪಮಾಡುತ್ತಿದ್ದೇವೆಯೋ ಅಥವಾ ಇಲ್ಲವೇ ಎಂಬ ಅರಿವೇ ಇರುವುದಿಲ್ಲ. ಕೈನಲ್ಲಿ ಜಪ ಮಾಲೆ ಇದ್ದರೆ ಈ ಪ್ರಮಾದ ಉಂಟಾಗುವುದಿಲ್ಲ. ಮನಸ್ಸು ಅತ್ತಿತ್ತವಾಲಿದರೆ ಕೈನಲ್ಲಿನ ಜಪಮಣಿ ನಿಂತು ಹೋಗುತ್ತದೆ. ಸಂಖ್ಯೆ ಮುಂದೆ ಹೋಗುವುದಿಲ್ಲ. ಜಪ ಮಾಲೆಯ ಮಣಿ ಮುಂದೆ ಹೋಗುತ್ತಿದ್ದರೆ ಬಾಯಿಂದಲೂ ಅದು ಗುನುಗುತ್ತಿರುತ್ತದೆ. ಸ್ವಲ್ಪ ಸಮಯದಲ್ಲಿಯೇ ಇವೆರಡೂ ಮನಸ್ಸನ್ನು ಆಕರ್ಷಿಸಲು ಸಹಾಯವಾಗುತ್ತದೆ.

ಪ್ರಮುಖವಾಗಿ 33 ಜನ ದೇವತೆಗಳು ಎನ್ನುತ್ತಾರೆ.:-

ಪ್ರಜಾಪತಿ, ಇಂದ್ರ, ದ್ವಾದಶ ಆದಿತ್ಯರು, ಎಂಟು ಮಂದಿ ವಸುಗಳು, ಹನ್ನೊಂದು ಮಂದಿ ರುದ್ರರು. ನಿರುಕ್ತದ ದೈವತಾ ಕಾಂಡದಲ್ಲಿ ದೇವತೆಗಳ ಸ್ವರೂಪದ ಸಂಬಂಧದಲ್ಲಿ ಚರ್ಚಿಸಿದ್ದಾರೆ.ಅಲ್ಲಿಯ ವರ್ಣನೆಯಿಂದ, ಅವರೆಲ್ಲರೂ ಕಾಮ ರೂಪಿಗಳೆಂದು ಅರ್ಥವಾಗುತ್ತದೆ.ವೇದಾಂತ ದರ್ಶನದಲ್ಲಿ - ದೇವತೆಗಳು ಒಂದೇ ಕಾಲಕ್ಕೆ ಅನೇಕ ಸ್ಥಳಗಳಲ್ಲಿ ಭಿನ್ನ ಭಿನ್ನ ರೂಪಗಳಲ್ಲಿ ಕಾಣಿಸಿ ತಾವು ಪೂಜೆ ಸ್ವೀಕರಿಸುತ್ತಾರೆ ಎಂದು ಹೇಳಿದೆ.ಶಾಸ್ತ್ರಗಳಲ್ಲಿ ದೇವತೆಗಳ ಧ್ಯಾನದ ಸುಸ್ಪಷ್ಟ ವಿಧಾನವನ್ನು ನಿರ್ದೇಶಿಸಿದ್ದಾರೆ. ಅದೇ ರೂಪದಲ್ಲಿ ಅವರ ಧ್ಯಾನ ಹಾಗೂ ಪೂಜೆ ಮಾಡಬೇಕು. ಎಲ್ಲ ಸಾಧನೆ ಹಾಗೂ ಪೂಜೆಗಳ ಅಂತಿಮ ಫಲವೆಂದರೆ, ಭಗವತ್ಪ್ರಾಪ್ತಿ ಮತ್ತು ಸಾಯುಜ್ಯ ಮುಕ್ತಿ. ದೇವತೆಗಳು ತಮ್ಮ ಪೂಜೆಗಳಿಂದ ಸಂತೃಪ್ತರಾಗಿ ಸಾಂಸಾರಿಕ ಪುರುಷಾರ್ಥಗಳ ಉಪಲಬ್ಧಿಯೊಂದಿಗೆ ಭಗವಂತನ ಸಾನಿಧ್ಯಕ್ಕೂ ಸಹಾಯವಾಗುತ್ತದೆ. ವಿಶೇಷ ತಿಳುವಳಿಕೆಗಾಗಿ ದೇವತೆಗಳ ಪೂಜಾ ವಿಧಾನವನ್ನು ತಿಳಿಯಲು ಪುರಾಣ, ಆಗಮನಾದಿ ಗ್ರಂಥಗಳನ್ನು ಅವ ಲೋಕಿಸಬೇಕು.

ಭಾರತೀಯ ಸಂಸ್ಕೃತಿ ಮತ್ತು ವೇದ ಪುರಾಣಗಳಲ್ಲಿ ಯಜ್ಞಗಳ ಬಗ್ಗೆ ಅಪಾರಮಹಿಮೆ ನಿರೂಪಿತವಾಗಿದೆ. ಯಜ್ಞಗಳ ಮೂಲಕ ವಿಶ್ವಾತ್ಮ ಪ್ರಭುವನ್ನು ಸಂತೃಪ್ತಗೊಳಿಸಲು ವಿಧಿಯನ್ನು ಸಹ ತಿಳಿಸಿದೆ. ಯಾರು ಜನನ ಮರಣಾಬಂಧನದಿಂದ ಮುಕ್ತಿ ಹೊಂದಬಿಚ್ಛಿಸುತ್ತಾರೋ ಅಂತವರು ಯಜ್ಞ-ಯಾಗಾದಿ ಶುಭ ಕಾರ್ಯಗಳನ್ನು ಅವಶ್ಯಮಾಡಬೇಕು. ಭಗವಂತನ ನಿಃಶ್ವಾಸ ಭೂತವಾದ ವೇದವೇನಿದೆ,ಅದರ ಪ್ರಮುಖ ಪ್ರವೃತ್ತಿ ಯಜ್ಞಗಳ ಅನುಷ್ಠಾನ ವಿಧಾನದಲ್ಲಿದೆ. ಯಜ್ಞಗಳ ಮೂಲಕ ಸಮುದ್ಭೂತ ಪರ್ಜನ್ಯ ವೃಷ್ಟಿ ಇತ್ಯಾದಿಗಳಿಂದ ಜಗತ್ತನ್ನು ರಕ್ಷಿಸುತ್ತಾರೆ. ಈ ರೀತಿ ಭಗವಂತ ಯಜ್ಞದ ಮೂಲಕವೇ ಆಧಾರದಿಂದಲೇ ಕಾಪಾಡುತ್ತಾನೆ. ಈತೆರನ ಆಧಾರದಿಂದ ಭಗವಂತ ಜಗತ್ತಿನ ಸಂರಕ್ಷಣೆ ಮಾಡುತ್ತಾನೆ. ಯಜ್ಞ ಕರ್ತೃವಿಗೆ ಅಕ್ಷಯ ಸುಖ ಬಂದೊದಗುತ್ತದೆ. ಶ್ರೀಮದ್ಭಗವದ್ಗೀತೆಯ ಮೂರನೆಯ ಅಧ್ಯಾಯದ 10 ರಿಂದ 15 ನೇ ಶ್ಲೋಕದವರೆಗೆ ಯಜ್ಞದ ಮೇಲೆಯೇ ಜಗತ್ತು ಆಧಾರವಾಗಿದೆ ಎಂದಿದೆ. ಇದರಲ್ಲಿ ವೇದ ಮತ್ತು ಪರಮಾತ್ಮನ ಘನತೆ (ಪ್ರತಿಷ್ಠೆ) ಇದೆ ಎಂದೂ ಹೇಳಿದೆ.

- ಸಶೇಷ

# ಪುರಂದರ ದಾಸರ ರಚನೆಗಳಲ್ಲಿ ಬರುವ ವಂದನಾಭಕ್ತಿ

- ಶ್ರೀಮತಿ. ಸುಧಾಮಧುಸೂದನ್



### ಸುಳಾದಿ

ಹರಿಮೂರ್ತಿಗಷ್ಟಾಂಗ ಪೊಡಮಟ್ಟು ನಿಚ್ಚ ।
ಉರುಪಾಪಾಟವಿಗೆ ಗಮ್ಮನೆ ಇಟ್ಟು ಕಿಚ್ಚ ॥
ಸುರಲೋಕ ಮುಂತಾದ  ಸಿರಿಗವ ಮೆಚ್ಚ ।
ನರರ ಸಂಪದವೆಲ್ಲ ಸ್ಥಿರವೆಂದು ನೆಚ್ಚ॥
ಪುರಂದರ ವಿಠಲನಂಘ್ರಿಯ ನಂಬಿದ ಹುಚ್ಚ ।
ನಿರಯದರಸನಿಗೆ ಬೆದರನು ಬೆಚ್ಚ ॥

ಇಲ್ಲಿ ಪುರಂದರದಾಸರು ವಂದನಾ ಭಕ್ತಿಯ  ಬಗ್ಗೆ ಹೇಳುತ್ತಾರೆ.

ಹರಿಮೂರ್ತಿಗೆ ನಿತ್ಯವೂ ಸಾಷ್ಟಾಂಗ ನಮಸ್ಕಾರವನ್ನು ಮಾಡುವವನು, ಶ್ರೀಹರಿಗೆ ನಿತ್ಯವೂ ವಂದಿಸುವವನು ತನ್ನ ಜೀವನವೆಂಬ ಅತಿ ದೊಡ್ಡ (ಅಡವಿಯ) ಪಾಪದ ಅಡವಿಯನು ಕಾಡ್ಗಿಚ್ಚಿನಂತೆ ಹತ್ತಿ ಉರಿಯುವಂತೆ ಮಾಡುವನು. ಅಂದರೆ ಹರಿವಂದನೆಗೆ ಅಷ್ಟು ಮಹತ್ವವನ್ನು ದಾಸರು ಹೇಳುತ್ತಾರೆ. ಬರೀ ವಂದನೆ ಮಾತ್ರದಿಂದ ಕಷ್ಟಗಳು ಕೂಡಲೆ ದಹಿಸಿ ಹೋಗುವುದು ಎಂದು. ಈ ಭಕ್ತಿಯನ್ನು ಹೊಂದಿದವನಿಗೆ ದೇವ ಲೋಕದ ಸಂಪತ್ತನ್ನು ಸಹ ಅವನು ಇಷ್ಟ ಪಡುವುದಿಲ್ಲ. ಏಕೆಂದರೆ ಮನುಷ್ಯನು ಸಂಪಾದನೆ ಮಾಡುವ ಸಕಲ ಐಶ್ವರ್ಯವು ನಶ್ವರ ಎಂದು ತಿಳಿಯುತ್ತಾನೆ. ಪುರಂದರವಿಠಲನ ಪಾದವನ್ನು ನಂಬಿದಂತಹ ಭಕ್ತನು ಆ ಊರಿನ ಅರಸನಿಗೂ ಹೆದರುವುದಿಲ್ಲ.ಬರೀ ಶ್ರೀಹರಿಯನ್ನೇ  ಅಪರಿಮಿತ ಭಕ್ತಿಯಿಂದ ಅವನ ಪಾದಗಳಿಗೆ ಎರಗುವನು  ಈ ವಂದನಾ ಭಕ್ತಿಯಿಂದ

### ವಂದನ ಭಕ್ತಿ ಕೀರ್ತನೆ

#### ವಂದಿಸುವುದಾದಿಯಲಿ  ಗಣನಾಥನಾ

ವಂದಿಸುವುದಾದಿಯಲಿ ಗಣನಾಥನ     ॥ಪ॥
ಸಂದೇಹ ಸಲ್ಲ ಶ್ರೀಹರಿಯಾಜ್ಞೆ ಇದುಕುಂಟು ॥ಅಪ॥

ಹಿಂದೆ ರಾವಣ ತಾನು ವಂದಿಸದೆ ಗಜಮುಖನ ।
ನಿಂದು ತಪವನೆಗೈದು ವರಪಡೆಯಲು ।
ಒಂದು ನಿಮಿಷದಿ ಬಂದು ವಿಘ್ನವನ್ನು ಆಚರಿಸಿ ।
ತಂದ ವರಗಳನೆಲ್ಲ ಧರೆಗೆ ಇಳಿಸಿದನು ॥    ॥1॥

ಅಂದಿನಾ ಬಗೆಯರಿತು ಬಂದು ಹರಿಧರ್ಮಜಗೆ
ಮುಂದೆ ಗಣಪನ ಪೂಜಿಸೆಂದು ಪೇಳೇ।
ಒಂದೆ ಮನದಲಿ ಬಂದು ಪೂಜಿಸಲು ಗಣನಾಥ
ಹೊಂದಿಸಿದ ನಿರ್ವಿಘ್ನದಿಂದ ರಾಜ್ಯವನು  ॥2॥

ಇಂದು ಜಗವೆಲ್ಲ ಉಮೆನಂದನನ ಪೂಜಿಸಲು
ಚಂದದಿಂದಲಿ ಸಕಲ ಸಿದ್ಧಿಗಳನಿತ್ತು
ತಂದೆ ಸಿರಿಪುರಂದರ ವಿಠಲನ ಸೇವೆಯೊಳು
ಬಂದ ವಿಘ್ನವ ಕಳೆದಾನಂದವನು ಕೊಡುವ   ॥3॥

ಪುರಂದರದಾಸರು ಅಪರೋಕ್ಷ ಜ್ಞಾನಿಗಳು,ಅವರು ತತ್ತ್ವವೇತ್ತರು.ದಾಸರು ಗಣಪತಿ, ಸರಸ್ವತಿ, ಲಕ್ಷ್ಮಿ, ರುದ್ರ ದೇವರು ಮುಂತಾದ ದೇವರುಗಳ ಮೇಲೆ ಅನೇಕ ಕೀರ್ತನೆಗಳನ್ನು ರಚಿಸಿರುತ್ತಾರೆ.ಅವುಗಳಲ್ಲಿ ಮೇಲಣ ಗಣಪತಿ ಸ್ತುತಿಯೂ ಒಂದು.

ಹರಿಯೇ ಸರ್ವೋತ್ತಮನೆಂದು ನಂಬಿರುವ  ದಾಸರು ಅಂತಹ ಹರಿಯೇ ವಿಘ್ನೇಶ್ವರನನ್ನು ಪೂಜಿಸಿಯೇ ಸಕಲ ಕಾರ್ಯಗಳನ್ನು ಪ್ರಾರಂಭಿಸಬೇಕೆಂದು ಅಪ್ಪಣೆ ಕೊಟ್ಟಿರುವುದರಿಂದ ಗಣಪತಿಯನ್ನು ಮೊದಲು ವಂದಿಸಿ ಕಾರ್ಯಾರಂಭ

ಮಾಡಬೇಕೆಂದು ತಿಳಿಸುತ್ತಾರೆ. ಈ ವಿಷಯದಲ್ಲಿ ಸಂದೇಹ-ವಿರಕೂಡದೆಂದು ಎಚ್ಚರಿಕೆ ಇತ್ತಿರುವರು.

ರಾವಣನು ಗಣಪತಿಯನ್ನು ಪೂಜಿಸದೆ, ಘೋರವಾದ ತಪವನ್ನು ಗೈದು ಅದ್ಭುತವಾದ ವರಗಳನ್ನೇನೋ ಪಡೆದನು. ಆದರೆ ರಾವಣನು ಗಣೇಶನನ್ನು ಪೂಜಿಸಿದ ತಪ್ಪಿಗಾಗಿ ಯುದ್ಧದಲ್ಲಿ ಅನೇಕ ವಿಘ್ನಗಳೊದಗಿ, ಅವನಿಗೆ ಅಪಜಯವೂ ಸಾವೂ ಉಂಟಾಯಿತು.

ಶ್ರೀಕೃಷ್ಣನು ಧರ್ಮರಾಯನಿಗೆ ಯುದ್ಧ ಆರಂಭವಾಗುವಾಗ ಮೊದಲು ಗಣಪತಿಯನ್ನು ಪೂಜೆಗೈಯೆಂದು ಹೇಳಿದನು.ಅಂದು ಗೈಯದಿದ್ದ ದಶರಥನಿಗೆ ಅಪಜಯವಾಯಿತೆಂದು ಹೇಳಲು, ಯುಧಿಷ್ಠಿರನು ದೃಢಭಕ್ತಿಯಿಂದ ಯುದ್ಧದ ಆರಂಭದಲ್ಲಿ ಹೇರಂಬನನ್ನು ಪೂಜಿಸಲು, ನಿರ್ವಿಘ್ನದಿಂದ ರಾಜ್ಯವನ್ನು ಪಡೆಯುವಂತಾಯಿತು.

ಸಕಲ ಸಿದ್ಧಿಗಳನ್ನು ಸಿದ್ಧಿವಿನಾಯಕನ ಕೃಪೆಯಿಂದ ಪಡೆಯಬಹುದಾದ ಕಾರಣ ಅವನನ್ನು ಲೋಕವೆಲ್ಲವೂ ಯಾವುದೇ ಕಾರ್ಯಾರಂಭದ ಮುನ್ನವೇ ಪೂಜಿಸಬೇಕು. ಇಲ್ಲವಾದರೆ ಕಾರ್ಯಕ್ಕೆ ಸಾವಿರಾರು ವಿಘ್ನಗಳು ಬರುವುವು. ನಿರ್ವಿಘ್ನದ ಕಾರ್ಯಸಿದ್ಧಿಗಾಗಿ ಎಲ್ಲರೂ ಗಣನಾಥನನ್ನು ವಂದಿಸಿರಿ ಎಂಬುದಾಗಿ ದಾಸಾರ್ಯರು ಲೋಕಕ್ಕುಪದೇಶಿಸಿರುವರು.

2. ವಂದಿಸಿದವರೇ ಧನ್ಯರು

ವಂದಿಸಿದವರೇ ಧನ್ಯರು ॥ಪ॥
ನಮ್ಮ ಇಂದಿರಾಪತಿಗಡ್ಡಬೀಳುತಲೊಮ್ಮೆ ॥ಅಪ॥

ಒಂದೊಂದು ಸ್ತೋತ್ರದಿ ಒಂದೊಂದು ಮಂತ್ರದಿ ।
ಒಂದೊಂದು ನಾಮವ ನೆನೆವುತ್ತ
ಮಂದರೋದ್ಧರನ ನೀ ಕುಂದದೆ ಪೂಜಿಸಿ ।
ವಂದಿಸುವ ಆನಂದದಿಂದ ॥1॥

ಬಿಟ್ಟುಲಜ್ಜೆಯ ದೃಷ್ಟಿಸಿ ನೋಡುತ ।
ವಿಟ್ಠಲ ವಿಟ್ಠಲ ಎನ್ನುತ ಮನ
ಮುಟ್ಟಿ ಮಾಡುವ ಭಕ್ತಿಯ ಸ್ತುತಿಯಿಂದ ।
ಅಷ್ಟಾಂಗದಲಿ ವಂದನೆಯ ಮಾಡುತ ॥2॥

ಸಿರಿಲಕ್ಷ್ಮಿಪತಿ ಶರಣಾಗತರನು
ಕರುಣೆಸೆಂದು ಕರಮುಗಿದು
ಹರುಷ ಪುಳಕದಿಂದ ಮರೆತು ದೇಹವ ।
ಪುರಂದರ ವಿಠಲರಾಯನ ಪಾದಕೆ ॥3॥

**ಹರಿಯ ಸ್ಮರಣೆಯನ್ನು ಮಾಡುವುದು ಅವನ ಪಾದಾರವಿಂದವನ್ನು ಸೇವಿಸುವುದು, ದೇವರನ್ನು ಗಂಧ, ಧೂಪ, ದೀಪ, ಆರತಿ, ನೈವೇದ್ಯಾದಿಗಳಿಂದ ಅರ್ಚಿಸುವುದು, ಪರಮಾತ್ಮನ ಪ್ರತೀಕಗಳನ್ನು ದೇವಾಲಯಗಳನ್ನು ಅವನ ವಿಭೂತಿಗಳನ್ನು ವಂದಿಸುವುದು, ಅವನಲ್ಲಿ ದಾಸ್ಯ ಭಾವವನಿಟ್ಟುಕೊಳ್ಳುವುದು,**

ಭಗವಂತನನ್ನು ಕಾಣಲು ದಿವ್ಯ ದೃಷ್ಟಿಬೇಕು. ದಿವ್ಯ ದೃಷ್ಟಿಯುಂಟಾಗುವುದು ಭಕ್ತಿಯಿಂದ.ಭಕ್ತಿಯಲ್ಲಿ ಒಂಭತ್ತು ವಿಧವೆಂದು ಪ್ರಹ್ಲಾದರ ಅಭಿಮತ, ದೇವರ ಕುರಿತು ಕೇಳುವುದು, ಅವನ ಕಥೆಯನ್ನು ಹೇಳುವುದು, ಹರಿಯ ಸ್ಮರಣೆಯನ್ನು ಮಾಡುವುದು ಅವನ ಪಾದಾರವಿಂದವನ್ನು ಸೇವಿಸುವುದು, ದೇವರನ್ನು ಗಂಧ, ಧೂಪ, ದೀಪ, ಆರತಿ, ನೈವೇದ್ಯಾದಿಗಳಿಂದ ಅರ್ಚಿಸುವುದು, ಪರಮಾತ್ಮನ ಪ್ರತೀಕಗಳನ್ನು ದೇವಾಲಯಗಳನ್ನು ಅವನ ವಿಭೂತಿಗಳನ್ನು ವಂದಿಸುವುದು,ಅವನಲ್ಲಿ ದಾಸ್ಯ ಭಾವವನಿಟ್ಟುಕೊಳ್ಳುವುದು, ಅವನೇ ಸಖನೆಂದರಿತು ನಮ್ಮ ಸಕಲ ಕಷ್ಟಸುಖಗಳನ್ನು ನಿವೇದಿಸುವುದು, ಕೊನೆಯದಾಗಿ ಅವನಲ್ಲಿ ಆತ್ಮನಿವೇದನೆ ಗೈಯುವುದು.ವಂದನಾ ಭಕ್ತಿಯ ಮಹತ್ವಿಕೆಯನ್ನು ಅವರು ಹೀಗೆ ಸಾರುತ್ತಾರೆ.

ವಂದಿಸಿದವರೇ ಧನ್ಯರು ನಮ್ಮ ಇಂದಿರಾಪತಿಗೆ ಅಡ್ಡಬೀಳುತಲಿ

ಶ್ರೀಹರಿಯನ್ನು ಭಕ್ತಿಯುಕ್ತವಾಗಿವ ನಮಸ್ಕರಿಸುವರೇ ಧನ್ಯರು. ನಮಸ್ಕಾರದಲ್ಲಿ ದೇವರೆದುರು ಕರಗಳೆರಡನ್ನು ಮುಗಿದರೆ ಮಾತ್ರ ಸಾಲದು. ಹೃತ್ಪೂರ್ವಕವಾಗಿ ಪರಮಾತ್ಮನನ್ನು ವಂದಿಸಬೇಕು.

ವಂದಿಸುವಾಗ ಜಿಹ್ವೆಯಲ್ಲಿ ಸ್ತೋತ್ರಮಂತ್ರ ಹೇಳುತ್ತಾ, ಕೀರ್ತನೆ ಪಾಡುತ್ತಾ ಭಜನೆ ಮಾಡುತ್ತಾ ಹೀಗೆ ಇನ್ನು ಅನೇಕ ಕೀರ್ತನೆಗಳನ್ನು ಪುರಂದರದಾಸರು ಈ ವಂದನಾಭಕ್ತಿಯಲ್ಲಿ ರಚಿಸಿದ್ದಾರೆ.

**ವೃಕ್ಷೋ ರಕ್ಷತಿ ರಕ್ಷಿತಃ**

**ಗಿಡವೊಂದ ನೆಡುವವನು**
**ದೇವರಾ ಸೇವಕನು**
**ನೆನೆವರವನನು ಜನರು**
**ಅವನೆಂದು ನೋಡದರು**

# ದ್ವಂದ್ವಗಳನ್ನು ಮರೆ: ಕರ್ತವ್ಯದಲ್ಲಿ ಮೆರೆ

ಡಾ॥ ವೈಷ್ಣವಾಂಘ್ರಿಸೇವಕ್‌ದಾಸ್
ಅನುವಾದ: ಡಿ.ಎಸ್. ಭೂಮಿಕ

ವಾಸ್ತವದಲ್ಲಿ ನಿಜವಾಗಿಯೂ ಭಗವದ್ಗೀತೆಯ ಅವಶ್ಯಕತೆ ಯಾದರೂ ಏನು? ಎನ್ನುವ ಪ್ರಶ್ನೆ ಎಂಥವರನ್ನು ಕಾಡುವಂಥದ್ದೇ ಮನುಷ್ಯನನ್ನು ಹಿಡಿದು ಹಿಂಸಿಸುವ ಪಾಪಗಳು ನಾಲ್ಕು. 1) ಭ್ರಮೆಗೊಳಗಾಗುವುದು (ಅಂದರೆ ತಪ್ಪುಗಳನ್ನು ಮಾಡುವುದು) 2) ಮೋಹಕ್ಕೊಳಗಾಗುವುದು (ಅಂದರೆ ರುಚಿ ತಿಳಿದು ಮತ್ತೊಂದಕ್ಕೆ ಹಂಬಲಿಸುವುದು)3) ಮೋಸ ಮಾಡುವ ಸ್ವಭಾವವನ್ನು ಹೊಂದಿರುವುದು 4) ಅಸಮಗ್ರವಾದ ಇಂದ್ರಿಯಗಳನ್ನು ಹೊಂದಿರುವುದು. ಈ ನಾಲ್ಕು ಅವಗುಣಗಳು ಎಂಥಹ ಶಾಸ್ತ್ರಜ್ಞರನ್ನು ಬಿಡುವುದಿಲ್ಲ; ದೇಶನೇತಾರರನ್ನು ಬಿಡುವುದಿಲ್ಲ; ಬೀದಿಯ ತಿರುಕನನ್ನು ಬಿಡಲಾರೆವು. ವೇದವೆಂದರೆ ಜ್ಞಾನ-ಇನ್ನು ವೇದಾಂತವೆಂದರೆ ಜ್ಞಾನದ ಪರಮರೇಖೆ ಅದೇ ಉಪನಿಷತ್.ಅಂತಹ ಸರ್ವೋಪನಿಷತ್ತುಗಳ ಸಾರವೇ ಭಗವದ್ಗೀತೆ. ಆದ್ದರಿಂದ ಭಗವದ್ಗೀತೆಯಲ್ಲಿ ಲಭಿಸಲಾರದ ವಿಷಯವೇ ಇಲ್ಲ.ಜಗತ್ತಿನ ಎಲ್ಲಾ ಶಾಸ್ತ್ರಗಳಲ್ಲಿ ತಿಳಿಸಲಾದ ವಿಷಯಗಳೊಂದೇ ಅಲ್ಲದೇ ಅದರಲ್ಲಿ ಹೇಳಲಾದ ಜ್ಞಾನವೂ ಸಹಾ ಭಗವದ್ಗೀತೆಯಲ್ಲಿ ನಾವು ಕಾಣಬಹುದು.

ಮಾನವನಲ್ಲಿರುವ ಅಗ್ರ ದೋಷವೆಂದರೆ ತಪ್ಪು ಮಾಡುವುದು. ಅದು ತಿಳಿದೋ ತಿಳಿಯದೆಯೋ ಸಂಭವಿಸುತ್ತದೆ. ತಿಳಿದು ಮಾಡಿದರು ಅದು ತಪ್ಪಾಗುತ್ತದೆ - ತಿಳಿಯದೇ ಮಾಡಿದರೆ ಅದು ಭ್ರಮೆಯಾಗುತ್ತದೆ.ತನಗೇನೂ ತಿಳಿಯದ್ದರೂ ತಿಳಿದಂತೆ ನಟಿಸುವುದೂ ಸಹಾ ಒಂದು ಮೋಸವೇ.ತಾನು ತಪ್ಪು ಮಾಡಿದ್ದರೂ ತಪ್ಪು ಮಾಡದಂತಿರುವುದೂ ಸಹಾ ಒಂದು ಮೋಸವೇ.ಅದೇ ಕಪಟತನ.ದ್ವಾಪರಯುಗದ ಆದಿಯಲ್ಲಿ ಕರ್ಣನು ಪರಶುರಾಮರ ಬಳಿ ಬಂದು ತಾನು ಬ್ರಾಹ್ಮಣನೆಂದೂ,ತನಗೆ ಅಸ್ತ್ರವಿದ್ಯೆ ಹೇಳಿಕೊಡಬೇಕೆಂದೂ ಕೇಳಿ ಕೊಂಡಾಗ ಪರಶುರಾಮರು ಆತನನ್ನು ನಂಬಿದ್ದಾರೆ. ಅಂದರೆ ಅಸತ್ಯವನ್ನು ಅವರು ಸತ್ಯವೆಂದು ನಂಬಿದ್ದಾರೆ. ಈ ರೀತಿ ಮೋಹಕ್ಕೊಳಗಾಗುವುದೂ ಒಂದು ದೋಷವೇ. ಕರ್ಣನು ತನ್ನ ಜನ್ಮ ರಹಸ್ಯವನ್ನು ಹೇಳದೇ ಬ್ರಾಹ್ಮಣನೆಂದು ಸುಳ್ಳಾಡಿ ಮೋಸ ಮಾಡಿದ್ದಾನೆ.ಇದೂ ಸಹಾ ಮನುಷ್ಯನಲ್ಲಿರುವ ನ್ಯೂನ್ಯತೆಯೇ.ಮಾನವನ ಇಂದ್ರಿಯಗಳು ಅಸಮಗ್ರವಾಗಿರುತ್ತದೆ.ಆದ್ದರಿಂದ ನೈಜಸತ್ಯವನ್ನು ಒಂದಕ್ಕೊಂದು ಹೇಳಿಕೊಳ್ಳದೇ ಹೋಗುತ್ತವೆ.ಆಕಾಶದಲ್ಲಿನ ಸೂರ್ಯ ನಮ್ಮ ಕಣ್ಣಿಗೆ ಒಂದು ಚಿಕ್ಕ ಸೋಲಿಯ ಹಾಗೆ ಕಂಡು ಬರುತ್ತಾನೆ. ಆದರೆ ವಾಸ್ತವದಲ್ಲಿ ಸೂರ್ಯನು ಭೂಮಿಗಿಂತ ಮಿಗಿಲಾದ ಗೋಲ. ಅಂದರೆ ನಮ್ಮ ಕಣ್ಣುಗಳು ಸರಿಯಾದ ಮಾಪನವನ್ನು ಕೊಡಲಾರವೆಂದು ಅರ್ಥ ಮಾಡಿಕೊಳ್ಳಬೇಕು. ಕರ್ಣನು ಅಸತ್ಯವನ್ನು ನುಡಿದರೂ ಪರಶುರಾಮರು ಅದನ್ನು ಪರೀಕ್ಷಿಸಲಾರದೇ ಹೋಗಿದ್ದಾರೆ. ಅದೇ ಇಂದ್ರಿಯಗಳಿಗಿರುವ ನ್ಯೂನ್ಯತೆ. ಆದರೆ ಮುಂದೊಂದು ದಿನ ಕರ್ಣನ ತೊಡೆಯ ಮೇಲೆ ತಲೆಯಿಟ್ಟು ಪರಶುರಾಮರು ಮಲಗಿದ್ದಾಗ ಒಂದು ಹುಳು ಕರ್ಣನ ತೊಡೆಯನ್ನು ಕೊರೆಯಲಾರಂಭಿಸಿದೆ. ಆದರೆ ಗುರುಗಳ ನಿದ್ರೆಗೆ ಭಂಗವಾಗದಿರಲೆಂದು ಕರ್ಣನು ಅದನ್ನು ಸಹಿಸಿಕೊಂಡಿದ್ದಾನೆ. ಆ ಹುಳು ಎಷ್ಟು ತೀವ್ರವಾಗಿ ಕಚ್ಚಿದೆಯೆಂದರೆ ಕರ್ಣನ ತೊಡೆಯಿಂದ ರಕ್ತವು ಸ್ರವಿಸಿ ಪರಶುರಾಮರ ಶರೀರವನ್ನು ತಾಗಿದೆ.ಆದರಿಂದ ಅವರು ಎಚ್ಚರಗೊಂಡಿದ್ದಾರೆ: ವಿಷಯವನ್ನು ಅರ್ಥ ಮಾಡಿಕೊಂಡಿದ್ದಾರೆ. ಅಷ್ಟೊಂದು ತೀವ್ರವಾದ ಬಾಧೆಯನ್ನು ಸಹಿಸಿ ಕೊಂಡವನು ಬ್ರಾಹ್ಮಣನಾಗಿರಲಾರನೆಂದೂ, ಕರ್ಣನು ಖಚಿತವಾಗಿ ಬ್ರಾಹ್ಮಣೇತರನೆಂದೂ ಅರ್ಥ ಮಾಡಿಕೊಂಡಿದ್ದಾರೆ.ಆತನು ಕ್ಷತ್ರಿಯನೆಂದೂ ತಿಳಿಯುತ್ತಲೇ, ಪರಶುರಾಮರು ಕಲಿತ ವಿದ್ಯೆಯೆಲ್ಲಾ ಸಮಯಕ್ಕೆ ಸರಿಯಾಗಿ ಪ್ರಯೋಜನಾಕವಾಗದಿರಲೆಂದು ಶಾಪವನ್ನಿತ್ತಿದ್ದಾರೆ. ಇದರಿಂದ ಅರ್ಜುನನನ್ನು ಕೊಲ್ಲಬಲ್ಲೆನೆಂಬ ಕರ್ಣನ ತೀವ್ರವಾದ ನಂಬಿಕೆ (ಮೋಹವು) ಮುರಿದುಬಿದ್ದಿದೆ.ಹೀಗೆ ಮಾನವನು ನಾಲ್ಕು ಬಗೆಯ ದೋಷಗಳಿಂದ ಆವೃತ್ತನಾಗಿರುತ್ತಾನೆ.ಹಾಗಾಗಿ ಅವನು ಎಸಗುವ ಯಾವುದೇ ಕೃತ್ಯಗಳು ಪರಿಪೂರ್ಣವಾಗಲಾರವು.ಎಲ್ಲ ಸಮಯಕ್ಕೆ ಒದಗುವಂತಹವಾಗಲಾರವು. ಆದರೆ ಭಗವದ್ಗೀತೆ ಅಂಥಹುದಲ್ಲ. ಅದರ ಸಂದೇಶವು ಯಾವುದೇ ಕಾಲಕ್ಕಾದರೂ,ಯಾವುದೇ ದೇಶಕ್ಕಾದರೂ,ಯಾವುದೇ ಜಾತಿಯವರಿಗಾದರೂ,ಯಾವುದೇ ಮತೀಯರಿಗಾದರೂ,ಸ್ತ್ರೀ ಪುರುಷರೆಂಬ ಬೇಧವಿಲ್ಲದೇ ಎಲ್ಲರಿಗೂ ಅನ್ವಯಿಸುತ್ತದೆ.

ಮಾನವ ಕೇವಲ ತನ್ನ ಬುದ್ಧಿಯ ಮೇಲೆ ಅವಲಂಬಿತವಾದರೆ ಅಥವಾ ತನ್ನಂಥವರೇ ಆದ ಸಾಮಾನ್ಯ ಮನುಷ್ಯರ





ಬುದ್ಧಿ ಮೇಲೆ ಅವಲಂಬಿತವಾದರೆ ಯಾವುದೇ ಸಮಯದಲ್ಲಾದರೂ ಖಂಡಿತವಾಗಿ ದ್ವಂದ್ವಕ್ಕೆ ಗುರಿಯಾಗುತ್ತಾನೆ. ದ್ವಂದ್ವಗಳಿಂದ ಹೊರಬರಬೇಕಾದುದು ಮನುಸ್ಸು,ಆದರೆ ಆತ್ಮ ಸ್ಥಿತಿಯಲ್ಲಿ ನಿಲ್ಲಬೇಕಾದರೆ ಮನುಷ್ಯನು ಈ ದ್ವಂದ್ವಗಳನ್ನು ಆಧ್ಯಾತ್ಮಿಕ ಜ್ಞಾನದಿಂದಲೇ ಪರಿಹರಿಸಿಕೊಳ್ಳಬೇಕೆಂದು ಶ್ರೀಕೃಷ್ಣ ಭಗವಂತನು ಬೋಧಿಸುತ್ತಾನೆ.ಶಾಸ್ತ್ರಗಳನ್ನು ಶಂಕಿಸುವವನ ನಾಶವು ತಪ್ಪಲಾರದ್ದೆಂದು ಘೋಷಿಸುತ್ತಾನೆ.

ಶ್ರದ್ಧಾವಾನ್ ಲಭತೇ ಜ್ಞಾನಂ ತತ್ಪರಃ ಸಂಯತೇಂದ್ರಿಯಃ।
ಜ್ಞಾನಂಲಭ್ಧ್ವಾ ಪರಾಂ ಶಾಂತಿಂ ಅಚಿರೇಣಾಧಿಗಚ್ಛತಿ ॥

ದಿವ್ಯಜ್ಞಾನಕ್ಕಾಗಿ ತನ್ನನ್ನೇ ಸಮರ್ಪಿಸಿಕೊಂಡವನು, ಇಂದ್ರಿಯಗಳನ್ನು ನಿಗ್ರಹಿಸುವವನು, ಆದ ವ್ಯಕ್ತಿ ಜ್ಞಾನವನ್ನು ಹೊಂದಲು ಅರ್ಹನು. ಅದನ್ನು ಹೊಂದಿ ಆತನು ಪರಮ ಶಾಂತಿಯನ್ನು ಸಾಧಿಸುತ್ತಾನೆ.

(ಭಗವದ್ಗೀತೆ 4 ನೇ ಅಧ್ಯಾಯ, 39 ನೇ ಶ್ಲೋಕ)

ಅಜ್ಞಶ್ಚಾಶ್ರದ್ಧಧಾನಶ್ಚ ಸಂಶಯಾತ್ಮಾ ವಿನಶ್ಯತಿ।
ನಾಯಂ ಲೋಕೋಽಸ್ತಿನ ಪರೋ ನ ಸುಖಂ ಸಂಶಯಾತ್ಮನಃ

ಆದರೆ ಶಾಸ್ತ್ರಗಳನ್ನು ಶಂಕಿಸುವ ಅಜ್ಞಾನಿಗಳು, ಶ್ರದ್ಧಾಹೀನರು ಭಗವದ್ಭಾವನೆಯನ್ನು ಹೊಂದದೇ ನಶಿಸಿ ಹೋಗುತ್ತಾರೆ.ಸಂಶಯಾತ್ಮನಿಗೆ ಈ ಲೋಕದಲ್ಲಿಯಾಗಲೀ,ಪರಲೋಕದಲ್ಲಾಗಲೀ ಸುಖವಿರುವುದಿಲ್ಲ.

(ಭಗವದ್ಗೀತೆ 4 ನೇ ಅಧ್ಯಾಯ 40 ನೇ ಶ್ಲೋಕ)

ಆದ್ದರಿಂದ ಮನದಲ್ಲಿ ಅಜ್ಞಾನದಿಂದುಟಾಗುವ ಸಂಶಯವನ್ನು ಜ್ಞಾನ ಖಡ್ಗದಿಂದ ಬೇಧಿಸಿ, ಬಳಿಕ ಯೋಗಯುಕ್ತ ನಾಗಿರಬೇಕೆಂದು ಅರ್ಜುನನಿಗೆ ಗೀತಾಚಾರ್ಯನು ಹೇಳುತ್ತಾನೆ. ಶ್ರೀಕೃಷ್ಣ ಭಗವಂತನ ಈ ಉಪದೇಶವು ಯಾವ ಕಾಲಕ್ಕೂ ಅನ್ವಯಿಸುತ್ತದೆ. ಪ್ರಸ್ತುತ ಯಾರಿಗೂ ಶಾಸ್ತ್ರಗಳು ಗೊತ್ತಿಲ್ಲ. ಅದರ ಅವಶ್ಯಕತೆಯನ್ನೇ ಜನ ಶಂಕಿಸುತ್ತಿದ್ದಾರೆ. ಕೇವಲ ತಮ್ಮ ವಿದ್ಯೆಯ ಪಠ್ಯ ಪುಸ್ತಕಗಳನ್ನು ಮಾತ್ರವೇ ವಿದ್ಯಾರ್ಥಿಗಳು ಓದುತ್ತಿದ್ದಾರೆ.ತಮ್ಮಲ್ಲಿ ಸ್ಫೂರ್ತಿಯ ಸೆಲೆಯಿರಿಸಿ ಅಜ್ಞಾನವನ್ನು ಹೋಗಲಾಡಿಸತಕ್ಕಂಥ ವೈದಿಕ ಗ್ರಂಥಗಳನ್ನು ವಿದ್ಯಾರ್ಥಿಗಳು ಓದುತ್ತಿಲ್ಲ.ಎಲ್ಲರೂ ತಮ್ಮ ವೃದ್ಧಾಪ್ಯದಲ್ಲಿ ಈ ಗ್ರಂಥಗಳನ್ನು ಹಿಡಿಯುವ ಪ್ರಯಾಸದಲ್ಲಿದ್ದಾರೆಯೇ ಹೊರತು, ಸೂಕ್ತ ಸಮಯದಲ್ಲಿ ಅವುಗಳಿಂದ ಲಭಿಸಬಲ್ಲ ಲಾಭಗಳನ್ನು ಹೊಂದದೇ ಹೋಗುತ್ತಿದ್ದಾರೆ. ಕರ್ತವ್ಯ ಸಾಧನೆಯಲ್ಲಿ ಸಂದೇಹ-ಸಂಶಯಗಳೇರ್ಪಡುವುದು ಸಹಜ.ಆದರೆ ಇಂತಹ ಸಮಯದಲ್ಲಿ ಅಜ್ಞಾನ ನಮ್ಮನ್ನು ಆವರಿಸದಂತೆ ಎಚ್ಚರವಹಿಸಬೇಕು. ಅದಕ್ಕೆ ಶಾಸ್ತ್ರ ಪ್ರದೇಶದ ಅಗತ್ಯವಿದೆ. ಶಾಸ್ತ್ರೋಪದೇಶವೇ ಜ್ಞಾನ ಖಡ್ಗವೆಂದು ಹೇಳಲಾಗುತ್ತದೆ. ಈ ಜ್ಞಾನ ಖಡ್ಗದಿಂದಲೇ "ಸಂದೇಹ-ಸಂಶಯಗಳನ್ನು ಭೇದಿಸು" ಎಂದು ಶ್ರೀ ಕೃಷ್ಣನು ಹೇಳುತ್ತಾನೆ. ಸಂಶಯಗಳು ಸಾಮಾನ್ಯವಾಗಿ ಓದುವ ಪಠ್ಯ ಪುಸ್ತಕಗಳಿಂದ ಶಮನಗೊಳ್ಳಲಾರವು. ಭಗವದ್ಗೀತೆಯ ಅಧ್ಯಯನದಿಂದ ಅನಾವಶ್ಯಕವಾದ ಸಂದೇಹಗಳು ತೊಲಗಿ ಹೋಗುತ್ತವೆ. ಆದ್ದರಿಂದ ವಿದ್ಯಾರ್ಥಿಗಳು ಅನುಭವಿಗಳ ಬಳಿ ಹೋಗಿ ಗೀತೋಪದೇಶದ ಅರ್ಥಸಾರವನ್ನು ತಿಳಿದುಕೊಂಡು ತಮ್ಮ ಕಾರ್ಯಸಾಧನೆಯಲ್ಲಿ ಉಂಟಾಗ ಬಲ್ಲ ಸರ್ವಸಂಶಯಗಳನ್ನು ನಾಶಗೊಳಿಸಬೇಕು. ಕಾರ್ಯ ಸಾಧನೆಯಲ್ಲಿ ನಿಶ್ಚಯವಾಗಿ ಮುಳುಗಿ ಹೋಗಬೇಕು. ಆಗವರಿಗೆ ಇಚ್ಛಿಸಿದ ವಿಜಯಗಳು ಖಚಿತವಾಗಿ ಲಭಿಸುತ್ತವೆ. ಭಗವದ್ಗೀತೆಯನ್ನು ಅನುಸರಿಸಿ ಅನೇಕ ವಿಜಯಗಳನ್ನು ಸಾಧಿಸಿದ ಮಹನೀಯರ ಚರಿತ್ರೆಗಳೇ ಇದಕ್ಕೆ ಪ್ರತ್ಯಕ್ಷ ಪ್ರಮಾಣ.

# ಶ್ರೀ ತ್ಯಾಗರಾಜರ ಆರಾಧನೆ

ಡಾ|| ಗುರುರಾಜ ಪೋಶೆಟ್ಟಿಹಳ್ಳಿ

**ಜನವರಿ ತಿಂಗಳು ಬಂದರೆ ಪುಟ್ಟ ಮಕ್ಕಳಿಂದ ವಯೋವೃದ್ಧರವರೆಗೂ ಯಾವುದೇ ವಯಸ್ಸಿನ, ಜಾತಿಯ, ಲಿಂಗದ ತಾರತಮ್ಯವಿಲ್ಲದೆ ಎಲ್ಲಾ ಸಂಗೀತಾಸಕ್ತರೂ ಸಂಗೀತದ ಸುಧಾರಸದಲ್ಲಿ ಮಿಂದೇಳಲು ಕಾತುರರಾಗಿರುತ್ತಾರೆ. ಸಾವಿರಾರು ಶ್ರೋತೃಗಳೂ ಮೈಮನವೆಲ್ಲಾ ಕಿವಿಯಾಗಿಸಿ, ಸಾವಿರಾರು ಗಾಯಕರು ಸಂಗೀತವನ್ನೇ ಮಿಡಿದ ನಾಡಿಯಾಗಿಸಿ, ಭೂಮಿಗೆ ಸ್ವರ್ಗವನ್ನೇ ಇಳಿಸಿ ತರುತ್ತಾರೆ. ಇಂತಹ ಉತ್ಸವವೂ ಪುನಃ ನಮ್ಮೆದುರು ನಿಂತಿದೆ. ಶ್ರೀ ತ್ಯಾಗರಾಜರ ಆರಾಧನೆಯ ವಾರ್ಷಿಕ ಸಂಗೀತೋತ್ಸವದಲ್ಲಿ ಸೇರಿದ ಎಲ್ಲರಿಗೂ ಶ್ರೀ ತ್ಯಾಗರಾಜರ ಬಗ್ಗೆ, ಸಂಗಿತವೇ ಮೈವೆತ್ತಂತೆ ಗಾನಸುಧೆ ಹರಿಸುವ ಗಾಯಕರ ಬಗ್ಗೆ 'ಎಂದರೋ ಮಹಾನುಭಾವುಲು' ಎನಿಸದಿರಲು ಸಾಧ್ಯವೇ ಇಲ್ಲ. ಇಲ್ಲಿ ಸಂಗೀತವೇ ಧರ್ಮ, ಸಂಗೀತವೇ ದೈವ, ಸಂಗೀತವೇ ಸರ್ವಸ್ವ.**

ಚಿಕ್ಕಂದಿನಿಂದಲೇ ಮನೆಯ ಗೋಡೆಯ ಮೇಲೆ ನಾಮಾವಳಿಗಳನ್ನು ಸೇರಿಸಿ ಭಜನೆಗಳನ್ನು ಬರೆಯುತ್ತಿದ್ದ ಬಾಲಕನಿಗೆ ಆಗಲೇ ಕವಿತಾಶಕ್ತಿ ಪ್ರಾಪ್ತವಾಗಿತ್ತು.ಮುಂದೆ ಸಾಹಿತ್ಯ-ಸಂಗೀತಗಳ ಅಭ್ಯಾಸ, ಅವರ ಪ್ರತಿಭೆಗೆ ಅಪೂರ್ವ ಸೊಬಗನ್ನಿತ್ತಿತ್ತು, ಉಸಿರಾಡುವಷ್ಟು ಸಹಜವಾಗಿ ಕೃತಿಗಳನ್ನು ಬರೆದು-ಹಾಡಿದ ಈ ಮಹಾನುಭಾವರೇ ಸಂತ ತ್ಯಾಗರಾಜರು ನಾದಯೋಗಿ, ಕರ್ನಾಟಕ ಶಾಸ್ತ್ರೀಯ ಸಂಗೀತದ ಜೀವಾಳ.

ಕಲೆ ಭಕ್ತಿಯೊಂದಿಗೆ ಸಂಯೋಗವಾದಾಗ ಅದು ಉಪಾಸನೆಯಾಗಿ ನಾದಬ್ರಹ್ಮನಲ್ಲಿ ಲೀನವಾಗುತ್ತದೆ. ಸಂಗೀತ ಜ್ಞಾನ, ಕವಿತ್ವ,ನಿರ್ಮಲವೂ ನಿಶ್ಚಲವೂ ಆದ ಭಕ್ತಿ, ಈ ಮೂರು ಒಬ್ಬ ವ್ಯಕ್ತಿಯಲ್ಲೇ ಇರುವುದಾದರೇ ಅಂತಹ ಮಹಾತ್ಮನನ್ನು ಪಡೆದ ಸಮಾಜ ಧನ್ಯವೇ ಸರಿ.

ಕರ್ನಾಟಕ ಸಂಗೀತ ರತ್ನತ್ರಯರಲ್ಲಿ ಪ್ರಥಮ ಸ್ಥಾನದಲ್ಲಿ ಗುರುತಿಸಲ್ಪಡುವ ವಾಗ್ಗೇಯ ಸಾರ್ವಭೌಮ ಶ್ರೀತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು ಹಾಗೂ ಶ್ಯಾಮಾಶಾಸ್ತ್ರೀಗಳೊಡನೆ ಅವರು ಬದುಕಿದ್ದ ಕಾಲ ಸುವರ್ಣಯುಗ.

ತ್ಯಾಗರಾಜರು ಜನಿಸಿದ್ದು ತಂಜಾವೂರು ಜಿಲ್ಲೆಯ ತಿರುವಾರೂರಿನಲ್ಲಿ, ತೆಲುಗು ಮುಲಕಿನಾಡು ಮನೆತನ, ತಾತ ಗಿರಿರಾಜ ಬ್ರಹ್ಮ, ತಂದೆ ರಾಮಬ್ರಹ್ಮ, ತಾಯಿ ಪುರಂದರದಾಸರ ಪದಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು.ಅವರ ಪೂರ್ವಾಚಾರ್ಯರಿಂದ ಉತ್ತಮ ಅಂಶಗಳನ್ನು ಗ್ರಹಿಸಿ ತಮ್ಮ ಸಂಸ್ಕಾರದ ಮೂಸೆಯಲ್ಲಿ ಸಂಗೀತ ಸಾಮ್ರಾಜ್ಯಕ್ಕೆ ಹೊಸರೂಪವನ್ನು ಕೊಟ್ಟು ವೃದ್ಧಿಪಡಿಸಿದ ಕೀರ್ತಿ ಶ್ರೀತ್ಯಾಗರಾಜರಿಗೆ ಸಲ್ಲಬೇಕು. ಅವರ ಪ್ರಭಾವ ಸಮಕಾಲೀನ ಹಾಗೂ ಮುಂದಿನ ತಲೆಮಾರಿನವರಿಗೂ ಮಾರ್ಗದರ್ಶನವಾಗಿರುವುದಲ್ಲದೆ ಅಪರೂಪದ ರಾಗ ಸಂಚಾರಗಳಿಗೆ, ಧಾತು ಕಲ್ಪನೆಗೆ ವಿಶ್ವಕೋಶವಾಗಿದೆ.

ತಮ್ಮ 18ನೇ ವಯಸ್ಸಿನಲ್ಲಿಯೇ ರಾಮಕೃಷ್ಣ ಯತೀಂದ್ರರೆಂಬ ಹರಿದಾಸರಿಂದ 'ರಾಮತಾರಕ' ಮಂತ್ರೋಪದೇಶ ಪಡೆದು 96 ಕೋಟಿ ಬಾರಿ ರಾಮನಾಮ ಜಪಿಸಿ 21 ವರ್ಷಗಳಲ್ಲೇ ಶ್ರೀರಾಮನ ದರ್ಶನ ಭಾಗ್ಯವನ್ನು ಪಡೆದ ವಿಭೂತಿ ಪುರುಷರು ಏಕಕಾಲದಲ್ಲಿ ಆತ್ಮೋನ್ನತಿ ಮತ್ತು ಸಮಾಜ ಸುಧಾರಣೆ ಎರಡನ್ನೂ ಗಾನಕಲೆಯಿಂದ ಸಾಧಿಸಿದವರು.

ಇವರದು ಆಡುಮಾತಿಗೆ ಸಮೀಪವಾದ ಸಾಹಿತ್ಯ. ಆಡಂಬರದ ಪದಗಳಿಲ್ಲ ಸಂಗೀತವು ಕೀರ್ತನೆಗಳ ರೂಪದಲ್ಲಿ ಹೆಚ್ಚು ಪ್ರಚಾರಗೊಂಡಿದ್ದು ತ್ಯಾಗರಾಜರಿಂದ.'ಎಂದರೋ

ಮಹಾನುಭಾವುಲು ಅಂದರಿಕಿ ವಂದನಮುಲು' ಎಂಬ ಶ್ರೀರಾಗದ ಜನಪ್ರಿಯಕೃತಿ ತ್ಯಾಗರಾಜರ ಪಂಚರತ್ನಗಳಲ್ಲಿ ಒಂದು. ಅವರದು ಚಿತ್ತಶುದ್ಧಿ ಮಾರ್ಗ, ಕೇಳುವರ ಮನಸ್ಸು-ಹೃದಯಗಳು ಈ ತತ್ವಕ್ಕೆ ಸೋಲುವಂತೆ ಸಾಹಿತ್ಯ ನಿರೂಪಣೆ. ಪಾಮರನಿಗೂ ಸಹ ಅರ್ಥವಾಗುವಂತೆ ಉಪನಿಷತ್ಸಾರ ವನ್ನು ಮಹರ್ಷಿಗಳ ಸನಾತನ ಜ್ಞಾನವನ್ನು ಸರಳ ತತ್ವ ಪೂರಿತ ಕೃತಿ ಸಮೂಹ 'ತ್ಯಾಗರೋಪನಿಷತ್' ಎಂದು ಕರೆಯಲ್ಪಟ್ಟಿದೆ.

ತ್ಯಾಗರಾಜರು ಭಾವ ಜೀವಿಗಳು ಅವರ ಪಾಲಿಗೆ ಶ್ರೀರಾಮ ಕೇವಲ ಆಧ್ಯಾತ್ಮಿಕ ಕಲ್ಪನೆಯಾಗಿರಲಿಲ್ಲ. ಸಜೀವ ಮೂರ್ತಿಯಾಗಿದ್ದ, ಅವನೇ ತಮ್ಮ ಸರ್ವಸ್ವ ಎಂದು ನಂಬಿದರು. ಇಂತಹ ಭಾವೋದ್ರೇಕ ಸನ್ನಿವೇಶಗಳಲ್ಲಿ ಹರಿದು ಬಂದ ಸ್ವರ ಸಾಹಿತ್ಯ ವಾಹಿನಿ ಅವರಂತರಂಗದ ಪ್ರತಿಛಾಯೆ ಯಾಯಿತು.

ತ್ಯಾಗರಾಜರ ಪಂಚರತ್ನಕೃತಿಗಳನ್ನು ಆಧ್ಯಾತ್ಮ ಸಾಧನ ಮಾರ್ಗದ ಸೋಪಾನ ಪಂಚಕಗಳೆಂದು ಕರೆಯಬಹುದು. ಇವುಗಳಲ್ಲಿ ತ್ಯಾಗರಾಜರ ಸಂಗೀತ ಪ್ರತಿಭೆ ಮತ್ತು ಸಾಹಿತ್ಯ ಪ್ರೌಢಿಮೆಗಳು ಪರಸ್ಪರ ಸ್ಪರ್ಧಿಸಿ ಮೇರುಶಿಖರವನ್ನು ಮುಟ್ಟಿದೆ. ಇದರ ಸಾಹಿತ್ಯ ಸೌಂದರ್ಯ,ನಾದ ಮಾಧುರ್ಯ, ಸ್ವರ ಸಂಯೋಜನೆ, ಅರ್ಥ ಪುಷ್ಟಿ ಎಲ್ಲವೂ ರಂಜಕ ಮತ್ತು ರೋಚಕ ಜಗತ್ತಿನಲ್ಲಿ ಸಂಗೀತ ಇರುವ ತನಕ ತ್ಯಾಗರಾಜರ ಹೆಸರು ಅದರ ಜೊತೆಯಾಗಿ ಇರುವುದು.

ವಾಲ್ಮೀಕಿಗಳ 24000 ಶ್ಲೋಕಗಳ ರಾಮಾಯಣ ದಂತೆ, ತ್ಯಾಗರಾಜರು 24000 ಕೃತಿಗಳನ್ನು ರಚಿಸಿದರೆಂದು ಪ್ರತೀತಿ. ಈಗ ನಮಗೆ ಲಭ್ಯವಿರುವುದು ಕೇವಲ ಒಂದು ಸಾವಿರ ಮಾತ್ರ.

ತ್ಯಾಗರಾಜರು ನಿಧನರಾದದ್ದು ಪುಷ್ಯ ಬಹುಳ ಪಂಚಮಿ, ಇದಕ್ಕೆ ಮೊದಲು ಶ್ರೀರಾಮನೇ ತಮ್ಮನ್ನು ಕನಸಿನಲ್ಲಿ ಕರೆ ದಂತಾಗಲು ಸನ್ಯಾಸ ಸ್ವೀಕರಿಸಿ, ಮಾರನೆಯ ದಿನ ತಾವು ಶ್ರೀರಾಮನ ಬಳಿ ತೆರಳುವುದಾಗಿ ತಿಳಿಸಿ, ಅವ್ಯಾಹತವಾಗಿ ಭಜನೆ ಮಾಡಬೇಕೆಂದು ಭಕ್ತ ವೃಂದವನ್ನು ಕೋರಿ ಸ್ವರ್ಗಸ್ಥ ರಾದರು.ಕಾವೇರಿ ತೀರದದಲ್ಲಿರುವ ತಿರುವಯ್ಯಾರಿನಲ್ಲಿ ತಮ್ಮ ಗುರುಗಳ ಸಮಾಧಿ ಬಳಿಯಲ್ಲಿಯೇ ತಮಗೂ ಅಂತ್ಯ ಸಂಸ್ಕಾರ ವಾಗಬೇಕೆಂದು ಕೇಳಿಕೊಂಡರು. ಅದರಂತೆ ಪ್ರತಿ ವರ್ಷ ಶಿಷ್ಯ ಸಮೂಹವೂ ಗೋಷ್ಠಿಗಾಯನ ಏರ್ಪಡಿಸಿ ಭಕ್ತಿ ಪೂರ್ವಕವಾಗಿ ಆರಾಧನೆಯನ್ನು ಇಂದಿಗೂ ನಡೆಸುತ್ತ ಬರುತ್ತಿರುವರು.

ಲೌಕಿಕ ವ್ಯವಹಾರದಲ್ಲಿ ಮುಳುಗಿದ ನಾವಿಂದು ಆಚರಣೆಗಳನ್ನೂ ವ್ಯಾವಹಾರಿಕವಾಗಿ ನೋಡುತ್ತಿದ್ದೇವೆ. ನಮ್ಮ



ಮಟ್ಟಿಗೆ ಅದೊಂದು ಪ್ರದರ್ಶನ ವಸ್ತುವಾಗಿದೆ. ತ್ಯಾಗರಾಜರ ಆರಾಧನೆಯೂ ಸಾಂಕೇತಿಕವಾಗುತ್ತಿರುವುದು ನಿಜಕ್ಕೂ ವಿಷಾದನೀಯ ಸಂಗತಿ. ಭಕ್ತಿ ಸಾಗರದ ಪಿತಾಮಹರಂತಿರುವ ತ್ಯಾಗರಾಜರ ಆರಾಧನೆ ಡಾಂಭಿಕತೆಯಿಂದ ಹೊರತಾಗಬೇಕು. ಅಂತಹ ದೃಷ್ಟಿಕೋನ ನಮ್ಮಲ್ಲಿ ಮೂಡಿದಾಗ ಮಾತ್ರ ತ್ಯಾಗರಾಜರಿಗೆ ನಿಜವಾದ ಗೌರವ ಸಲ್ಲಿಸಿದಂತಾಗುತ್ತದೆ.

ತ್ಯಾಗರಾಜರ ವ್ಯಕ್ತಿ ಚಿತ್ರಣ, ಶಕ್ತಿ ಸಾಧನೆಯನ್ನು ಅವರ ನೇರ ಶಿಷ್ಯರಾದ ವಾಲಾಜ ಪೇಟೆಯ ವೆಂಕಟರಮಣ ಭಾಗವತರ ಕೃತಿ 'ವ್ಯಾಸೋ ನೈಗಮಾರ್ಚಯಾ ಮೃಧುಗಿರಾ ವಲ್ಮೀಕ ಜನ್ಮಾ' ಎಂದು ಪ್ರಾರಂಭವಾಗುವ ಕೃತಿಯಲ್ಲಿ 'ತ್ಯಾಗರಾಜರು ವೇದ ವೇದಾಂತದ ವಿಶ್ಲೇಷಣೆಯಲ್ಲಿ ವ್ಯಾಸರಂತಿದ್ದಾರೆ. ಲಲಿತ ರಮಣೀಯ ಪದ ವಿನ್ಯಾಸದಲ್ಲಿ ವಾಲ್ಮೀಕಿ , ವೈರಾಗ್ಯದಲ್ಲಿ ಶುಕ, ಭಕ್ತಿ ಭಾವದಲ್ಲಿ ಪ್ರಹ್ಲಾದ, ಸಾಹಿತ್ಯ ನೈಪುಣ್ಯತೆಯಲ್ಲಿ ಚತುರ್ಮುಖ ಬ್ರಹ್ಮ,ಸಂಗೀತ ಶಾಸ್ತ್ರದಲ್ಲಿ ನಾರದ'ಎಂದಿದ್ದಾರೆ. ಪ್ರಾಯಶಃ ತ್ಯಾಗರಾಜರನ್ನು ಇದಕ್ಕಿಂತಲೂ ಉತ್ತಮ ರೀತಿಯಲ್ಲಿ ಬಣ್ಣಿಸಲು ಸಾಧ್ಯವಿಲ್ಲ.ರಾಮ ಬ್ರಹ್ಮಸುಪುತ್ರಾಯ ರಮಣೀಯಾಮಲವೃತ್ತಯೇ। ರಾಮ ಭಕ್ತಿ ತ್ಯಾಗರಾಜಾಯ ಮಂಗಳಂ॥

ತ್ಯಾಗರಾಜರಿಗೆ ಶಾಸ್ತ್ರೀಯ ಸಂಗೀತದಲ್ಲಿ ಅಡಗಿರುವ ತಾಂತ್ರಿಕತೆಗಿಂತಲೂ ಅದರ ದೈವತ್ವ ಬಹಳ ಪ್ರಿಯವಾದದ್ದಾಗಿತ್ತು. ಸಂಗೀತದ ಮೂಲಕ ದೊರೆಯುತ್ತಿದ್ದ ದೈವಿಕ ಆನಂದಕ್ಕೆ ಪಾರವೇ ಇಲ್ಲ ಎನ್ನುತ್ತಿದ್ದರು ತ್ಯಾಗರಾಜರು.ದಕ್ಷಿಣ ಭಾರತದ ಒಂದೊಂದೇ ದೇವಾಲಯಗಳನ್ನು ದರ್ಶಿಸುತ್ತಾ,ದೇವರ ಸಾನಿಧ್ಯದಲ್ಲಿ ಭಕ್ತಿ ಪರವಶರಾಗಿ ನೂರಾರು ಕೀರ್ತನೆಗಳನ್ನು ರಚಿಸಿದರು. ಇವರ ಪ್ರತಿಯೊಂದು ಕೃತಿಯೂ ದೇವರ ಗುಣಗಾನ, ಭಕ್ತಿಯ ಆಯಾಮಗಳು, ಭಗವಂತನ ಸೃಷ್ಟಿಯ ಸೌಂದರ್ಯದ ಬಗೆಗಿನ ಅಚ್ಚರಿಗಳನ್ನು ಒಳಗೊಂಡಿವೆ. ತ್ಯಾಗರಾಜರು ತಮ್ಮ ಆರಾಧ್ಯದೈವ ಶ್ರೀರಾಮನ ಬಗ್ಗೆ ಹೆಚ್ಚಿನ ಸಂಖ್ಯೆಯಲ್ಲಿ ಕೀರ್ತನೆಗಳನ್ನು ರಚಿಸಿದ್ದಾರೆ. ತ್ಯಾಗರಾಜರ ಕೀರ್ತನೆಗಳಲ್ಲಿ ಪ್ರತಿಯೊಂದು ತನ್ನದೆ ಆದ ಶೈಲಿಯಲ್ಲಿ ಅಸಾಧಾರಣ ಮತ್ತು ಅದ್ಭುತ.ಅವರ ಜಗತ್ಪ್ರಸಿದ್ಧ ಪಂಚರತ್ನ ಕೀರ್ತನೆಗಳಂತೂ ಕರ್ನಾಟಕ ಶಾಸ್ತ್ರೀಯ ಸಂಗೀತದ ಮುಕುಟದ ರತ್ನಗಳೇ ಸರಿ.

ಶ್ರೀರಾಗದ 'ಎಂದರೋ ಮಹಾನುಭಾವುಲು', ನಾಟರಾಗದ 'ಜಗದಾನಂದಕಾರಕ', ಶಂಕರಾಭರಣಂ ರಾಗದ 'ವರಲೀಲ ಗಣಲೋಲ', ಹಿಂದೋಳ ರಾಗದ 'ಸಾಮಜವರಗಮನ', ಅಭೇರಿರಾಗದ "ನಗುಮೋಮು ಗನಲೇನಿ"ಯಂತಹ ಕೀರ್ತನೆಗಳು ತಮಗೆ ತಾವೇ ಸಾಟಿ.

## ಡಯಲ್ ಯುವರ್ ಇ.ಓ.

## ಯಾತ್ರಿಕ ಭಕ್ತರಲ್ಲಿ..... ವಿನಂತಿ

**ತಿರುಪತಿ ತಿರುಮಲೆಯಲ್ಲಿ ತಮ್ಮ ಅನುಭವಕ್ಕೆ ಬಂದ ಕುಂದು ಕೊರತೆಗಳ ಬಗ್ಗೆ ಹೆಚ್ಚು - ಕಡಿಮೆಗಳ ಬಗ್ಗೆ-ಸಲಹೆ ಸೂಚನೆಗಳನ್ನು ಕಾರ್ಯನಿರ್ವಹಣಾಧಿಕಾರಿಯವರಿಗೆ ನೇರವಾಗಿ ನೀಡಬಹುದು. ಅದಕ್ಕಾಗಿ ಪ್ರತಿ ತಿಂಗಳ ಮೊದಲ ಶುಕ್ರವಾರ ಬೆಳಗ್ಗೆ 8-30 ರಿಂದ 9-30 ಗಂಟೆಯವರೆಗೆ ತಾವು ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿಗಳೊಡನೆ ದೂರವಾಣಿಯಲ್ಲಿ ಮಾತನಾಡಬಹುದು.**

**ದೂರವಾಣಿ ಸಂಖ್ಯೆ -0877-2263261**

**ಯಾತ್ರಿಕರ ಸೌಕರ್ಯಗಳನ್ನು ಹೆಚ್ಚಿಸಲು**

**ತಮ್ಮ ಯಾತ್ರೆ ಸುಲಭತರವಾಗಿ ಕೈಗೂಡಲು - ಮಾತನಾಡಿ.**

## ಜನವರಿ 2019

ಶ್ರೀ ವೆಂಕಟೇಶ ಚರಣೌ ಶರಣಂ ಪ್ರಪದ್ಯೇ

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | 31 | | |

## ಫೆಬ್ರವರಿ 2019

ಶ್ರೀ ವೆಂಕಟೇಶ ಚರಣೌ ಶರಣಂ ಪ್ರಪದ್ಯೇ

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | | |

## ಮಾರ್ಚ್ 2019

ಶ್ರೀ ವೆಂಕಟೇಶ ಚರಣೌ ಶರಣಂ ಪ್ರಪದ್ಯೇ

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| 31 | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |



### ಜನವರಿ 2019

01. ಆಂಗ್ಲ ಹೊಸ ವರ್ಷಾರಂಭ.
14. ಭೋಗಿ, ಭೋಗಿತೇರು.
15. ಮಕರ ಸಂಕ್ರಾಂತಿ.
16. ಕನುಮ
    ಶ್ರೀ ಗೋದಾದೇವಿ ಪರಿಣಯೋತ್ಸವ.
21. ಶ್ರೀ ರಾಮಕೃಷ್ಣ ತೀರ್ಥಮುಕ್ಕೋಟಿ.
26. ಗಣರಾಜ್ಯೋತ್ಸವ.

### ಫೆಬ್ರವರಿ 2019

12. ರಥಸಪ್ತಮಿ.

13 ರಿಂದ 19 ರವರೆಗೆ ತಿರುಪತಿ
ಶ್ರೀ ಗೋವಿಂದ ರಾಜಸ್ವಾಮಿಯವರ ತೆಪ್ಪೋತ್ಸವ.

16. ಭೀಷ್ಮ ಏಕಾದಶಿ.
19. ಕುಮಾರಧಾರಾ ತೀರ್ಥ ಮುಕ್ಕೋಟಿ.

24 ರಿಂದ ಮಾರ್ಚ್ 04 ರ ವರೆಗೆ ಶ್ರೀನಿವಾಸ ಮಂಗಾಪುರಂ
ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ.

25 ರಿಂದ ಮಾರ್ಚ್ 06 ರ ವರೆಗೆ ತಿರುಪತಿ
ಶ್ರೀ ಕಪಿಲೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ.

### ಮಾರ್ಚ್ 2019

04. ಮಹಾಶಿವರಾತ್ರಿ.

13 ರಿಂದ 21 ರ ವರೆಗೆ ತರಿಗೊಂಡ ಶ್ರೀ ಲಕ್ಷ್ಮೀ ನರಸಿಂಹ
ಸ್ವಾಮಿಯವರ ಬ್ರಹ್ಮೋತ್ಸವ.

16 ರಿಂದ 20 ರ ವರೆಗೆ ತಿರುಮಲ
ಶ್ರೀ ವೆಂಕಟೇಶ್ವರ ಸ್ವಾಮಿಯವರ ತೆಪ್ಪೋತ್ಸವ.

20. ತುಂಬುರು ತೀರ್ಥ ಮುಕ್ಕೋಟಿ .

24 ರಿಂದ 28 ರ ವರೆಗೆ ನಾಗಾಲಾಪುರಂ
ಶ್ರೀವೇದನಾರಾಯಣ ಸ್ವಾಮಿಯವರ ತೆಪ್ಪೋತ್ಸವ .




ತಿರುಮಲ ತಿರುಪತಿ ದೇವಸ್ಥಾನಗಳ

ಸಪ್ತಗಿರಿ ಸಚಿತ್ರ ಮಾಸಪತ್ರಿಕೆ


## ಏಪ್ರಿಲ್ 2019

ಶ್ರೀ ವೇಂಕಟೇಶ ಚರಣೌ ಶರಣಂ ಪ್ರಪದ್ಯೇ

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | | | | |

## ಮೇ 2019

ಶ್ರೀ ವೇಂಕಟೇಶ ಚರಣೌ ಶರಣಂ ಪ್ರಪದ್ಯೇ

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |

## ಜೂನ್ 2019

ಶ್ರೀ ವೇಂಕಟೇಶ ಚರಣೌ ಶರಣಂ ಪ್ರಪದ್ಯೇ

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| 30 | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

### ಏಪ್ರಿಲ್ 2019

01. [illegible]
02 ರಿಂದ 10 ರ ವರೆಗೆ [illegible]
06. ಶ್ರೀ [illegible] "[illegible]".
13 ರಿಂದ 21 ರ ವರೆಗೆ [illegible]
14. ಶ್ರೀ [illegible]
17 ರಿಂದ 19 ರ ವರೆಗೆ [illegible]
19 ರಿಂದ 27 ರ ವರೆಗೆ [illegible]

### ಮೇ 2019

07. [illegible]
09. ಶ್ರೀ [illegible]
11 ರಿಂದ 19 ರ ವರೆಗೆ [illegible]
12 ರಿಂದ 14 ರ ವರೆಗೆ [illegible]
14. [illegible]
16 ರಿಂದ 24 ರ ವರೆಗೆ [illegible]
17. ಶ್ರೀ [illegible]
17 ರಿಂದ 19 ರ ವರೆಗೆ [illegible]
19. ಶ್ರೀ [illegible], ಶ್ರೀ [illegible].

### ಜೂನ್ 2019

ಮೇ 26 ರಿಂದ ಜೂನ್ 03 ರ ವರೆಗೆ [illegible]
13 ರಿಂದ 21 ರ ವರೆಗೆ [illegible]
13 ರಿಂದ 17 ರ ವರೆಗೆ [illegible]
14 ರಿಂದ 16 ರ ವರೆಗೆ [illegible]
23 ರಿಂದ 25 ರ ವರೆಗೆ [illegible]

**ಜುಲೈ 2019** — ಶ್ರೀ ವೆಂಕಟೇಶಂ ಶರಣಂ ಪ್ರಪದ್ಯೇ!!

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | 31 | | | |

**ಆಗಸ್ಟ್ 2019** — ಶ್ರೀ ವೆಂಕಟೇಶಂ ಶರಣಂ ಪ್ರಪದ್ಯೇ!!

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | 31 |

**ಸೆಪ್ಟೆಂಬರ್ 2019** — ಶ್ರೀ ವೆಂಕಟೇಶಂ ಶರಣಂ ಪ್ರಪದ್ಯೇ!!

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | | | | | |



## ಜುಲೈ 2019

12 ರಿಂದ 14 ರ ವರೆಗೆ ತಿರುಪತಿ ಶ್ರೀ ಗೋವಿಂದ ರಾಜ ಸ್ವಾಮಿಯವರ ಜ್ಯೇಷ್ಠಾಭಿಷೇಕ.
16. ಗುರು ಪೂರ್ಣಿಮಾ, ಚಂದ್ರಗ್ರಹಣ.
17. ತಿರುಮಲ ಸ್ವಾಮಿಯವರ ಆಣಿವರ ಆಸ್ಥಾನ.
27 ರಿಂದ 30 ರ ವರೆಗೆ ತಿರುಪತಿ ಶ್ರೀಕೋದಂಡರಾಮಸ್ವಾಮಿಯವರ ಪವಿತ್ರೋತ್ಸವ.
27. ಆದಿಕೃತ್ತಿಕ.

## ಆಗಸ್ಟ್ 2019

01. ಶ್ರೀ ಚಕ್ರತ್ತಾಳ್ವಾರ್, ಶ್ರೀ ಪ್ರತಿವಾದಿ ಭಯಂಕರ ಅಣ್ಣನ್ ವ.ತಿ.ನ.
05. ಗರುಡ ಪಂಚಮಿ.
09. ಶ್ರೀ ವರಮಹಾಲಕ್ಷ್ಮೀ ವ್ರತ, ಶ್ರೀ ತರಿಗೊಂಡ ವೆಂಗಮಾಂಬ ವರ್ಧಂತಿ.
10 ರಿಂದ 13 ರ ವರೆಗೆ ತಿರುಮಲ ಸ್ವಾಮಿಯವರ ಪವಿತ್ರೋತ್ಸವ.
15. ಸ್ವಾತಂತ್ರ್ಯ ದಿನೋತ್ಸವ, ಶ್ರೀ ಹಯಗ್ರೀವ ಜಯಂತಿ, ಶ್ರೀ ವಿಖನಸಾಚಾರ್ಯರ ಜಯಂತಿ.
23. ಗೋಕುಲಾಷ್ಟಮಿ, ಶ್ರೀ ಕೃಷ್ಣಾಷ್ಟಮಿ.

## ಸೆಪ್ಟೆಂಬರ್ 2019

01. ಶ್ರೀ ವರಾಹ ಜಯಂತಿ, ಶ್ರೀ ಬಲರಾಮ ಜಯಂತಿ.
02. ವಿನಾಯಕ ಚವತಿ.
03. ಋಷಿ ಪಂಚಮಿ.
10. ಶ್ರೀ ವಾಮನ ಜಯಂತಿ.
12. ಶ್ರೀ ಅನಂತ ಪದ್ಮನಾಭವ್ರತ.
10 ರಿಂದ 14 ರ ವರೆಗೆ ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಪವಿತ್ರೋತ್ಸವ.
14 ರಿಂದ 28 ರ ವರೆಗೆ ಮಹಾಲಯ ಪಕ್ಷಗಳು.

30 ರಿಂದ ಅಕ್ಟೋಬರ್ 08 ರ ವರೆಗೆ ತಿರುಮಲ ಶ್ರೀ ವೆಂಕಟೇಶ್ವರ ಸ್ವಾಮಿಯವರ ವಾರ್ಷಿಕ ಬ್ರಹ್ಮೋತ್ಸವ

ತಿರುಮಲ ತಿರುಪತಿ ದೇವಸ್ಥಾನಗಳು

**ಸಪ್ತಗಿರಿ** ಸಚಿತ್ರ ಮಾಸಪತ್ರಿಕೆ

## ಅಕ್ಟೋಬರ್ 2019

ಶ್ರೀ ವೆಂಕಟೇಶಃ ಶರಣಂ ಪ್ರಪದ್ಯೇ!!

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | 31 | | |

## ನವೆಂಬರ್ 2019

ಶ್ರೀ ವೆಂಕಟೇಶಃ ಶರಣಂ ಪ್ರಪದ್ಯೇ!!

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

## ಡಿಸೆಂಬರ್ 2019

ಶ್ರೀ ವೆಂಕಟೇಶಃ ಶರಣಂ ಪ್ರಪದ್ಯೇ!!

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | 31 | | | | |



### ಅಕ್ಟೋಬರ್ 2019

02. ಗಾಂಧಿ ಜಯಂತಿ.
04. ತಿರುಮಲ ಸ್ವಾಮಿಯವರ ಗರುಡ ಸೇವೆ, ಸರಸ್ವತಿ ಪೂಜೆ.
05. ತಿರುಮಲ ಸ್ವಾಮಿಯವರ ಸ್ವರ್ಣರಥೋತ್ಸವ.
06. ದುರ್ಗಾಷ್ಟಮಿ, 08. ವಿಜಯದಶಮಿ.
26 ನರಕಚತುರ್ದಶಿ.
27. ದೀಪಾವಳಿ, ಶ್ರೀ ಕೇದಾರಗೌರಿ ವ್ರತ, ತಿರುಮಲ ಸ್ವಾಮಿಯವರ ಆಲಯದಲ್ಲಿ ದೀಪಾವಳಿ ಆಸ್ಥಾನ.
31. ನಾಗಚತುರ್ಥಿ.

### ನವೆಂಬರ್ 2019

04. ತಿರುಮಲ ಸ್ವಾಮಿಯವರ ಪುಷ್ಪಯಾಗ.
08 ರಿಂದ 12 ರ ವರೆಗೆ ನಾರಾಯಣವನಂ ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ತೆಪ್ಪೋತ್ಸವ.
09. ಕೈಶಿಕದ್ವಾದಶಿ.
18. ತಿರುಪತಿ ಶ್ರೀ ಕಪಿಲೇಶ್ವರಸ್ವಾಮಿಯವರ ಲಕ್ಷ ಬಿಲ್ವಾರ್ಚನೆ.
23 ರಿಂದ ಡಿಸೆಂಬರ್ 01 ರ ವರೆಗೆ ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಬ್ರಹ್ಮೋತ್ಸವ.
24. ಧನ್ವಂತರಿ ಜಯಂತಿ.

### ಡಿಸೆಂಬರ್ 2019

01. ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಪಂಚಮಿತೀರ್ಥ.
02. ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಪುಷ್ಪಯಾಗ.
08. ಗೀತಾಜಯಂತಿ.
09. ಶ್ರೀ ಚಕ್ರತೀರ್ಥ ಮುಕ್ಕೋಟಿ.
10. ತಿರುಪತಿ ಶ್ರೀ ಕಪಿಲೇಶ್ವರ ಸ್ವಾಮಿಯವರ ಆಲಯದಲ್ಲಿ ಕಾರ್ತೀಕ ದೀಪೋತ್ಸವ.
11. ಶ್ರೀ ದತ್ತ ಜಯಂತಿ.
17. ಧನುರ್ಮಾಸಾರಂಭ.
26. ಸೂರ್ಯಗ್ರಹಣ.



# ಸಂಕ್ರಾಂತಿ

ಡಾ|| ಎಂ.ಜಿ. ನಂದನರಾವ್

"ಕಾಲಕ್ಕೆ ಕೊನೆಯಿಲ್ಲ", "ಕಾಲ ಕಳೆದರೆ ಮರಳಿ ಬರುವುದಿಲ್ಲ" ಮೊದಲಾದ ಮಾತುಗಳನ್ನು ನಾವು ಹಲವು ಬಾರಿ ಕೇಳಿರುತ್ತೇವೆ, ಕೆಲವುಬಾರಿ ನಾವೇ ಹೇಳಿರುತ್ತೇವೆ. ಕೊನೆಯಿಲ್ಲದ ಕಾಲಕ್ಕೆ ನಾವೆಲ್ಲ ಅಧೀನರು. ಕಾಲದಿಂದ ಯಾರೂ ಹೊರತಾಗಿಲ್ಲ ಎನ್ನುವುದು ತಿಳಿದವರ ಮಾತು. ಅನಂತವಾದ ಈ ಕಾಲವನ್ನು ನಾವು ಭಗವಂತನ ಸ್ವರೂಪವೆಂದೇ ಭಾವಿಸಿಕೊಂಡು ಬಂದಿದ್ದೇವೆ. ಈ ಕಾಲಕ್ಕೆ ಕೊನೆ ಇಲ್ಲದೇ ಇದ್ದರೂ ನಮ್ಮ ವ್ಯವಹಾರಕ್ಕಾಗಿ ಇದನ್ನು ಬೇರೆ ಬೇರೆ ಮಾನಗಳಲ್ಲಿ ಅಳೆದಿದ್ದೇವೆ. ಕಾಲವನ್ನು ಕಲಾ, ಕಾಷ್ಟ, ನಿಮೇಷ ಹೋರ, ದಿವಸ, ವಾರ, ಪಕ್ಷ, ಮಾಸ, ಅಯನ, ಸಂವತ್ಸರ, ಯುಗ, ಮಹಾಯುಗ, ಮನ್ವಂತರ ಹೀಗೆ ಅನೇಕ ವಿಧವಾದ ವಿಭಾಗಗಳನ್ನು ನಮ್ಮ ಹಿರಿಯರು ಮಾಡಿದ್ದಾರೆ. ಇವುಗಳಿಗೆ ಒಂದೊಂದಕ್ಕೂ ಪ್ರಯೋಜನಗಳನ್ನೂ ತಿಳಿಸಿದ್ದಾರೆ. ತಿಥಿ, ವಾರ, ನಕ್ಷತ್ರ, ಮಾಸಸಂವತ್ಸರ ಮೊದಲಾದ ಕಾಲದ ವಿಭಾಗಗಳ ಹೆಸರುಗಳನ್ನು ಸಾಮಾನ್ಯ ಜನರೂ ಬಳಸುತ್ತಾರೆ. ಭಾರತೀಯ ಕಾಲಗಣನಾಶಾಸ್ತ್ರವನ್ನು ನಾವು ಸಾಮಾನ್ಯವಾಗಿ ಜ್ಯೋತಿಷಶಾಸ್ತ್ರವೆಂದು ಕರೆಯುತ್ತೇವೆ. ಈ ಶಾಸ್ತ್ರದಲ್ಲಿ ಗ್ರಹಗಳ ಸಂಚಾರವನ್ನು ಆಧಾರವಾಗಿರಿಸಿಕೊಂಡು ಕಾಲವನ್ನು ಅಳೆಯುವ ವಿಧಾನವನ್ನು ಬಳಸಿ ಕೊಂಡಿದ್ದಾರೆ. ಇದಕ್ಕೆ ಗಣಿತದ ಲೆಕ್ಕಗಳನ್ನು ಜೋಡಿಸಿ ಹುಣ್ಣಿಮೆ, ಅಮಾವಾಸ್ಯೆ, ಗ್ರಹಣ ಮೊದಲಾದ ಬದಲಾವಣೆಗಳನ್ನು ಖರಾರುವಕ್ಕಾಗಿ ಗುಣಿಸುವಲ್ಲಿ ಸಫಲರಾಗಿದ್ದಾರೆ. ಭಾರತದಲ್ಲಿ ಬಳಕೆಯಲ್ಲಿರುವ ಪ್ರಮುಖವಾದ ಕಾಲದ ಗಣನೆಯ ಮಾನಗಳನ್ನು ಒಮ್ಮೆ ತಿಳಿದು ಕೊಳ್ಳೋಣ.

ಸೌರಮಾನ, ಚಾಂದ್ರಮಾನ, ಬಾರ್ಹ ಸ್ಪತ್ಯ ಮಾನ, ನಾಕ್ಷತ್ರಮಾನ, ಸಾವನಮಾನ ಎನ್ನುವ ಐದು ಮಾನಗಳು ಪ್ರಮುಖವಾಗಿ ಬಳಕೆಯಲ್ಲಿವೆ. ಇವುಗಳ ಹಿನ್ನೆಲೆಯನ್ನು ತಿಳಿದು ಕೊಳ್ಳೋಣ?

### ಸೌರಮಾನ

ಸೂರ್ಯನ ಚಲನೆಯನ್ನು ಆಧಾರವಾಗಿ ಇರಿಸಿಕೊಂಡು ಮಾಡುವ ಕಾಲ ಗಣನೆ ಸೌರಮಾನ ಎಂದು ಕರೆಸಿಕೊಳ್ಳುತ್ತದೆ. ಈ ಮಾನದ ಪ್ರಕಾರ ಉಂಟಾಗುವ ತಿಂಗಳುಗಳನ್ನು ಸೌರ





ಮಾಸಗಳೆಂದು ಕರೆಯುತ್ತಾರೆ. ಅವುಗಳಿಗೆ ಮೇಷ, ವೃಷಭ, ಮಿಥುನ ಮೊದಲಾದ ಹೆಸರುಗಳಿಂದ ಕರೆಯುತ್ತಾರೆ. ಇವುಗಳು 12 ಇವೆ. ಇವುಗಳನ್ನು ರಾಶಿಗಳೆಂದು ಕೂಡ ಕರೆಯುತ್ತಾರೆ. ಮೇಷದಿಂದ ಮೀನದವರೆಗಿನ ಕಾಲವನ್ನು ಒಂದು ಸೌರಮಾಸವೆಂದು ಪರಿಗಣಿಸುತ್ತಾರೆ. ಸೌರಮಾನ ಪ್ರಕಾರವಾಗಿ ಅಯನಗಳು ಏರ್ಪಡುತ್ತವೆ. ಅದೇ ರೀತಿ ಕೆಲವು ಪರ್ವ ದಿನಗಳನ್ನು ಈ ಕಾಲಗಣನೆಗೆ ಅನುಸಾರವಾಗಿಯೇ ಆಚರಿಸುತ್ತೇವೆ. ಈ ಕಾಲಗಣನೆಯನ್ನು ಭಾರತದ ಎಲ್ಲ ಕಡೆಗಳಲ್ಲಿಯೂ ಪಾಕ್ಷಿಕವಾಗಿ ಸ್ವೀಕರಿಸಿದ್ದಾರೆ. ವಿಶೇಷವಾಗಿ ತಮಿಳು ನಾಡಿನಲ್ಲಿ ಸೌರಮಾನ ಆಚರಣೆ ಹೆಚ್ಚಾಗಿ ಕಂಡು ಬರುತ್ತದೆ. ಮಕರಸಂಕ್ರಾಂತಿ, ಕರ್ಕಾಟಕ ಸಂಕ್ರಾಂತಿಯ ಹಬ್ಬಗಳು ಸೌರಮಾನದಲ್ಲಿಯೇ ಬರುತ್ತವೆ.

### ಚಾಂದ್ರಮಾನ

ಚಂದ್ರನ ಚಲನೆಯನ್ನು ಆಧಾರವಾಗಿರಿಸಿಕೊಂಡು ಕಾಲವನ್ನು ಅಳೆಯುವ ಪದ್ಧತಿಯನ್ನು ಚಾಂದ್ರಮಾನವೆಂದು ಕರೆಯುತ್ತಾರೆ. ಭಾರತದ ಎಲ್ಲಕಡೆಗಳಲ್ಲಿ ವ್ಯಾಪಕವಾಗಿ ಬಳಕೆ



ಯಲ್ಲಿರುವ ಕಾಲಮಾನ ಇದಾಗಿದೆ. ಚೈತ್ರ ವೈಶಾಖ ಮೊದಲಾದವು ಚಾಂದ್ರಮಾಸಗಳು, ಪಾಡ್ಯ ಬಿದಿಗೆ ತದಿಗೆ ಮೊದಲಾದ ತಿಥಿಗಳು ಚಾಂದ್ರಮಾನದಲ್ಲಿದೆ. ನಾವು ಆಚರಿಸುವ ಹೆಚ್ಚು ಪಾಲಿನ ಹಬ್ಬಗಳು ಚಾಂದ್ರಮಾನಕ್ಕೆ ಸಂಬಂಧಪಟ್ಟಿವೆ.

### ನಾಕ್ಷತ್ರಮಾನ

ಆಕಾಶದಲ್ಲಿ ನಮಗೆ ಕಾಣುವ ನಕ್ಷತ್ರಗಳನ್ನು 27 ಗುಂಪುಗಳನ್ನಾಗಿ ವಿಂಗಡಿಸಿದ್ದಾರೆ. ಅವುಗಳಿಗೆ ಅಶ್ವಿನಿ, ಭರಣಿ ಮುಂತಾದ ಹೆಸರುಗಳನ್ನು ಇರಿಸಿದ್ದಾರೆ. ತಿಥಿ, ವಾರ, ನಕ್ಷತ್ರಗಳನ್ನು ಮುಹೂರ್ತಗಳಿಗಾಗಿ ನೋಡುವ ಪದ್ಧತಿ ವ್ಯಾಪಕವಾಗಿ ಬಳಕೆಯಲ್ಲಿದೆ.

### ಬಾರ್ಹಸ್ಪತ್ಯಮಾನ

ಬೃಹಸ್ಪತಿ ಎಂದರೆ ಗುರು. ಗುರು ಗ್ರಹದ ಚಲನೆಯನ್ನು ಆಧಾರವಾಗಿರಿಸಿಕೊಂಡು ಕಾಲವನ್ನು ಅಳೆಯುವ ಪದ್ಧತಿ ಇದಾಗಿದೆ. ಹೆಚ್ಚಾಗಿ ಈ ಪದ್ಧತಿಯನ್ನು ಕಾಶಿಯ ಸುತ್ತ ಮುತ್ತಲಿನ ಪ್ರಾಂತದವರು ಆಚರಿಸುತ್ತಾರೆ.

### ಸಾವನಮಾನ

ಗ್ರಹಗಳ ಚಲನೆಯ ಏರುಪೇರು ಗಳಿಂದ ತಿಥಿ, ನಕ್ಷತ್ರ ಮೊದಲಾದವುಗಳ ಕಾಲಮಿತಿಯಲ್ಲಿ ಬದಲಾವಣೆಗಳು ಉಂಟಾಗುತ್ತವೆ. ಆದ್ದರಿಂದ ಅವುಗಳನ್ನು ಹೊರತು ಪಡಿಸಿ 24 ಗಂ॥ಗಳ ಒಂದು ದಿನವನ್ನು ಲೆಕ್ಕ ಹಾಕುವ ವಿಧಾನವು ಸಾವನಮಾನದಲ್ಲಿದೆ. ಇದರ ಪ್ರಕಾರ ಯಜ್ಞ ಯಾಗಗಳನ್ನು ನಡೆಸುತ್ತಾರೆ.

ಹೀಗೆ ನಮ್ಮ ದೇಶದಲ್ಲಿ ಐದು ವಿಧವಾದ ಕಾಲಗಣನೆಯ ಮಾನಗಳನ್ನು ಅವಲಂಬಿಸುತ್ತಾರೆ. ಸೌರಮಾನದ ಪ್ರಕಾರ ಉಂಟಾಗುವ ಪ್ರಸಿದ್ಧವಾದ ಪರ್ವದಿನ ಸಂಕ್ರಾಂತಿ. ಇದನ್ನು ಸಂಕ್ರಮಣ ಎಂದು ಕರೆಯುತ್ತಾರೆ.

### ಸಂಕ್ರಾಂತಿ ಎಂದರೆ ಏನು?

ಸೂರ್ಯನು ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಪ್ರವೇಶಿಸುವ ಕಾಲವನ್ನು ಸಂಕ್ರಮಣ ಎಂದು ಕರೆಯುತ್ತಾರೆ. ಈ ಸಂಕ್ರಮಣವನ್ನು ಸಂಕ್ರಾಂತಿ ಎಂದು ಕೂಡ ಕರೆಯುತ್ತಾರೆ. ವಾಸ್ತವದಲ್ಲಿ 12 ರಾಶಿಗಳಿರುವುದರಿಂದ ಒಂದು ವರ್ಷಕ್ಕೆ ಹನ್ನೆರಡು ಸಂಕ್ರಮಣಗಳು ಉಂಟಾಗುತ್ತವೆ. ಆದರೆ ಅವುಗಳಲ್ಲಿ ಕರ್ಕಾಟಕ ಸಂಕ್ರಮಣ ಮತ್ತು ಮಕರಸಂಕ್ರಮಣಗಳು ಪ್ರಸಿದ್ಧವಾಗಿವೆ. ಮಕರ ಸಂಕ್ರಮಣವನ್ನು ಮಕರ ಸಂಕ್ರಾಂತಿ ಎಂದು ಕರೆಯುತ್ತಾರೆ. ಈ ಮಕರ ಸಂಕ್ರಾಂತಿ

ಯನ್ನು ಸಂಕ್ರಾಂತಿ ಎಂದು ಕರೆಯುವುದು ವಾಡಿಕೆ ಯಾಗಿದೆ.

ನಮಗೆಲ್ಲ ಗೊತ್ತಿರುವ ಸಂಕ್ರಾಂತಿ ಎಂದರೆ ಜನ ವರಿ ತಿಂಗಳ 14 ಅಥವಾ 15 ರಂದು ಪ್ರತಿವರ್ಷ ಬರುವ ಹಬ್ಬ ಮಾತ್ರ. ಇದನ್ನು ಮಕರಸಂಕ್ರಾಂತಿ ಎಂದು ಕರೆಯು ತ್ತಾರೆ. ಇದಕ್ಕೆ ಈ ಹೆಸರು ಯಾಕೆ ಬಂದಿದೆ ಎನ್ನುವ ಪ್ರಶ್ನೆ ಸಹಜವಾಗಿಯೇ ಹುಟ್ಟುತ್ತದೆ. ಅದಕ್ಕೆ ಉತ್ತರ ಇಲ್ಲವೆ ಸೂರ್ಯನು ಮಕರರಾಶಿಯನ್ನು ಪ್ರವೇಶಿಸುವ ದಿವಸ ವನ್ನು ಮಕರ ಸಂಕ್ರಾಂತಿ ಎಂದು ಕರೆಯುತ್ತಾರೆ. ಹಾಗಿದ್ದರೆ ಸೂರ್ಯನು ಇತರ ರಾಶಿಗಳನ್ನೂ ಪ್ರವೇಶಿಸುತ್ತಾನೆಯೇ ಎನ್ನುವ ಪ್ರಶ್ನೆ ಸಹಜವಾಗಿಯೇ ಏಳುತ್ತದೆ ಹೌದು. ಸೂರ್ಯನು ಎಲ್ಲಾ 12 ರಾಶಿಗಳನ್ನೂ ಪ್ರವೇಶಿಸುತ್ತಾನೆ. ಪ್ರತಿಯೊಂದು ರಾಶಿಯಲ್ಲಿಯೂ 30 ದಿನಗಳ ಕಾಲ ಸಂಚರಿಸುತ್ತಾನೆ. 31 ನೆಯ ದಿನ ನಂತರದ ರಾಶಿಯನ್ನು ಪ್ರವೇಶಿಸುತ್ತಾನೆ. ಹಾಗೆ ಪ್ರವೇಶಿಸಿದಾಗ ಆ ರಾಶಿಯ ಹೆಸ ರಿನ ಸಂಕ್ರಮಣ (ಸಂಕ್ರಾಂತಿ) ಏರ್ಪಡುತ್ತದೆ. ಅಂದರೆ ಮಕರ ಸಂಕ್ರಾಂತಿಯಂತೆಯೇ ಮೇಷಸಂಕ್ರಾತಿ, ವೃಷಭ ಸಂಕ್ರಾಂತಿಗಳೂ ಏರ್ಪಡುತ್ತವೆ. ಮೇಷ ಸಂಕ್ರಮಣವನ್ನು ಸೌರವರ್ಷದ ಪ್ರಾರಂಭವೆಂದು ಸೌರಮಾನವನ್ನು ಅನು ಸರಿಸುವ ಸಂಪ್ರದಾಯದವರು ಹೊಸ ವರ್ಷ ದಿನವನ್ನು ಆಚರಿಸುತ್ತಾರೆ. ಇದನ್ನು ಸೌರ ಯುಗಾದಿ ಎಂದೂ ಕರೆ ಯುವ ವಾಡಿಕೆಯಿದೆ. ಈ ದಿನವನ್ನು "ವಿಷವತ್" ಎಂದು ಕರೆಯುತ್ತಾರೆ. ಇದನ್ನು ಪರ್ವದಿನವನ್ನಾಗಿ ತಮಿಳುನಾಡು ಹಾಗೂ ಕೇರಳ ರಾಜ್ಯಗಳಲ್ಲಿ ಆಚರಿಸುತ್ತಾರೆ.

ಗಮನಿಸಬೇಕಾದ ಇನ್ನೊಂದು ವಿಷಯವೇ ನೆಂದರೆ ಸೂರ್ಯನಲ್ಲದೆ ಯಾವುದೇ ಗ್ರಹವು ಮೇಷಾದಿ ರಾಶಿಗಳನ್ನು ಪ್ರವೇಶಿಸಿದರೂ ಸಂಕ್ರಾಂತಿ ಉಂಟಾಗುತ್ತದೆ. ಆದರೆ ಅವುಗಳನ್ನು ಹಬ್ಬಗಳನ್ನಾಗಿ ಆಚರಿಸುವ ಪದ್ಧತಿ ಇಲ್ಲ. ಸೂರ್ಯ ಸಂಕ್ರಮಣಗಳಲ್ಲಿಯೂ ಕರ್ಕಾಟಕ ಸಂಕ್ರಾಂತಿ ಹಾಗೂ ಮಕರಸಂಕ್ರಾಂತಿಗಳನ್ನು ಪರ್ವ ದಿವಸವಾಗಿ ಆಚರಿಸುತ್ತಾರೆ. ಅದಕ್ಕೆ ಕಾರಣ ಕರ್ಕಾಟಕ ಸಂಕ್ರಮಣದಿಂದ ದಕ್ಷಿಣಾಯನ ಹಾಗೂ ಮಕರ ಸಂಕ್ರಮಣದಿಂದ ಉತ್ತರಾಯಣವು ಪ್ರಾರಂಭವಾಗುತ್ತದೆ. ಈ ಎರಡರಲ್ಲಿಯೂ ಉತ್ತರಾಯಣ ಪ್ರಾರಂಭಕ್ಕೆ ಹೆಚ್ಚಿನ ಪ್ರಾಧಾನ್ಯತೆ ಇದೆ. ಯಾಕೆಂದರೆ ದಕ್ಷಿಣಾಯನಕ್ಕಿಂತಲೂ ಉತ್ತರಾಯಣವು ಅತ್ಯಂತ ಪುಣ್ಯಪ್ರದಾಯಕವಾದದ್ದು.



ಉತ್ತರಾಯಣದಲ್ಲಿ ಪ್ರಾಣವನ್ನು ಬಿಟ್ಟವರು ಸದ್ಗತಿಯನ್ನು ಪಡೆಯುತ್ತಾರೆ. ಇಚ್ಛಾ ಮರಣಿಯಾದ ಭೀಷ್ಮನು ಉತ್ತರಾಯಣವು ಬರುವವರೆಗೂ ಶರಶಯ್ಯೆಯಲ್ಲಿ ಮಲಗಿದ್ದ ಎನ್ನುವ ವಿಷಯವು ಎಲ್ಲರಿಗೂ ತಿಳಿದಿರುವುದೇ ಆಗಿದೆ.

### ಉತ್ತರಾಯಣದ ಕೆಲವು ವಿಶೇಷಗಳು

ಮಕರಸಂಕ್ರಾಂತಿಯಿಂದ ಉತ್ತರಾಯಣವು ಪ್ರಾರಂಭ ವಾಗುತ್ತದೆ. ಅಂದರೆ ಸೂರ್ಯನು ಪೂರ್ವದಲ್ಲಿ ಉದಯಿಸಿ ಪಶ್ಚಿಮದಲ್ಲಿ ಅಸ್ತಮಿಸುವ ಸಂಚಾರದಲ್ಲಿ ಉತ್ತರ ದಿಕ್ಕಿಗೆ ವಾಲುತ್ತಾ ಹೋಗುತ್ತಾನೆ. ಇದರಂತೆಯೇ ಕರ್ಕಾಟಕ ಸಂಕ್ರಾಂತಿಯಿಂದ ಪ್ರಾರಂಭವಾಗುವ ದಕ್ಷಿಣಾಯನದಲ್ಲಿ ಸೂರ್ಯನ ಗತಿಯು ದಕ್ಷಿಣದ ಕಡೆಗೆ ಹೆಚ್ಚಾಗಿರುತ್ತದೆ. ಉತ್ತರಾಯಣವನ್ನು ಸಾಮ್ಯಾ ಯನವೆಂದೂ ದಕ್ಷಿಣಾಯನವನ್ನು ಯಾಮ್ಯಾಯನವೆಂದೂ ಜ್ಯೋತಿಷ ಶಾಸ್ತ್ರದಲ್ಲಿ ಹೇಳಲಾಗಿದೆ. ಉತ್ತರಾಯಣವು ದೇವತೆ ಗಳಿಗೆ ಪ್ರಿಯವಾದದ್ದು. ಆದ್ದರಿಂದ ಶುಭಕಾರ್ಯಗಳಿಗೆ ಉತ್ತ ರಾಯಣವು ಪ್ರಾಶಸ್ತ್ಯವಾದದ್ದು.

ಸಂಕ್ರಾಂತಿ ಪುಣ್ಯಕಾಲವನ್ನು ಲೆಕ್ಕ ಹಾಕುವುದು ಹೇಗೆ?

ಸಂಕ್ರಾಂತಿಯನ್ನು ಅತ್ಯಂತ ಪುಣ್ಯಕಾಲವಾಗಿ ಪರಿ ಗಣಿಸುತ್ತಾರೆ. ಈ ಪುಣ್ಯ ಕಾಲದಲ್ಲಿ ನದೀ ಸಂಗಮಗಳಲ್ಲಿ ಲಕ್ಷಕ್ಕೂ ಹೆಚ್ಚಿನ ಭಕ್ತರು ತ್ರಿವೇಣೀ ಸಂಗಮದಲ್ಲಿ ಸ್ನಾನವನ್ನು ಮಾಡುತ್ತಾರೆ. ಕಲ್ಕತ್ತದ ಬಳಿ ಇರುವ ಗಂಗಾ ಸಮುದ್ರ ಸಂಗಮ ದಲ್ಲಿ ಅಪಾರಸಂಖ್ಯೆಯ ಭಕ್ತರು ಪುಣ್ಯಸ್ನಾನವನ್ನು ಆಚರಿಸು ತ್ತಾರೆ. ಅಷ್ಟಲ್ಲದೆ ಹಲವು ಪುಣ್ಯಕ್ಷೇತ್ರಗಳಲ್ಲಿ ಜಾತ್ರೆಯನ್ನು ಆಚರಿ ಸುತ್ತಾರೆ. ಹೀಗಿರುವಾಗ ಸಂಕ್ರಾಂತಿಯ ಪುಣ್ಯ ಕಾಲವು ಎಷ್ಟು ಗಂಟೆಗಳ ಕಾಲ ಇರುತ್ತದೆ. ಯಾವಾಗ ಪ್ರಾರಂಭವಾಗಿ ಯಾವಾಗ ಮುಗಿಯುತ್ತದೆ ಎಂದು ತಿಳಿದುಕೊಳ್ಳುವ ಅವಶ್ಯಕತೆಯಿದೆ. ಸೂರ್ಯನು ರಾಶಿಯನ್ನು ಪ್ರವೇಶಿಸುವುದಕ್ಕಿಂತಲೂ ಮುಂಚೆ ಹದಿನಾರು ನಾಡಿಗಳ ಕಾಲವನ್ನು ಹಾಗೂ ಪ್ರವೇಶದ ನಂತರದ

ಹದಿನಾರು ನಾಡಿಗಳ ಕಾಲವನ್ನು ಪರ್ವಕಾಲವೆಂದು ಕರೆಯುತ್ತಾರೆ.ಆದರೆ ಅರ್ಧ ರಾತ್ರಿಗಿಂತಲೂ ಮುಂಚಿತವಾಗಿ ಸಂಕ್ರಾಂತಿಯು ಏರ್ಪಟ್ಟರೆ ಹಿಂದಿನ ದಿನದ ಮಧ್ಯಾಹ್ನದ ನಂತರದಿಂದ ಹದಿನಾರು ನಾಡಿಗಳಷ್ಟು ಕಾಲ ಪುಣ್ಯ ಕಾಲವೆನಿಸುತ್ತದೆ.ಅರ್ಧರಾತ್ರಿಯ ನಂತರ ಸಂಕ್ರಾಂತಿಯು ಏರ್ಪಟ್ಟರೆ ನಂತರ ದಿವಸದ ಪೂರ್ವಾರ್ಧವನ್ನು ಅಂದರೆ ಮಧ್ಯಾಹ್ನದ ಒಳಗಿನ ಕಾಲವನ್ನು ಪುಣ್ಯಕಾಲವೆಂದು ಪರಿಗಣಿಸುತ್ತಾರೆ.

**ವಿವಿದೆಡೆಗಳಲ್ಲಿ ಸಂಕ್ರಾಂತಿಯ ಆಚರಣೆ**

ಸಂಕ್ರಾಂತಿಯು ಸುಗ್ಗಿಯ ಹಬ್ಬವಾಗಿ ಭಾರತದ ಎಲ್ಲ ಕಡೆಗಳಲ್ಲಿ ಆಚರಿಸುವ ಪದ್ಧತಿ ಇದೆ. ರೈತರು ಹೊಲಗಳಿಂದ ತಮ್ಮ ದವಸಧಾನ್ಯಗಳನ್ನು ಮನೆಗೆ ಸೇರಿಸಿದ ನಂತರ ಸಂತೋಷದಿಂದ ಈ ಹಬ್ಬವನ್ನು ಆಚರಿಸುತ್ತಾರೆ. ವ್ಯವಸಾಯದಲ್ಲಿ ಸಹಕರಿಸಿದ ಎತ್ತು ಮೊದಲಾದವುಗಳನ್ನು ಅಲಂಕರಿಸಿ ಪೂಜಿಸುತ್ತಾರೆ. ಹಲವೆಡೆಗಳಲ್ಲಿ ಸಂಕ್ರಾಂತಿಯ ದಿನದಂದು ಪವಿತ್ರವಾಗಿದ್ದು ಗತಿಸಿದ ತಮ್ಮ ಹಿರಿಯರಿಗೆ ವಸ್ತ್ರಾದಿಗಳನ್ನು ಸಮರ್ಪಿಸಿ ಮರುದಿನ ಬಗೆಬಗೆಯ ತಿಂಡಿ ತಿನಿಸುಗಳಿಂದ ಹಬ್ಬವನ್ನು ಆಚರಿಸುತ್ತಾರೆ. ಮಧ್ಯಾಹ್ನದ ನಂತರ ಹಲವು ಸ್ಪರ್ಧೆಗಳನ್ನು ಏರ್ಪಡಿಸುವ ಪದ್ಧತಿಯೂ ಜಾರಿಯಲ್ಲಿದೆ.

ಸಂಕ್ರಾಂತಿಯ ಸಂದರ್ಭದಲ್ಲಿ ನಡೆಸುವ ರಂಗವಲ್ಲಿ ಸ್ಪರ್ಧೆಗಳು ಮಹಿಳೆಯರಲ್ಲಿ ವಿಶೇಷ ಉತ್ಸಾಹವನ್ನು ತುಂಬುತ್ತದೆ.ಯುವಕರಿಗಾಗಿ ಕಬಡ್ಡಿ ಸ್ಪರ್ಧೆಗಳನ್ನು ಆಯೋಜಿಸುತ್ತಾರೆ.ಸಂಕ್ರಾಂತಿಗೂ ಎಳ್ಳು ಬೆಲ್ಲಕ್ಕೂ ವಿಶೇಷವಾದ ನಂಟಿದೆ. ಕರ್ನಾಟಕ ಹಾಗೂ ಮಹಾರಾಷ್ಟ್ರಗಳಲ್ಲಿ ಮನೆ ಮನೆಗೂ ತೆರಳಿ ಎಳ್ಳು ಬೆಲ್ಲ ಸಕ್ಕರೆಯ ಅಚ್ಚು, ಕಬ್ಬುಗಳನ್ನು ಹಂಚುತ್ತಾರೆ. ಸಂಪ್ರದಾಯದ ಪ್ರಕಾರ ಸಂಕ್ರಾಂತಿಯ ದಿನದಂದು, ಎಳ್ಳೆಣ್ಣೆ ಅಥವಾ ಎಳ್ಳಿನ ಹಿಟ್ಟನ್ನು ಮೈಗೆ ಹಚ್ಚಿಕೊಂಡು ಸ್ನಾನವನ್ನು ಮಾಡಬೇಕು ಪ್ರಾಚೀನ ಗ್ರಂಥಗಳಲ್ಲಿ ಬರೆದಿವೆ. ಹೀಗೆ ಭಾರತೀಯರಲ್ಲಿ ಬೇರೂರಿರುವ ಸಂಕ್ರಾಂತಿಯ ಹಬ್ಬವನ್ನು ವಿದೇಶಗಳಲ್ಲಿರುವ ಭಾರತೀಯರೂ ಅತ್ಯಂತ ಉತ್ಸಾಹದಿಂದ ಆಚರಿಸುತ್ತಿರುವುದು ಸಂತೋಷದಾಯಕವಾದ ವಿಚಾರವಾಗಿದೆ.

ತಿರುಮಲ ತಿರುಪತಿ ದೇವಸ್ಥಾನಗಳು,
ತಿರುಪತಿ

# ಸಪ್ತಗಿರಿ

## ಚಂದಾದಾರರಿಗೆ ವಿಜ್ಞಪ್ತಿ

ಸಪ್ತಗಿರಿ ಮಾಸಪತ್ರಿಕೆ ಪಾಠಕರಿಗೆ ಪ್ರತಿ ತಿಂಗಳು ಸಕಾಲದಲ್ಲಿ ಸೇರಲು ಅನೇಕ ಕ್ರಮಗಳನ್ನು ಕೈಗೊಂಡಿದೆ. ಭಕ್ತರು ತಮ್ಮ ವಿಳಾಸದಲ್ಲಿ ಏನಾದರೂ ಬದಲಾವಣೆ ಇದ್ದಲ್ಲಿ ನಮಗೆ ತಿಳಿಸಬೇಕಾಗಿ ಕೋರಲಾಗಿದೆ. ಪಾಠಕರು ಈ ವಿಷಯವನ್ನು ಈ ಕೆಳಗೆ ತಿಳಿಸಿದಂತೆ ಪ್ರಧಾನ ಸಂಪಾದಕರ ಕಾರ್ಯಾಲಯಕ್ಕೆ ತಿಳಿಸಬೇಕಾಗಿ ವಿನಂತಿ.

1) "ಸಪ್ತಗಿರಿ" ಮಾಸಪತ್ರಿಕೆಗೆ ಸಂಬಂಧಿಸಿದ ಸಲಹೆ/ಸೂಚನೆ/ದೂರುಗಳನ್ನು sapthagiri_helpdesk@tirumala.org ಮುಖಾಂತರ ತಿಳಿಯಪಡಿಸಿ.

2) ಸಪ್ತಗಿರಿ ಚಂದಾದಾರರ ವಿಳಾಸದಲ್ಲಿ ಬದಲಾವಣೆ ಇದ್ದಲ್ಲಿ 0877 - 2264543 ದೂರವಾಣಿ ಸಂಖ್ಯೆಗೆ ಕರೆ ಮಾಡಿ ತಮ್ಮ ಪೂರ್ತಿ ವಿಳಾಸವನ್ನು ಪಿನ್‌ಕೋಡ್, ಸೆಲ್ ನಂಬರ್ ಸಮೇತ ಕಾರ್ಯಾಲಯದ ಕೆಲಸದ ವೇಳೆಯಲ್ಲಿ (ಬೆ.10.30 ರಿಂದ ಸಂಜೆ 5.00 ಗಂಟೆಯೊಳಗೆ) ತಿಳಿಸಬೇಕು.

3. ಕಾರ್ಯಾಲಯದ ದೂರವಾಣಿ ನಂಬರ್ ಮುಖಾಂತರವಾಗಲಿ, sapthagiri_helpdesk@tirumala.org ಮುಖಾಂತರ ತಿಳಿಯಪಡಿಸಿ.

4. ಆನ್‌ಲೈನ್ ಚಂದಾದಾರರು ತಮ್ಮ ಪೂರ್ತಿ ವಿಳಾಸವನ್ನು ಕ್ರಮಬದ್ಧೀಕರಿಸಲು ತಿ.ತಿ.ದೇ. ವೆಬ್‌ಸೈಟ್ ಮುಖಾಂತರ ಮತ್ತೊಮ್ಮೆ ತಿಳಿಸ ಬೇಕಾಗಿ ಕೋರಲಾಗಿದೆ.

-ಪ್ರಧಾನಸಂಪಾದಕರು

# ಶ್ರೀ ಆಂಡಾಳ್ ಮನೋರಥ ಶ್ರೀ ರಂಗನಾಥನ ಕಲ್ಯಾಣ ರಥ



- ಮೂಲ: ಶ್ರೀಮತಿ. ಎಂ. ಉತ್ತರಫಲ್ಗುಣಿ
- ಅನುವಾದ ಶ್ರೀಮತಿ. ಬಿ. ಪದ್ಮಜ

ವ್ರತವೆಂದರೆ ಪ್ರತಿಜ್ಞೆ, ದೀಕ್ಷೆ, ನಿಯಮ, ಅನುಷ್ಠಾನ, ನಿಷ್ಟೆ, ಪೂಜೆ, ಪಾರಾಯಣ, ಉಪವಾಸ ಮುಂತಾದ ಧಾರ್ಮಿಕ ಕಾರ್ಯಗಳೆಂದರ್ಥ. ಸಂಕಲ್ಪಪೂರ್ವಕವಾಗಿ ಮಾಡುವಂತಹಾ ಕೆಲಸ ವ್ರತ. ಶ್ರದ್ಧೆ, ಏಕಾಗ್ರತೆ ಹೊಂದಿರುವ ಪವಿತ್ರವಾದ ಮನಸ್ಸಿನೊಂದಿಗೆ ಸಂಕಲ್ಪ ಮಾಡಿದರೆ ಫಲಿಸದೇ ಇರುವ ಕಾರ್ಯ ಯಾವುದೂ ಇಲ್ಲ. ನಿಷ್ಠೆಯಿಂದ ಆಚರಿಸುವ ವಿಧಾನದ ಅನುಸಾರ ನಾವು ಬಯಸುವ ಫಲ ಪಡೆಯುತ್ತ ದೆಂದು ಹಿರಿಯರ ಮಾತು.

ಈ ಪದ್ಧತಿಯಲ್ಲೇ ಗೋದಾದೇವಿ ಧನುರ್ಮಾಸವೆಂಬ ವ್ರತವನ್ನು ಆಚರಿಸಿದಳು. ಆದೂ ನಿಸ್ವಾರ್ಥದಿಂದ, ಪರೋಪಕಾರಕ್ಕಾಗಿ ಹತ್ತಾರು ಜನರಿಗೆ ಒಳ್ಳೆಯದಾಗಲಿ ಎಂಬ ಉದ್ದೇಶದಿಂದ ಈ ವ್ರತವನ್ನು ಮಾಡಿದಳು. ಶ್ರೀಕೃಷ್ಣನನ್ನು ಒಲಿಸಿಕೊಳ್ಳುವುದಕ್ಕಾಗಿ ೩೦ ಹಾಡುಗಳನ್ನು ಹಾಡಿದಳು. ಇವೆಲ್ಲವೂ ದ್ರವಿಡ ಭಾಷೆಯಲ್ಲಿದೆ. ಅವುಗಳಿಗೆ 'ಪಾಶುರಗಳು' ಎಂದು ಹೆಸರು.

ಇವನ್ನೇ ತಿರುಪ್ಪಾವು, ಶ್ರೀವ್ರತ ಎಂದು ಕರೆಯುತ್ತಾರೆ. ಇದನ್ನು 'ತಿರುಪ್ಪಾವೈ' ಎಂಬ ಹೆಸರಿನಿಂದ ದಿವ್ಯಪ್ರಬಂಧವಾಗಿ ಪ್ರಸಿದ್ಧಿ ಪಡೆದಿದೆ.

### ಮಾರ್ಗಶಿರ ವ್ರತಕ್ಕೆ ಸಿದ್ಧರಾಗಿ ಬನ್ನಿ....!

ಮೊದಲನೆಯ ಪಾಶುರ ಕಾಲದ ಬಗೆಗೆ ವಿವರಿಸುತ್ತದೆ. ಮಾರ್ಗಶಿರಮಾಸ ಎಲ್ಲಾ ಮಾಸಗಳಿಗಿಂತಲೂ ಶ್ರೇಷ್ಠವಾದದು. ಹುಣ್ಣಿಮೆಯ ದಿನದಂದು ವ್ರತ ಮಾಡಬೇಕೆಂದು ಗೋದಾದೇವಿ ನಿರ್ಧರಿಸಿದಳು. "ಈ ದಿನದಿಂದ ನಾವೆಲ್ಲರೂ ಮಾರ್ಗಶಿರ ವ್ರತಮಾಡೋಣ. ಎಲ್ಲರೂ ನಸುಕಿನಲ್ಲೇ ಎದ್ದು ತಲೆಸ್ನಾನ ಮಾಡೋಣ. ನಾರಾಯಣನೇ ನಮ್ಮೆಲ್ಲರ ಕೋರಿಕೆಗಳನ್ನು ನೆರವೇರಿಸುತ್ತಾನಾದ್ದರಿಂದ ನಾವೆಲ್ಲರೂ ಈ ವ್ರತವನ್ನು ಆಚರಿಸಿ, ಪ್ರಜೆಗಳನ್ನು ಸಂತೋಷವಾಗಿಸೋಣ" ಎಂದು ವೃಂದಾವನದಲ್ಲಿನ ಗೋಪಿಕೆಯರನ್ನು ಕರೆದಳು.

### ವ್ರತನಿಯಮಗಳನ್ನು ಕೇಳಿ...!!!

ಎರಡನೆಯ ಪಾಶುರದಲ್ಲಿ ವ್ರತದಲ್ಲಿ ಪಾಲಿಸಬೇಕಾದ ನಿಯಮಗಳನ್ನು ಹೇಳುತ್ತದೆ. ಬೆಳಗಿನ ಜಾವ ಎದ್ದು ಸ್ನಾನ ಮಾಡುತ್ತೇವೆ. ಕಣ್ಣಿಗೆ ಕಾಡಿಗೆ ಹಚ್ಚುವುದಿಲ್ಲ. ತಲೆಯಲ್ಲಿ ಹೂವು ಮುಡಿಯುವುದಿಲ್ಲ. ಕ್ಷೀರಸಾಗರದಲ್ಲಿ ಶಯನಿಸಿರುವ ಆ ಭಗವಂತನ ಚರಣಗಳಿಗೆ ಮಂಗಳವನ್ನು ಹಾಡುತ್ತೇವೆ. ವ್ರತದ ಸಮಯದಲ್ಲಿ ಹಾಲು, ತುಪ್ಪದಂತಹ ಪದಾರ್ಥಗಳನ್ನು

ಸ್ವೀಕರಿಸುವುದಿಲ್ಲ.ಇತರರನ್ನು ನೋಯಿಸುವಂತೆ ಮಾತುಗಳನ್ನಾಗಲೀ, ಅಸತ್ಯವನ್ನಾಗಲೀ ಆಡುವುದಿಲ್ಲ. ಅತಿಥಿಗಳನ್ನು ದಾನಗಳಿಂದ ಸತ್ಕರಿಸುತ್ತೇವೆ.ಈ ವ್ರತನಿಯಮಗಳನ್ನು ನೀವೂ ಪಾಲಿಸಿ, ಆಚರಿಸಿ ಬನ್ನಿ.

**ವಾಮನನ ದಿವ್ಯಗಾನ ಮಾಡಿರಿ...!!!**

ಮೂರನೆಯ ಪಾಶುರದಲ್ಲಿ ವ್ರತಾಚರಣೆಯಿಂದ ಒದಗುವ ಫಲವನ್ನು ತಿಳಿಸುತ್ತದೆ. ಮೂರುಲೋಕಗಳನ್ನು ತನ್ನ ಪಾದಗಳಿಂದ ಅಳೆದ ಪುಟ್ಟವಟುವಿನ ರೂಪದಲ್ಲಿ ಬಂದ ವಾಮನನ ದಿವ್ಯ ನಾಮವನ್ನು ಹಾಡೋಣ. ಆ ರೀತಿ ಮಾಡಿದರೆ ದೇಶದಲ್ಲಿನ ಜನರಿಗೆ ಈತಿ ಬಾಧೆಗಳಿಲ್ಲದೇ ಸುಖದಿಂದರುತ್ತಾರೆ.ಯಾವಾಗಲೂ ಪ್ರಪಂಚವೆಲ್ಲಾ ಶಾಶ್ವತ ಸಂಪತ್ತಿನಿಂದ ಕೂಡಿರುತ್ತದೆ.

**ಮಳೆಯನ್ನು ಸುರಿಸು ಓ ಪರ್ಜನ್ಯ ದೇವಾ!......**

ಓ ಪರ್ಜನ್ಯನನ್ನು ಪ್ರಾರ್ಥಿಸುವ ವಿಧಾನವನ್ನು ತಿಳಿಸುತ್ತದೆ.ಸರ್ವಜಗತ್ಕಾರಣೀಭೂತನಾದ ಶ್ರೀಮನ್ನಾರಾಯಣನ ಬಲಗೈ ಹಸ್ತದಲ್ಲಿರುವ ಚಕ್ರದಂತೆ ಪ್ರಕಾಶಿಸು. ವಾಮ ಹಸ್ತದಲ್ಲಿರುವ ಶಂಖದಂತೆ ನಾದ ಮಾಡು, ಶಾರ್ಙ್ಗವೆಂಬ ಧನಸ್ಸಿನಿಂದ ಹೊರಬಂದ ಬಾಣಗಳ ಸುರಿಮಳೆಯೇ ಎನ್ನುವಂತೆ ಪ್ರಪಂಚವೆಲ್ಲಾ ಸುಖಿಸುವಂತೆ ನಾವೂ ಸಂತೋಷವಾಗಿ ಮಾರ್ಗಶಿರ ಸ್ನಾನ ಮಾಡುವಂತೆ ಮಳೆ ಸುರಿಸು.

**ಮನೋವಾಕ್ಸಿದ್ಧಿಗಾಗಿ ಪ್ರಾರ್ಥನೆ ಮಾಡೋಣ ಬನ್ನಿ..!!**

ಐದನೆಯ ಪಾಶುರದಲ್ಲಿ ಗೋಪಿಕೆಯರು ಸರ್ವದಾ ಭಗವಂತನ ಸೇವಾಭಾಗ್ಯವನ್ನು, ಭಗವಂತನ ಸಾನ್ನಿಧ್ಯವನ್ನು ಬಯಸುವುದನ್ನು ತಿಳಿಸುತ್ತದೆ. ಕೃಷ್ಣನ ಬಳಿಗೆ ನಾವೆಲ್ಲರೂ ಶುದ್ಧರಾಗಿ ಪವಿತ್ರರಾಗಿ ಹೋಗೋಣ.ಆತನನ್ನು ವಿವಿಧ ಹೂ





ಗಳಿಂದ ಪೂಜಿಸೋಣ, ನಮಸ್ಕರಿಸೋಣ. ಶ್ಲೋಕಗಳಿಂದ ಕೀರ್ತಿಸೋಣ,ಮನಸಾರೆ ಧ್ಯಾನಿಸೋಣ.ಹಾಗೆ ಮಾಡಿದರೆ ನಾವು ಈ ಹಿಂದೆ ಮಾಡಿದ ಪಾಪಕರ್ಮಗಳೂ ಮುಂದೆ ಮಾಡಲಿರುವ ಪಾಪಗಳೂ ಬೆಂಕಿಯಲ್ಲಿ ಬಿದ್ದ ಹತ್ತಿಯಂತೆ ಉರಿದು ಬೂದಿಯಾಗುತ್ತದೆ.

**ಹರಿಹರಿಗಾನದಿಂದ ಎದ್ದೇಳು...!!!**

ಆರನೆಯ ಪಾಶುರದಲ್ಲಿ ಬೆಳಗ್ಗೆಯೇ ನಿದ್ದೆಯಿಂದೆದ್ದು ಸ್ನಾನಕ್ಕೆ ಹೋಗಬೇಕೆಂಬ ವಿಷಯವನ್ನು ಮರೆತು ಗಾಢ ನಿದ್ರೆಯಲ್ಲಿರುವ ಗೋಪಿಕೆಯನ್ನು ಎಬ್ಬಿಸುವ ಇತರ ಗೋಪಿಕೆಯರ ಸ್ಥಿತಿಯನ್ನು ತಿಳಿಸುತ್ತದೆ. ಪಕ್ಷಿಗಳೆಲ್ಲಾ ಬೆಳಗಿನ ಝಾವ ಎದ್ದು ತಮ್ಮ ಆಹಾರಕ್ಕಾಗಿ ಕಲರವ ಮಾಡುತ್ತಾ ಹಾರಾಡುತ್ತಿವೆ. ಶ್ರೀ ಮಹಾವಿಷ್ಣುವಿನ ಆಲಯದಿಂದ ದೇವರ ಸೇವೆಗೆ ಸಮಯವಾಯ್ತೆಂದು ಬನ್ನಿ ಎಂದು ಕರೆಯುತ್ತಿರುವಂತೆ ಬಿಳಿಯ ಶಂಖನಾದದ ಧ್ವನಿ ಕೇಳಿಸುತ್ತಿದೆ. ಯೋಗನಿದ್ರೆಯಲ್ಲಿರುವ ಸರ್ವೇಶ್ವರನನ್ನು ಮುನಿಗಳು, ತಾಪಸಿಗಳು, ಯೋಗಿಗಳು 'ಹರಿ ಹರಿ.' ಎಂದು ಎಬ್ಬಿಸುತ್ತಿದ್ದಾರಲ್ಲಾ! ಆ ಧ್ವನಿಯೇ ನಮ್ಮನ್ನು ಎಚ್ಚರಗೊಳಿಸುತ್ತಿದೆ. ನೀನೂ ಆ ಧ್ವನಿಯನ್ನು ಕೇಳಿ ನಿದ್ದೆಯಿಂದ ಎದ್ದು ಬಾ!

**ಗೋಪಿಕೆಯರ ಬಳೆಗಳ ಸದ್ದು ಕೇಳು...!!!**

ಏಳನೆಯ ಪಾಶುರದಲ್ಲಿ ಇನ್ನೊಬ್ಬ ಗೋಪಿಕೆಯನ್ನು ಎಬ್ಬಿಸುತ್ತಾ ಶ್ರವಣ ಭಕ್ತಿಯ ಬಗೆಗೆ ತಿಳಿಸುತ್ತಾಳೆ.ಗೋಪಿಕೆಯರು ಕಡಗೋಲಿನಿಂದ ಮೊಸರು ಕಡೆಯುವಾಗ ಅವರ ಕೈಗಳ ಬಳೆಗಳ ಗಲಗಲ, ಕರ್ಣಾಭರಣಗಳ ಶಬ್ದವಿಜೃಂಭಿಸಿ ಆಕಾಶವನ್ನು ಸಮೀಪಿಸುತ್ತಿರುವ ಶಬ್ದ ನಿನಗೆ ಕೇಳಿಸುತ್ತಿಲ್ಲವೇ? ಓ ಗೋಪಿಕಾನಾಯಕರೇ ನಮ್ಮ ಪ್ರಭು ಕೃಷ್ಣನನ್ನೇ ತಾನೇ ಕೀರ್ತಿಸುತ್ತಿದ್ದೇವೆ.ನೀನು ಮೊದಲು ಬಾಗಿಲು ತೆಗೆ ತಾಯಿ..

**ಗೋದಾದೇವಿ ಧನುರ್ಮಾಸವೆಂಬ ವ್ರತವನ್ನು ಆಚರಿಸಿದಳು. ಆದೂ ನಿಸ್ವಾರ್ಥದಿಂದ, ಪರೋಪಕಾರಕ್ಕಾಗಿ ಹತ್ತಾರು ಜನರಿಗೆ ಒಳ್ಳೆಯದಾಗಲಿ ಎಂಬ ಉದ್ದೇಶದಿಂದ ಈ ವ್ರತವನ್ನು ಮಾಡಿದಳು.**

### ಅಯ್ಯೋ ...! ನೀವೇ ಬಂದಿರೆ...!!

ಎಂಟನೆಯ ಪಾಶುರ ಮನನವೆಂಬ ಭಕ್ತಿ ಸಾಧನೆಯ ಬಗೆಗೆ ಹೇಳುತ್ತಿದೆ. ಪೂರ್ವದಿಕ್ಕು ಬೆಳಗುತ್ತಿದೆ. ಮಕ್ಕಳೆಲ್ಲರೂ ವ್ರತ ನಡೆಯುವ ಸ್ಥಳಕ್ಕೆ ಹೊರಡುತ್ತಿದ್ದಾರೆ. ಅವರನ್ನೂ ತಾವೇ ತಡೆದು ಬಿಟ್ಟೆವು.ಎಲ್ಲರೂ ನಿನ್ನ ಮನೆಯ ಬಾಗಿಲ ಮುಂದೆ ನಿಂತಿದ್ದೇವೆ.

ಓ ಸತೀ! ಕೃಷ್ಣನ ಗುಣಗಳನ್ನು ಹಾಡೋಣ. ವ್ರತವನ್ನು ಆಚರಿಸೋಣ ಅಸಾಧ್ಯವಾದ ವರವನ್ನು ಕೇಳೋಣ. ದೇವತೆಗಳಿಗೇ ಆದಿದೇವನಾದವನ ಸೇವೆ ಮಾಡೋಣ. ಆಗ ಕೃಷ್ಣನೇ ನಮ್ಮನ್ನು ನೋಡಿ," ಅಯ್ಯೋ! ನೀವೇ ಬಂದಿರೇ? ಎನ್ನುತ್ತಾ ನಮ್ಮ ಒಳ್ಳೆಯದು ಕೆಟ್ಟದನ್ನು ತುಲನೆ ಮಾಡಿ ನಮ್ಮನ್ನು ಹರಸುತ್ತಾನಲ್ಲವೇ!

### ಅಯ್ಯೋ ಮಾಧವಾ! ನೀ ವಾದರೂ ಅವಳನ್ನು ನಿದ್ದೆಯಿಂದ ಎಬ್ಬಿಸಯ್ಯಾ!

ಒಂಭತ್ತನೆಯ ಪಾಶುರದಲ್ಲಿ ಧ್ಯಾನದಲ್ಲಿರುವ ಗೋಪಿಕೆಯನ್ನು ಎಚ್ಚರಗೊಳಿಸುವ ವಿಧಾನವನ್ನು ತಿಳಿಸಲಾಗಿದೆ.ನವವಿಧವಾದ ಮಣಿಗಳಿಂದ ನಿರ್ಮಿಸಿದ ಒಂದು ಮಹಲಿನಲ್ಲಿ ನಿದ್ರಿಸುತ್ತಿರುವ ಗೋಪಿಕೆಯನ್ನು, ಓ ಅತ್ತೆಯ ಮಗಳೇ! ಮಕವಾಟದ ಬಾಗಿಲು ತೆಗಿ! ನೀನಾದ್ರೂ ಆಕೆಯನ್ನು ಎಬ್ಬಿಸು. ಯಾರಾದರೂ ಅವಳು ಗಾಢ ನಿದ್ರೆಗೆ ಜಾರುವಂತೆ ಮಂತ್ರಿಸಿದ್ದೀರೇ? ಅಯ್ಯೋ ಮಾಧವಾ! ನೀವಾದರೂ ಅವಳನ್ನು ನಿದ್ದೆಯಿಂದ ಎಬ್ಬಿಸಯ್ಯಾ!

### ಗೋಪಿಕೆಯರಿಗೆ ಶಿರೋಭೂಷಣದಂತಹಳು..!!!

ಹತ್ತನೆಯ ಪಾಶುರದಲ್ಲಿ ಶ್ರೀ ಕೃಷ್ಣ ಭವನದ ಪಕ್ಕದಲ್ಲೇ ಇರುವ ಭವನದಲ್ಲಿ ನಿದ್ರಿಸುತ್ತಿರುವ ಗೋಪಿಕೆಯನ್ನು ತಮ್ಮೊಂದಿಗೇ ಕರೆದುಕೊಂಡು ಹೋಗಬೇಕೆಂದು ಅರ್ತಿಯಿಂದ ಆತುರದಿಂದ ಎಬ್ಬಿಸುವ ಬಗೆಗೆ ಹೇಳಿದ್ದಾಳೆ. ನಾವು ಬರುವ ಮೊದಲೇ ವ್ರತ ಮಾಡಿದೆಯಾ ತಾಯಿ! ನಾರಾಯಣನು ನಮ್ಮಂತಹವರು ಮಂಗಳ ಹಾಡಿದರೂ ಪುರುಷಾರ್ಥವನ್ನು ನೀಡುವ ಪುಣ್ಯಮೂರ್ತಿಯಲ್ಲವೇ! ಕುಂಭಕರ್ಣನು ತನ್ನ ಆಸ್ತಿಯಾದ ಗಾಢ ನಿದ್ರೆಯನ್ನು ನಿನಗೆ ಕೊಟ್ಟನೇ! ಇಷ್ಟೊಂದು ನಿದ್ದೆಯ ಮತ್ತು ನಿದ್ದೆಯಿಂದೆದ್ದು ಬಾಗಿಲು ತೆಗಿ...

### ಉತ್ತಮವಂಶ ಚರಿತ್ರೆಯುಳ್ಳವಳು..

ಹನ್ನೊಂದನೆಯ ಪಾಶುರದಲ್ಲಿ ಕರ್ಮಜ್ಞಾನ, ಸ್ವಧರ್ಮ ಪಾಲನೆ ಹೊಂದಿರುವ ಉತ್ತಮ ವಂಶದಲ್ಲಿ ಹುಟ್ಟಿ ರುವ ಗೋಪಿಕೆಯ ಬಗೆಗೆ ತಿಳಿಸಿದ್ದಾಳೆ.ಗೋಪಾಲ ವಂಶದಲ್ಲಿ ಚಿಗುರಿದ ಓ ಬಂಗಾರದ ಕುಸುಮವೇ! ಎದ್ದು ಬಾರಮ್ಮಾ! ಬಂಧು ಬಾಂಧವರು, ಸಖಿಯರು ಎಲ್ಲರೂ ನಿನ್ನ ಮನೆಯ ಮುಂದೆ ಬಂದಿದ್ದಾರೆ.ಎಲ್ಲರೂ ಶ್ರೀಕೃಷ್ಣನನ್ನು ಧ್ಯಾನಿಸುತ್ತಿದ್ದಾರೆ. ಆದರೂ ನೀನು ಮೌನದಿಂದಿರುವ! ಓ ಸಂಪನ್ನಳೇ... ನಿನ್ನ ನಿದ್ದೆಗೆ ಅರ್ಥವನ್ನು ಹೇಳುತಾಯಿ..!

### ಐಶ್ವರ್ಯವಂತನ ತಂಗಿಯೇ..

ಹನ್ನೆರಡನೆಯ ಪಾಶುರದಲ್ಲಿ ಐಶ್ವರ್ಯವಂತನಾದ ಒಬ್ಬ ಗೋಪಾಲಕನ ತಂಗಿಯನ್ನು ನಿದ್ದೆಯಿಂದೆಬ್ಬಿಸುವುದನ್ನು ತಿಳಿಸುತ್ತಾಳೆ.ಹಾಲಿನಿಂದ ಮನೆಯೆಲ್ಲಾ ತುಂಬಿ ತುಳುಕುವ ಐಶ್ವರ್ಯವಂತನ ತಂಗಿಯೇ! ನಮ್ಮ ತಲೆಯ ಮೇಲೆ ಮಂಜು ಬೀಳುತ್ತಿದೆ. ಆದರೂ ನಿನ್ನ ಮನೆಯ ಮುಂದೆ ನಿಂತಿದ್ದೇವೆ. ನಿಮ್ಮ ಮನೆಯ ಮೇಲ್ಛಾವಣಿಯ ಕಂಬಿಯನ್ನು ಹಿಡಿದು ನಿಂತಿದ್ದೇವೆ. ಶ್ರೀರಾಮನ ಹಾಡನ್ನು ಹಾಡುತ್ತಿದ್ದೇವೆ. ಅದನ್ನು ಕೇಳಿಯಾದರೂ ಎದ್ದೇಳ ಬಾರದೇ!! ಇನ್ನೂ ಆ ಗಾಢ ನಿದ್ದೆಯೇನು ತಾಯೀ?

### ಈ ದಿನ ಸುದಿನ...!!!

ಹದಿಮೂರನೆಯ ಪಾಶುರದಲ್ಲಿ ಶ್ರೀಕೃಷ್ಣನೇ ತನ್ನತ್ತ ಬರುತ್ತಾನೆಂದು ಭಾವಿಸುವ ಗೋಪಿಕೆಯ ಬಗೆಗೆ ಹೇಳುತ್ತಾಳೆ. ದುಷ್ಟನಾದ ರಾವಣನನ್ನು ಕೊಂದದ್ದು ಶ್ರೀರಾಮನೇ ತಾನೇ? ಆ ರಾಮನನ್ನೇ ಕೀರ್ತಿಸುತ್ತಾ ಅವನ ವೀರ ಚರಿತೆಯನ್ನು ಹಾಡುತ್ತಾ ನಮ್ಮ ಜೊತೆಯವರೆಲ್ಲಾ ವ್ರತ ನಡೆಯುವ ಸ್ಥಳವನ್ನು ಸೇರಿದರು. ಓ ಸುಕುಮಾರಿ! ಇಂದು ಬಹಳ ಒಳ್ಳೆಯ ದಿನ ನೀನು ಕಪಟವನ್ನು ಬಿಟ್ಟು ನಮ್ಮೊಂದಿಗೆ ಆನಂದದಿಂದ ಸಮಯವನ್ನು ಕಳೆ..

### ಮಾತು ಕೊಟ್ಟಿದ್ದೆ ಮರೆತೆಯಾ?

ಹದಿನಾಲ್ಕನೆಯ ಪಾಶುರದಲ್ಲಿ ಅರ್ಥಗರ್ಭಿತವಾದ ಸಂಭೋದನೆಯೊಂದಿಗೆ ಗೋಪಿಕೆಯನ್ನು ಕರೆಯುವ

> ಗೋಪಿಕೆಯರು ಮಂಗಳವನ್ನು ಹಾಡಿ "ಪರ" ಎಂಬ ವಾದ್ಯವನ್ನು ಪ್ರಜೆಗಳಿಗಾಗಿ, ಭಗವಂತನ ದಾಸ್ಯವನ್ನು ತಮಗಾಗಿ ಹೊಂದಿದರು.ಆ ವಿಧಿವಿಧಾನಗಳನ್ನೆಲ್ಲಾ ಲೋಕಾಭರಣವಾದ ಶ್ರೀವಿಲ್ಲೀಪುತ್ತೂರಿನಲ್ಲಿ ಜನ್ಮಿಸಿ, ಗೋದಾ ದೇವಿ ದ್ರಾವಿಡ ಭಾಷೆಯಲ್ಲಿ ಮುವತ್ತು ಪಾಶುರಗಳನ್ನು ಮಾಲಿಕೆಯನ್ನಾಗಿ ಮಾಡಿದಳು.

ವಿಧಾನವನ್ನು ತಿಳಿಸುತ್ತಾಳೆ. ಓ ಪರಿಪೂರ್ಣರೇ! ಸನ್ಯಾಸಿಗಳು ದೇವಾಲಯದಲ್ಲಿ ಆರಾಧನೆ ಮಾಡಲು ಹೋಗುತ್ತಿದ್ದಾರೆ. ಎದ್ದೇಳು. ಮೊದಲು ನೀನು ಎದ್ದು ನಮ್ಮನ್ನು ಎಬ್ಬಿಸುತ್ತೇನೆಂದು ಮಾತು ಕೊಟ್ಟಿದ್ದೆ! ಮರೆತೆಯಾ? ಈ ವಾಚಾಳಿ...! ಏಳು! ಪುಂಡರೀಕಾಕ್ಷನ ಮಹಿಮೆಯನ್ನು ಕೀರ್ತಿಸೋಣ!

**ಗೋಪಿಕೆಯರ ಹಾಸ್ಯ ಸಂಭಾಷಣೆಯಿಂದ...!!!**

ಹದಿನೈದನೆಯ ಪಾಶುರದಲ್ಲಿ ಮನೆಯ ಒಳಗಿರುವ ಗೋಪಿಕೆಗೂ,ಮನೆಯ ಹೊರಗಿರುವ ಗೋಪಿಕೆಯರಿಗೆ ನಡೆದ ಸಂಭಾಷಣೆಯನ್ನು ತಿಳಿಸುತ್ತದೆ. ಎಳೆಯ ಗಿಣಿಯ ಕಂಠ ಮಾಧುರ್ಯವನ್ನು ಹೊಂದಿರುವವಳೇ! ಇನ್ನೂ ನಿದ್ದೆ ಮಾಡುತ್ತಿದ್ದೀಯಾ? ಏನೀ ವೈಪರೀತ್ಯ? ಪೂರ್ಣರಾದ ಗೋಪಿಕೆಯರೆ ಇದೋ ಬರುತ್ತಿದ್ದೇನೆ. ನನ್ನ ಮನಸ್ಸಿಗೆ ಚುಚ್ಚು ವಂತೆ ಕಠಿಣವಾಗಿ ಕೂಗಬೇಡಿ! ನೀನು ತುಂಬಾ ಮಾತಿನ ಮಲ್ಲಿ! ನೀವೇ ಜಾಣೆಯರು, ಆದರೂ ಪರವಾಗಿಲ್ಲ. ನೀವು ಹೇಳುವಂತೆ ನಾನೇ ಕಠಿಣಾತ್ಮಳು. ಆ ವಿಷಯ ಈಗೇಕೆ? ಅದು ಸರಿ ಬಿಡು! ನಮ್ಮ ಗೋಪಿಕೆಯರೆಲ್ಲಾ ಬಂದರೇ? ಆ! ಎಲ್ಲರೂ ಬಂದರು. ನೀನು ಮಾತ್ರಾ ಮಲಗಿದ್ದೀ! ಬೇಗ ಎದ್ದೇಳು. ಶ್ರೀ ಕೃಷ್ಣನನ್ನು ಕೀರ್ತಿಸೋಣ ಬಾ!

**ಸ್ವಾಮಿಯು ನಮಗೆ ಮಾತು ಕೊಟ್ಟಿದ್ದನಲ್ಲಾ!!**

ಹದಿನಾರನೆಯ ಪಾಶುರದಲ್ಲಿ ಗೋಪಿಕೆಯರು ಅಂತಃಕರಣ ಶುದ್ಧಿಯಿಂದ ಸಂಕಲ್ಪ ಸಿದ್ಧಿ ಮಾಡಿಕೊಂಡು ದೈವಯೋಗದಲ್ಲಿನ ಶಾಸ್ತ್ರ ಪದ್ಧತಿಯಿಂದ ನಡೆದುಕೊಳ್ಳುವ ವಿಧಾನ ಹೇಳುತ್ತದೆ. ನಂದಗೋಪನ ಭುವನ ಪಾಲಾಕಾ! ನಮ್ಮನ್ನು ಒಳಗೆ ಬರಲು ಬಿಟ್ಟು. ದ್ವಾರಪಾಲಕಾ, ಮಣಿಮಯ ವಾಗಿ, ಸುಂದರವಾಗಿರುವ ಬಾಗಿಲು ತೆಗಿ.ಗೊಲ್ಲವಂಶದಲ್ಲಿನ ಚಿಕ್ಕ ಮಕ್ಕಳಾದ ನಮಗೆ ಶ್ರೀಕೃಷ್ಣ ಪರಮಾತ್ಮ ಒಂದು ವಾದ್ಯವನ್ನು ಕೊಡುತ್ತೇನೆಂದು ನಿನ್ನೆಯೇ ನಮಗೆ ಮಾತು ಕೊಟ್ಟಿದ್ದನಲ್ಲಾ? ನಾವು ಪರಿಶುದ್ಧ ಒಳ್ಳೆಯಹಾಡಿನಿಂದ ಶ್ರೀಕೃಷ್ಣನನ್ನು ಎಬ್ಬಿಸೋಣವೆಂದು ಬಂದೆವು. ಸ್ವಾಮಿ ಮೊದಲೇ ನೀವು ಬೇಡವೆನ್ನಬೇಡಿ. ನೀನೇ ಸ್ವತಹ ಬಾಗಿಲು ತೆರೆದು ನಮ್ಮನ್ನು ಒಳಗೆ ಬರಲು ಬಿಡಿ.

**ನಮ್ಮನ್ನು ಪಾಲಿಸುವವನೇ.. ನೀವೆಲ್ಲಾ ಎಚ್ಚರಗೊಳ್ಳಿ...!!!**

ಹದಿನೇಳನೆಯ ಪಾಶುರದಲ್ಲಿ ನಮನದ ಗುಣಗಳನ್ನು ಔದಾರ್ಯವನ್ನು ಹೊಗಳುತ್ತಾ, ನಂದನ ಕುಟುಂಬವನ್ನು ಎಬ್ಬಿ ಸುವ ಬಗೆಗೆ ಹೇಳುತ್ತದೆ. ವಸ್ತ್ರ ಬೇಕೆಂದವರಿಗೆ ವಸ್ತ್ರಗಳು, ಕುಡಿಯಲು ನೀರು ಬೇಕೆಂದವರಿಗೆ ನೀರು, ಅನ್ನ ಬೇಕೆಂದ ವರಿಗೆ ಅನ್ನ ಮೊದಲಾದವನ್ನು ಫಲಾಪೇಕ್ಷೆಯಿಲ್ಲದೆ ದಾನ ಮಾಡುವ ನಮದಗೋಪಾ! ನಮ್ಮ ಸ್ವಾಮಿ! ಎದ್ದೇಳು ! ಮಂಗಳ ದೀಪದಂತಹಾ ನಮ್ಮ ಸ್ವಾಮಿ ಯಶೋದೆ! ಎದ್ದೇಳಮ್ಮಾ!

ತ್ರಿವಿಕ್ರಮ! ನಿದ್ದೆಯಿಂದೇಳೂ! ಬಲರಾಮ, ನೀನೂ ನಿನ್ನ ತಮ್ಮ ಇಬ್ಬರೂ ನಿದ್ದೆಯಿಂದೇಳಿ!

ಹದಿನೆಂಟನೆಯ ಪಾಶುರದಲ್ಲಿ ಅಮ್ಮನವರಾದ ನೀಳಾ ದೇವಿಗೆ ಸುಪ್ರಭಾತ ಹೇಳುವುದನ್ನು ತಿಳಿಸುತ್ತದೆ.ನಂದ ಗೋಪನ ಸೊಸೆಯೇ!ಓ ನೀಳಾದೇವಿ!ಬೆಳಗಾಯಿತು ನೋಡಮ್ಮಾ! ಸುಂದರವಾದ ನಿನ್ನ ಕೈಗಳಲ್ಲಿನ ಕಂಕಣಗಳು ಘಲ್ಲುಘಲ್ಲೆಂದು ಧ್ವನಿ ಮಾಡುವಂತೆ ಬಾಗಿಲು ತೆಗೆಯಮ್ಮಾ...!!!

**ನಿನಗಿದು ಸರಿಯೇ ತಾಯೀ....!!!!**

ಹತ್ತೊಂಭತ್ತನೆಯ ಪಾಶುರದಲ್ಲಿ ಕರುಣೆ ತೋರುವ ತಂದೆ ತಾಯಿಗಳನ್ನು ಪ್ರಾರ್ಥಿಸುವ ವಿಧಾನವನ್ನು ತಿಳಿಸುತ್ತದೆ. ನೀಳಾದೇವಿಯ ಸಮಕ್ಷಮದಲ್ಲಿ ಶ್ರೀಕೃಷ್ಣನಿದ್ದಾನೆ. ಆ ಸ್ವಾಮಿ ಯನ್ನು ನೋಡಿ ಗೋಪಿಕೆಯರು ಓ ಶ್ರೀಕೃಷ್ಣಾ! ಬಾಯ್ತೆರೆದು ಮಾತನಾಡು! ಓ ನೀಳಾದೇವಿ! ನೀನು ನಿನ್ನ ಗಂಡನನ್ನು ಎಷ್ಟು ಹೊತ್ತಾದರೂ ಏಳಲು ಬಿಡೋಲ್ಲ. ಅಷ್ಟೊ ವಿರಹವನ್ನು ತಡೆ ಯದೇ ಇರುವುದು ನಿನ್ನ ರೂಪಕ್ಕೆ, ಸ್ವಾಭಾವಕ್ಕೆ ಸರಿ ಹೋಗೋಲ್ಲ ತಾಯೀ!

**ಶ್ರೀ ಕೃಷ್ಣನೊಂದಿಗೆ ಸ್ನಾನ ಮಾಡಲು ಬಿಡಮ್ಮಾ...!!!!**

ಇಪ್ಪತ್ತನೆಯ ಪಾಶುರದಲ್ಲಿ ಗೋಪಿಕೆಯರು, ಶ್ರೀಕೃಷ್ಣ ನನ್ನು ನೀಳಾದೇವಿಯನ್ನು ನಿದ್ದೆಯಿಂದೆಬ್ಬಿಸುವ ವಿಧಾನವನ್ನು ಹೇಳುತ್ತಿದೆ.ಓ ಬಲಶಾಲಿ!ಏಳೂ...ಓ ನೀಳಾದೇವಿ...! ಏಳಮ್ಮಾ!ಒಂದು ಬೀಸಣಿಗೆ,ಮುಖ ನೋಡಿಕೊಳ್ಳಲು ಕನ್ನಡಿ

ನಮಗೆ ಕೊಟ್ಟು ಶ್ರೀಕೃಷ್ಣನೊಂದಿಗೆ ಸ್ನಾನ ಮಾಡುವಂತೆ ಮಾಡು ತಾಯಿ...!!

ಇಪ್ಪತ್ತೊಂದನೆಯ ಪಾಶುರದಲ್ಲಿ ಭಗವಂತ ಪ್ರಸನ್ನ ವಾಗುವಂತೆ ಸೇವಿಸುವ ವಿಧಾನವನ್ನು ಹೇಳುತ್ತಿದೆ. ನಂದ ಗೋಪನ ಕುಮಾರನೇ! ಎಚ್ಚರಗೊಳ್ಳು! ಜ್ಯೋತಿಸ್ವರೂಪ ನಿದ್ದೆಯಿಂದೇಳು! ಶತ್ರುಗಳೆಲ್ಲಾ ನಿನ್ನ ಪರಾಕ್ರಮಕ್ಕೆ ಸೋತು, ನಿನ್ನ ಮನೆಯ ಬಾಗಿಲಲ್ಲಿ ನಿನ್ನ ದಾಸರಾಗಿ,ನಿನ್ನ ಪಾದಾರ ವಿಂದಗಳನ್ನು ಆಶ್ರಯಿಸಿದ್ದಾರೆ.ಹಾಗೇ ನಾವೂ ನಿನ್ನನ್ನು ಬಿಟ್ಟಿರ ಲಾರೆವು ನಿನ್ನ ಪಾದಗಳನ್ನೇ ಸುತ್ತಿ ಮಂಗಳಾಶಾಸನ ಮಾಡಬೇಕೆಂದು ಬಂದಿದ್ದೇವೆ. ಸ್ವಾಮಿ!!

## ನಿನ್ನ ಕಣ್ಣುಗಳಿಂದ ಕಟಾಕ್ಷ ವೀಕ್ಷಣೆ ಮಾಡು ತಂದೆ...!!!

ಇಪ್ಪತ್ತೆರಡನೆಯ ಪಾಶುರದಲ್ಲಿ ಮನಸಾ,ವಾಚಾ, ಎಲ್ಲವೂ ನೀನೇ ಎಂದು ಪ್ರಾರ್ಥಿಸುವ ವಿಧಾನವನ್ನು ತಿಳಿಸು ತ್ತದೆ.ಭೂಮಂಡಲವನ್ನೆಲ್ಲಾ ಆಳಿದ ರಾಜರೆಲ್ಲರೂ ತಮ ಗಿಂತಲೂ ಹೆಚ್ಚಿನವರು ಯಾರೂ ಇಲ್ಲವೆಂಬ ಅಹಂಕಾರ ವನ್ನು ಬಿಟ್ಟು ತಮ್ಮನ್ನು ಜಯಿಸಿದ ಸಾರ್ವಭೌಮನಾದ ನಿನ್ನಡಿಗಳಿಗೆ ಶರಣಾಗಿದ್ದಾರೆ. ಆ ರೀತಿ ನಾವೂ ನಿನ್ನ ಪಾದಗಳನ್ನು ನಂಬಿ ಬಂದಿದ್ದೇವೆ.ನಮ್ಮನ್ನು ರಕ್ಷಿಸು ನಿನ್ನ ದೃಷ್ಟಿ ನಮ್ಮ ಮೇಲೆ ಬಿದ್ದರೆ ನಮ್ಮ ದುಃಖಗಳು, ಕರ್ಮಗಳೆಲ್ಲಾ ತೊಲಗುವುದಲ್ಲವೇ ಸ್ವಾಮಿ!

## ಎದ್ದೇಳು ಶೃಂಗಾರರಾಯ...!!!

ಇಪ್ಪತ್ತಮೂರನೆಯ ಪಾಶುರದಲ್ಲಿ ಶ್ರೀಕೃಷ್ಣನನ್ನು ಎಬ್ಬಿ ಸುತ್ತಾ ತಮ್ಮ ಕೋರಿಕೆಗಳನ್ನು ಪರಿಶೀಲಿಸಬೇಕೆಂದು ಬೇಡಿಕೊಳ್ಳುವ ವಿಧಾನವನ್ನು ಹೇಳುತ್ತದೆ.ಸಿಂಹದಂತೆ ಘರ್ಜಿ ಸುತ್ತಾ ನೀನೂ ನಿನ್ನ ಭವನದಿಂದ ಎದ್ದು ಬಾ! ಅಂದವಾದ ಲೋಕೋತ್ತರವಾದ ಸಿಂಹಾಸನದ ಮೇಲೆ ಕುಳಿತು ನಮ್ಮ ಅರಿಕೆಯನ್ನು ಆಲಿಸು ಸ್ವಾಮಿ...!!!

## ನಿನ್ನ ದಿವ್ಯಚರಣ ಕಮಲಗಳಿಗೆ ಶ್ರೀ ಮಂಗಳ...!!!

ಇಪ್ಪತ್ತನಾಲ್ಕನೆಯ ಪಾಶುರದಲ್ಲಿ ದೇವದೇವನ ಚರಣಾ ರವಿಂದಗಳಿಗೆ ಮನಸಾರೆ ಮಂಗಳವನ್ನು ಹಾಡುವ ವಿಧವನ್ನು ತಿಳಿಸುತ್ತದೆ.ಮುಲ್ಲೋಕಗಳನ್ನೂ ಅಳೆದ ನಿನ್ನ ದಿವ್ಯ ಪಾದಾರ ವಿಂದಗಳಿಗೆ ಜಯ ಮಂಗಳ. ವತ್ಸಾಸುರನನ್ನು ಒದೆದ ನಿನ್ನ ದಿವ್ಯ ಪಾದಗಳಿಗೆ ನಿತ್ಯ ಮಂಗಳ. ಗೋಪಾಲ ಕರಿಗೆ, ಗೋವು ಗಳಿಗೆ, ರಕ್ಷಣೆಯಾಗಿ ಗೋವರ್ಧನ ಪರ್ವತವನ್ನೇ ಛತ್ರಿಯಂತೆ ಹಿಡಿದ ನಿನ್ನ ವಾತ್ಸಲ್ಯಕ್ಕೆ ಜಯ ಜಯ ಮಂಗಳ. ಶತ್ರುಗಳನ್ನು ಸಂಹರಿಸಿ ವಿಜಯವನ್ನು ತಂದಿಟ್ಟ ನಿನ್ನ ವೇಲಾಯುಧಕ್ಕೆ ಮಂಗಳ. ಹೀಗೆ ಕೀರ್ತಿಸಿ, ಭೇರಿ ವಾದ್ಯ ಎಂಬ ವ್ರತ ಸಾಧನ ವನ್ನು ಪಡೆಯಬೇಕೆಂದು ಬಂದವ ರನ್ನು ಅನುಗ್ರಹಿಸು ತಂದೆ!!–

## ಯಶೋದೆಯ ಮುದ್ದಿನ ಕಂದನಿವನು..!!!

ಇಪ್ಪತ್ತೈದನೆಯ ಪಾಶುರದಲ್ಲಿ ಶ್ರೀ ಕೃಷ್ಣನ ಜನ್ಮ ವೃತ್ತಾಂತದ ಬಗೆಗೆ ಹೇಳುತ್ತದೆ.ದೇವಕಿಯ ಕಂದನೇ! ಯಶೋದೆಯ ಪುತ್ರನೇ! ನಿನ್ನನ್ನು ಕೊಲ್ಲಬೇಕೆಂದು ಕಂಸ ನನ್ನೇ ಕೊಂದವನೇ ನಿನ್ನನ್ನೇ ಪ್ರಾರ್ಥಿಸಿ ನಿನ್ನ ಪಾದಗಳನ್ನು ಆಶ್ರಯಿಸಿದ್ದೇವೆ ನಾವು ಬಯಸಿದ್ದನ್ನು ನೀಡು. ಆದರಿಂದ ನಿನ್ನ ಐಶ್ವರ್ಯವನ್ನು, ನಿನ್ನ ವೀರಚರಿತೆಯನ್ನು ಕೀರ್ತಿಸುತ್ತಾ ಸಂತೋಷದಿಂದಿರುತ್ತೇವೆ ತಂದೆ!!!

## ಆಲದೆಲೆಯ ಮೇಲೆ ಮಲಗಿದವನೇ.....!!! ?

ಇಪ್ಪತ್ತಾರನೆಯ ಪಾಶುರದಲ್ಲಿ ವ್ರತಕ್ಕೆ ಬೇಕಾದ ಬಾಹ್ಯ ಪರಿಕರಗಳನ್ನು ಆಂತರಂಗಿಕ ಭಗವತ್ ಪ್ರೇಮವನ್ನು ಅನು ಭವಿಸಬೇಕೆಂಬ ಆಸೆಯಿಂದ, ತಮಗೆ ಬೇಕಾಗಿರುವುದನ್ನೆಲ್ಲಾ ಗೋಪಿಕೆಯರು ಬಯಸುವ ವಿಧಾನವನ್ನು ತಿಳಿಸುತ್ತದೆ. ನಾವು ಮಾರ್ಗಶಿರ ಮಾಸದ ಸ್ನಾನವನ್ನು ಮಾಡಬಯಸಿ ಅದಕ್ಕೆ ಬೇಕಾಗಿರುವ ಪರಿಕರಗಳನ್ನು ಕೇಳಲು ಬಂದೆವು. ಹಾಲಿನಂತೆ ಬೆಳ್ಳಗಿರುವ ನಿನ್ನ ಕೈಯಲ್ಲಿರುವ ಪಾಂಚಜನ್ಯದಂತಹಾ ಶಂಖ ಬೇಕು, ವಿಶಾಲವಾದ ದೊಡ್ಡ ದಾದ "ಪರ" ಎಂಬ ವಾದ್ಯ ಬೇಕು. ಮಂಗಳಗೀತೆಯನ್ನು ಹಾಡುವ ಭಾಗವತ್ತೋತ್ತಮರು ಬೇಕು, ಮಂಗಳ ದೀಪ, ಧ್ವಜ, ಚಾಂದಿನಿಯೂ ಬೇಕು.



ನಮ್ಮ ಮೇಲೆ ದಯೆ ತೋರಿ ಮೇಲಿನ ಪರಿಕರಂ'ಗಳನ್ನೆಲ್ಲಾ ಪ್ರಸಾ ದಿಸು ಕೃಷ್ಣಾ!

**ನಮ್ಮ ಪುಟ್ಟ ಪುಟ್ಟ ಕೋರಿಕೆಗಳನ್ನು ಕೇಳು ಕೃಷ್ಣಾ...!!!**

ಇಪ್ಪತ್ತೇಳನೆಯ ಪಾಶುರದಲ್ಲಿ ಗೋಪಿಕೆ ಯರು ಕೇಳಿದ ಸತ್ಕಾರಗಳ ಬಗೆಗೆ ಹೇಳುತ್ತದೆ. ಗೋವಿಂದಾ! ನಿನ್ನನ್ನು ಕೀರ್ತಿಸಿ ವ್ರತಸಾಧನವಾದ "ಪರ" ಎಂಬ ವಾದ್ಯವನ್ನು ಪಡೆದರೆ ಜನರೆಲ್ಲಾ ಹೊಗಳುವಂತೆ ಘನವಾದ ಸನ್ಮಾನಗಳಿರುತ್ತವೆ. ಅವೇನೆಂದರೆ ಕೈಗಳಿಗೆ ಬಳೆಗಳು, ಬಾಹುಗಳಿಗೆ ದಂಡ ಖಡ್ಗಗಳು,ಕಿವಿಗಳಿಗೆ ಓಲೆಗಳು, ಕರ್ಣ ಪುಷ್ಪಗಳು, ಕಾಲ್ಗೆಜ್ಜೆಗಳು, ಬಾಹುಗಳಿಗೆ ದಂಡ ಖಡ್ಗಗಳು, ಮೊದಲಾದ ಅನೇಕ ಆಭರಣಗಳನ್ನು ನಾವು ಧರಿಸಬಹುದು.ಒಳ್ಳೆಯ ರೇಷ್ಮೆ ಸೀರೆಗಳನ್ನು ಉಡಬೇಕು. ನಂತರ, ಹಾಲು, ಅನ್ನ ತುಪ್ಪ ಬೆರೆಸಿ ಪಾಯಸ ಮಾಡಿ, ನಿನ್ನೊಂದಿಗೆ ಕುಳಿತು ಸ್ವೀಕರಿಸ ಬೇಕು ಕೃಷ್ಣಾ..!!

**ನಾವು ಅಜ್ಞಾನಿ ಗೊಲ್ಲರಯ್ಯಾ...!!**

ಇಪ್ಪತ್ತೆಂಟನೆಯ ಪಾಶುರದಲ್ಲಿ ಗೋಪಿಕೆಯರು ತಮ್ಮನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿಸುವ ವಿಧಾನವನ್ನು ತಿಳಿಸುತ್ತದೆ.ನಾವು ಅಜ್ಞಾನಿಗಳು ಗೊಲ್ಲರ ಕುಲದಲ್ಲಿ ಜನಿಸಿದ್ದೇವೆ.ಈ ಕುಲದಲ್ಲಿ ಹುಟ್ಟಿದ ನಾವು ನಿನ್ನನ್ನು ಪಡೆಯುವಂತಹಾ ಪುಣ್ಯ ಮಾಡಿದ್ದೇವೆ.ಸ್ವಾಮಿ!ಗೋವಿಂದಾ! ನಿನ್ನೊಂದಿಗೆ ನಮಗಿರುವ ಸಂಬಂಧವನ್ನು ಕಳೆದುಕೊಳ್ಳಲಾರೆವು. ಪ್ರೇಮದಿಂದ ನಿನ್ನನ್ನು ಪುಟ್ಟ ಹೆಸರಿನಿಂದ ಕರೆಯುತ್ತೇವೆ.ನೀನು ಅದಕ್ಕೆ ಕೋಪಿಸಿಕೊಳ್ಳಬೇಡ.ನಮ್ಮ ಕೋರಿಕೆಗಳನ್ನು ತೀರಿಸಿ ನಮ್ಮನ್ನು ಅನುಗ್ರಹಿಸು ತಂದೆ....!!!!

**ಏಳೇಳು ಜನ್ಮಗಳೂ ನಿನ್ನ ದಾಸರಯ್ಯಾ...!!!**

ಇಪ್ಪತ್ತೊಂಭತ್ತನೆಯ ಪಾಶುರದಲ್ಲಿ ಗೋಪಿಕೆಯರು ಪೂಜೆಯ ಅರ್ಥವನ್ನು ಗುರುತಿಸಬೇಕೆಂದು ಶ್ರೀ ಕೃಷ್ಣನಲ್ಲಿ ಮೊರೆಯಿಡುವ ವಿಧಾನವನ್ನು ತಿಳಿಸಿದ್ದಾರೆ. ಬೆಳಗಿನ ಝಾವವೇ ನೀನಿರುವೆಡೆ ಬಂದು, ನಿನ್ನನ್ನು ಸೇವಿಸಿ,ಮಂಗಳ ಹಾಡುವುದರ ಪ್ರಯೋಜನವೇನೆಂದು ಕೇಳು.ನಾಳೆ ನಿನ್ನಿಂದ ಒಂದು "ಪರ" ವಾದ್ಯವನ್ನು ಮಾತ್ರಾ ತೆಗೆದುಕೊಳ್ಳಬೇಕೆಂದು ಬಂದವರಲ್ಲ.ಎಂದೆಂದಿಗೂ ಏಳೇಳು ಜನ್ಮಗಳಿಗೂ ನಿನ್ನೊಂದಿಗೆ ಬಿಡಿಸಲಾರದ ಬಂಧದೊಂದಿಗೆ ಇದ್ದು, ನಿನಗೆ ಸೇವೆ ಮಾಡುವವರಾಗಿರಬೇಕು ನಮಗೆ ಬೇರಾವ ಆಸೆಯೂ ಬರದಂತೆ ನೋಡಿಕೋ ಸ್ವಾಮೀ!



**ಶ್ರೀವಿಲ್ಲಿಪುತ್ತೂರು ಮಾಲಿಕೆಯ ಗಾನವೇ... ಈ ತಿರುಪ್ಪಾವು...!!!**

ಮೂವತ್ತನೆಯ ಪಾಶುರದಲ್ಲಿ ಇಷ್ಟೂ ಪಾಶುರಗಳನ್ನು ಶ್ರದ್ಧೆ ಯಿಂದ ಓದಿದವರಿಗೆ ಗೋದಾದೇವಿಗೆ ಲಭಿಸಿದ ಫಲವೇ ಲಭಿಸುತ್ತದೆಂದು ಹೇಳುತ್ತಾರೆ. ಗೋಪಿಕೆಯರು ಮಂಗಳವನ್ನು ಹಾಡಿ "ಪರ" ಎಂಬ ವಾದ್ಯವನ್ನು ಪ್ರಜೆಗಳಿಗಾಗಿ, ಭಗವಂತನ ದಾಸ್ಯವನ್ನು ತಮಗಾಗಿ ಹೊಂದಿದರು.ಆ ವಿಧಿವಿಧಾನಗಳನ್ನೆಲ್ಲಾ ಲೋಕಾಭರಣವಾದ ಶ್ರೀವಿಲ್ಲೀಪುತ್ತೂರಿನಲ್ಲಿ ಜನ್ಮಿಸಿ, ಗೋದಾದೇವಿ ದ್ರಾವಿಡ ಭಾಷೆಯಲ್ಲಿ ಮುವತ್ತು ಪಾಶುರಗಳನ್ನು ಮಾಲಿಕೆಯನ್ನಾಗಿ ಮಾಡಿದಳು.ಆ ಪಾಶುರಗಳನ್ನು ಕ್ರಮ ತಪ್ಪದೇ ಓದಿದವರು.ಅಂದು ಗೋಪಿಕೆಯರು ಶ್ರೀಕೃಷ್ಣನಿಂದ ಪಡೆದ ಫಲವನ್ನು,ಗೋದಾದೇವಿಯ ವ್ರತವನ್ನಾಚರಿಸಿ ಪಡೆದ ಫಲವನ್ನು ಪಡೆಯುತ್ತಾರೆ.

ಆಕೆ ಪೇರಿಸಿದ ವಾಙ್ಮಾಲೆಯನ್ನು ಕವಿತಾಕುಸುಮಗಳನ್ನು ನಾವು ಅರ್ಥಮಾಡಿಕೊಂಡು ಕಂಠದಲ್ಲಿ ಧರಿಸಿದರೆ ಮೋಕ್ಷಾರ್ಹರಾಗಿ ಭಗವಂತ ಪಾದಾರವಿಂದಗಳನ್ನು ತಲುಪುವುದರಲ್ಲಿ ಸಂದೇಹವೇ ಇಲ್ಲ.



ನಮ್ಮ ದೇವಾಲಯ

# ಕೀಲಪಟ್ಲ ದೇವಾಲಯ

- ಮೂಲ. ಐ. ಎಲ್.ಎನ್. ಚಂದ್ರಶೇಖರ್

- ಅನುವಾದ ಶ್ರೀಮತಿ. ಎಸ್. ಸುರೇಖ

ತಿರುಮಲೆಯಲ್ಲಿ ಪ್ರಸಿದ್ಧಿ ಹೊಂದಿದ ಶ್ರೀ ವೆಂಕಟೇಶ್ವರ ಸ್ವಾಮಿಯವರಿಗೆ ಸಂಬಂಧಿಸಿದ ಕೆಲವು ಕ್ಷೇತ್ರಗಳಿವೆ. ಅವುಗಳಲ್ಲಿ 'ಕೀಲಪಟ್ಲ' ಒಂದು. ಈ ಕ್ಷೇತ್ರದಲ್ಲಿ ಶ್ರೀ ವೆಂಕಟೇಶ್ವರ ಸ್ವಾಮಿಯೂ 'ಶ್ರೀಕೋನೇಟಿರಾಯ ಸ್ವಾಮಿ'ಎಂಬ ಹೆಸರಿನಿಂದ ಪ್ರಸಿದ್ಧಿಯಾಗಿ ಪೂಜೆಯನ್ನು ಪಡೆಯುತ್ತಿದ್ದಾನೆ.

ಕೀಲಪಟ್ಲ ಶ್ರೀ ಕೋನೇಟಿರಾಯ ಸ್ವಾಮಿಯನ್ನು ಭೃಗುಮಹರ್ಷಿ ಪ್ರತಿಷ್ಠಿಸಿದರು ಎಂದು ಸ್ಥಲಪುರಾಣವು ತಿಳಿಸುತ್ತದೆ. ಶ್ರೀ ಮಹಾವಿಷ್ಣುವನ್ನು ಕಾಲಿನಲ್ಲಿ ಒದ್ದೆದ ಕಾರಣ ಬಂದ ಪಾಪವನ್ನು ಹೋಗಲಾಡಿಸುವುದಕ್ಕಾಗಿ ಸೂಚಿಸಿದ ಮಹಾಋಷಿಗಳನ್ನು ಕೋರಿದನು. ಕೌಂಡಿನ್ಯ ಮಹರ್ಷಿಯ ಸಲಹೆ ಮೇರೆಗೆ ಭೃಗುವು ಏಳು ಪ್ರಾಂತ್ಯದಲ್ಲಿ ಶ್ರೀ ವೇಂಕಟೇಶ್ವರ ಸ್ವಾಮಿಯನ್ನು ಪ್ರತಿಷ್ಠಾಪಿಸಿದನು ಎಂದು ಪುರಾಣವು ತಿಳಿಸುತ್ತದೆ. ಅದರಲ್ಲಿ 'ಕೀಲಪಟ್ಲ' ಒಂದು.ಆದರೆ ಭೃಗುವು ಪ್ರತಿಷ್ಠಾಪಿಸಿದ ದೇವರು ಸಾಮಾನ್ಯರಿಗೆ ಕಾಣಿಸದೆ ತಪಸ್ಸನ್ನಾಚರಿಸುವವರಿಗೆ ಮಾತ್ರ ದರ್ಶನವನ್ನು ಕೊಡುತ್ತಿದ್ದನು.

ವಿವಾಹ ನಂತರ ಶ್ರೀನಿವಾಸಮಂಗಾಪುರಂ ಸುತ್ತ ಮುತ್ತದ ಪ್ರಾಂತ್ಯದಲ್ಲಿ ಪದ್ಮಾವತೀ ಶ್ರೀನಿವಾಸರು ವಿಹರಿಸುತ್ತಾ ಸುತ್ತ ಮುತ್ತದ ಪ್ರಾಂತ್ಯದಲ್ಲಿ ಪರ್ಯಾಟನೆ ಮಾಡಿದರು.ಅವುಗಳಲ್ಲಿ ಒಂದಾದ 'ಕೀಲಪಟ್ಲ' ಪ್ರಾಂತ್ಯಕ್ಕೆ ಸೇರಿ ಸ್ವಲ್ಪ ಕಾಲವನ್ನು ಕಳೆದರು. ಈ ವಿಷಯವನ್ನು ತಿಳಿದ ಮಹರ್ಷಿಯರು ಅಲ್ಲಿ ಸೇರಿ ಪೂಜೆಯನ್ನು ಮಾಡಿ ಇಲ್ಲಿಯೇ ನೆಲಸಬೇಕಾಗಿ ಕೋರಿದರು.ಅವರ ಕೋರಿಕೆಯನ್ನು ಮನ್ನಿಸಿ ಸ್ವಾಮಿ ತನ್ನ ಅಂಶವು ಸಮೀಪದಲ್ಲಿನ ಪುಷ್ಕರಣಿಯಲ್ಲಿದೆ, ತೆಗೆದು ಪ್ರತಿಸ್ಥಾಪಿಸಿ ಪೂಜಿಸಬೇಕೆಂದು ಸೂಚಿಸಿದರು.ಮಹರ್ಷಿಯರು ಪುಷ್ಕರಣಿಯಲ್ಲಿರುವ ಸ್ವಾಮಿಯ ಮೂರ್ತಿಯನ್ನು ತೆಗೆದು ಪ್ರತಿಷ್ಠಾಪಿಸಿದರು. ಪುಷ್ಕರಿಣಿಯಲ್ಲಿ ದೊರೆತ ಕಾರಣ ಸ್ವಾಮಿಯನ್ನು ಶ್ರೀ ಕೋನೇಟಿರಾಯಸ್ವಾಮಿ ಎಂಬ ಹೆಸರು ಬಂತು.

ಈ ಆಲಯವನ್ನು ಕ್ರಿ.ಶ. 9,10 ಶತಮಾನದಲ್ಲಿ ಪಲ್ಲವರು ನಿರ್ಮಿಸಿದರು. ನಂತರ ವಿಜಯನಗರ ಚಕ್ರವರ್ತಿಗಳು ಈ ಆಲಯಾಭಿವೃದ್ಧಿಗೆ ಕೃಷಿ ಮಾಡಿದರು. ಸ್ವಲ್ಪ ಕಾಲ ಪುಂಗನೂರು ಸಂಸ್ಥಾನಾಧೀಶನ ಸ್ವಾಧೀನದಲ್ಲಿತ್ತು. 2012 ರಲ್ಲಿ ಈ ಆಲಯವು ತಿರುಮಲೆ ತಿರುಪತಿ ದೇವಸ್ಥಾನದ ಅಧೀನಕ್ಕೆ ಬಂದಿತು. ಅಂದಿನಿಂದ ಈ ಆಲಯವನ್ನು ಸರ್ವಾಂಗಸುಂದರವಾಗಿ ಏರ್ಪಡಿಸಿದರು. ಪದಕವಿತಾಪಿತಾಮಹಾನು ತಾಳ್ಳಪಾಕ ಅನ್ನಮಾಚಾರ್ಯರವರು ಕೂಡಾ ಈ ಕ್ಷೇತ್ರವನ್ನು ದರ್ಶಿಸಿದರು.

ಕೀಲಪಟ್ಲ ಕ್ಷೇತ್ರದಲ್ಲಿ ಶ್ರೀ ಕೋನೇಟಿರಾಯ ಸ್ವಾಮಿಯವರ ಆಲಯ ವಿಶಾಲಪ್ರಾಂಗಣದಲ್ಲಿ ಕಣ್ಣಿಗೆ ಅಹ್ಲಾದಕರವಾಗಿ ದರ್ಶನವನ್ನು ನೀಡುತ್ತದೆ. ಆಲಯದ ಪ್ರವೇಶದ್ವಾರದ ಮೇಲೆ ರಾಜಗೋಪುರದ ದರ್ಶನ ಸಿಗುತ್ತದೆ.ಈ ಗೋಪುರ ಐದು ಅಂತಸ್ತಿನೊಂದಿಗೆ ಏಳು ಕಲಶಗಳನ್ನು ಹೊಂದಿದೆ. ಈ







ದ್ವಾರದ ಮುಖಾಂತರ ಆಲಯದ ಒಳಗೆ ಪ್ರವೇಶಿಸಿದರೆ ಎದುರುಗಡೆ ಬಲಿಪೀಠ,ಧ್ವಜಸ್ತಂಭ,ಗರುಡಾಳ್ವಾರು ಮಂಟಪ ದರ್ಶನವನ್ನು ನೀಡುತ್ತದೆ.ಮುಖಮಂಟಪದಿಂದ ಅಂತರಾಲಯಕ್ಕೆ ಪ್ರವೇಶಿಸಿ ದ್ವಾರದ ಎರಡು ಕಡೆಯೂ ಜಯವಿಜಯರು ದರ್ಶನ ನೀಡುತ್ತಾರೆ. ಪ್ರಧಾನ ಗರ್ಭಾಲಯದಲ್ಲಿ ಶ್ರೀ ಕೋನೇಟಿರಾಯಸ್ವಾಮಿ ರೂಪ ರೇಖಾ ವಿಲಸಾದೊಂದಿಗೆ ತಿರುಮಲೆ ಶ್ರೀ ವೆಂಕಟೇಶ್ವರಸ್ವಾಮಿಯ ತರಹ (ಹೋಲಿಕೆಯಿಂದ ಕೂಡಿದ) ದರ್ಶನವನ್ನು ನೀಡುತ್ತಾರೆ. ಸ್ವಾಮಿಯವರ ಗರ್ಭಲಾಯದ ಬಲದ ಕಡೆ ಇರುವ ಪ್ರತ್ಯೇಕ ಆಲಯದಲ್ಲಿ ಸ್ವಾಮಿಯವರ ದೇವೇರಿ ಶ್ರೀ ಲಕ್ಷ್ಮೀದೇವಿ ಚತುರ್ಭುಜಾಗಳಿಂದ ಎರಡು ಕೈಗಳಲ್ಲಿ ಕಮಲಗಳನ್ನು ಮತ್ತೇ ಎರಡು ಕೈಗಳಲ್ಲಿ ಅಭಯ, ವರದ ಮುದ್ರೆಗಳನ್ನು ಧರಿಸಿ ದರ್ಶನವನ್ನು ಕೊಡುತ್ತಾರೆ. ಇನ್ನು ಆಲಯ ಪ್ರಾಂಗಣದಲ್ಲಿ ಶ್ರೀ ಆಂಜನೇಯಸ್ವಾಮಿ, ಶ್ರೀವರಾಹಾಸ್ವಾಮಿ, ಶ್ರೀದೇವಿ ಭೂದೇವಿ ಸಮೇತ ಚೆನ್ನಕೇಶವಸ್ವಾಮಿ,ಆಳ್ವಾರ್‌ರನ್ನು ದರ್ಶಿಸಬಹುದು. ಆಲಯ ಪ್ರಾಂಗಣದಲ್ಲಿ ಈಶಾನ್ಯದಲ್ಲಿ ಪುಷ್ಕರಣಿ ಇದೆ. ಪ್ರಧಾನ ಆಲಯದ ಒಳಗಡೆ ಆಲಯ ಪ್ರಾಂಗಣದಲ್ಲಿ ಕಾಳೀಯ ಮರ್ದನ, ಆಂಜನೇಯನನ್ನು ಅಲೀಂಗನ ಮಾಡಿ ಶ್ರೀರಾಮನಂತಹ ವಿಗ್ರಹ ಭಕ್ತರಿಗೆ ನಯನಾನಂದವಾಗಿ ತೋರುತ್ತದೆ.

ಮುಂಚಿತವಾಗಿ ಶೀ ಕೋನೇಟಿರಾಯನ ದರ್ಶನದ ನಂತರ ತಿರುಮಲೆಗೆ ಹೋಗಬೇಕೆಂದು ಸ್ಥಾನಿಕರ ವಿಶ್ವಾಸ.ಆದ್ದರಿಂದ ಸ್ಥಾನಿಕರು ಮುಂಚಿತವಾಗಿ ಈ ಸ್ವಾಮಿಯನ್ನು ದರ್ಶಿಸಿ ಅನಂತರ ತಿರುಮಲೆಗೆ ಬರುತ್ತಾ ಇರುತ್ತಾರೆ.

ಕೀಲಪಟ್ಲ, ಶ್ರೀ ಕೋನೇಟಿರಾಯಸ್ವಾಮಿಯವರಿಗೆ ಪ್ರತಿ ವರ್ಷ ವೈಶಾಖಮಾಸದಲ್ಲಿ ಶುಕ್ಲಪಕ್ಷ ಅಷ್ಟಮಿಯಿಂದ ಒಂಭತ್ತು ದಿನಗಳವರೆಗೆ ಬ್ರಹ್ಮೋತ್ಸವಗಳು ಅಂಗರಂಗ ವೈಭವದಿಂದ ನಡೆಯುತ್ತದೆ.

ಆಂಧ್ರಪ್ರದೇಶ, ಚಿತ್ತೂರು ಜಿಲ್ಲೆಯಲ್ಲಿನ ಗಂಗವರಂ ಮಂಡಲದಲ್ಲಿ ಪಲಮನೇರು ಪಟ್ಟಣಕ್ಕೆ ಸುಮಾರು ಏಳು ಕಿ.ಮೀ.ದೂರದಲ್ಲಿದೆ. ಪಲಮನೇರುನಿಂದ ಬಸ್ಸು, ಆಟೋ, ಸೌಕರ್ಯಗಳಿವೆ. ಪಲಮನೇರಿಗೆ ಸೇರಿದರೆ ಕೀಲಪಟ್ಲ ದೇವಸ್ಥಾನಕ್ಕೆ ಹೋಗಲು ಬಲು ಸುಲಭ.




ಪ್ರಪಂಚದೆಲ್ಲೆಡೆ ಹರಡಿರುವ ತಿರುಪತಿಯ ತಿಮ್ಮಪ್ಪನ ಭಕ್ತರಿಗೆ ಇನ್ನಷ್ಟು ಅನುಕೂಲತೆಗಳನ್ನು ಒದಗಿಸಲು 'ಗೋವಿಂದ ತಿರುಮಲೆ ತಿರುಪತಿ ದೇವಸ್ಥಾನಮ್ಸ್' ಎನ್ನುವ ಯಾಪ್ ಅನ್ನು 29-03-2017 ರಂದು ಯುಗಾದಿಯ ಶುಭ ಸಂದರ್ಭದಲ್ಲಿ ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ ಪ್ರಾರಂಭಿಸಿದ್ದಾರೆ. ಟಿ.ಸಿ.ಎಸ್. ಸಹಕಾರದಿಂದ ತಯಾರಿಸಿರುವ ಈ ಮೊಬೈಲ್ ಯಾಪ್‌ನ ಮೂಲಕ ಭಕ್ತರು ವೇಗವಾಗಿ ಹಾಗೂ ಸುಲಭವಾಗಿ ಎಲ್ಲಿಯಾದರೂ ಇದನ್ನು ಉಪಯೋಗಿಸಿಕೊಳ್ಳಬಹುದಾಗಿದೆ. ಸದ್ಯಕ್ಕೆ ಈ - ಹುಂಡಿ, ಈ - ಡೊನೇಷನ್, ರೂ. 300/- ದರ್ಶನ ಟಿಕೆಟ್ ಬುಕಿಂಗ್ ನ ಅನುಕೂಲತೆಗಳಿವೆ. ಹಂತಹಂತವಾಗಿ ತಿ.ತಿ.ದೇ ಯು ಎಲ್ಲಾ ಸೇವಾವಕಾಶಗಳನ್ನೂ ಇದರಲ್ಲಿ ಅಳವಡಿಸಲಾಗುವುದು. ಗೂಗುಲ್, ಯಾಪಿಲ್, ಪ್ಲೇಸ್ಟೋರ್ ಹಾಗೂ ತಿ.ತಿ.ದೇ. ವೆಬ್‌ಸೈಟ್‌ನಿಂದ ಈ ಯಾಪನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ತಿ.ತಿ.ದೇ. ಯ ವೆಬ್‌ಸೈಟ್ ಅನ್ನು ಲಕ್ಷಗಟ್ಟಳೆ ಜನರು ಬಳಸುತ್ತಿದ್ದು ಇವರೆಲ್ಲರೂ ಈ ಯಾಪ್‌ಅನ್ನು ಸುಲಭವಾಗಿ ಬಳಸಿಕೊಳ್ಳಬಹುದಾಗಿದೆ.

# ಆರೋಗ್ಯದಲ್ಲಿ ನುಗ್ಗೇ ಕಾಯಿಯ ಮಹತ್ವ



- ಡಾ॥ ಸುಮಾ ಎಸ್. ಎಸ್. ಜೋಷಿ

ನುಗ್ಗೇಕಾಯಿಯ ಹೆಸರನ್ನು ಕೇಳಿದ ತಕ್ಷಣ, ನೆನಪಿಗೆ ಬರುವುದು ಉದ್ದನೆಯ ನುಗ್ಗೇಕಾಯಿ, ಮತ್ತು ಅಡುಗೆಯಲ್ಲಿ ಅದರ ಬಳಕೆ. ಇದನ್ನು ಸಾಮಾನ್ಯವಾಗಿ ಭಾರತದಾದ್ಯಂತ ಬೆಳೆಯಲಾಗುತ್ತದೆ. ಇದರ ಪ್ರತಿಯೊಂದು ಭಾಗವೂ ಪೋಷಕಾಂಶಕಗಳಿಂದ ಮತ್ತು ಔಷಧೀಯ ಗುಣಗಳಿಂದ ಕೂಡಿದೆ. ನುಗ್ಗೆಯ ಮರದ ಎಲೆಗಳು ಸಣ್ಣ ಪ್ರಮಾಣದಲ್ಲಿದ್ದು, ಬಿಳಿಬಣ್ಣದ ಹೂವುಗಳು ಆಗುತ್ತವೆ. ಬೀಜವು ಕಾಯಿಯಲ್ಲಿದ್ದು, ಈ ಕಾಯಿಯು ಉದ್ದ, ತ್ರಿಕೋಣಾಕಾರದಲ್ಲಿದ್ದು ಕೋಲನ್ನು ಹೋಲುತ್ತದೆ. ಆದ್ದರಿಂದ ಆಂಗ್ಲಭಾಷೆಯಲ್ಲಿ ಇದನ್ನು 'Drum-stick' ಎಂದು ಕರೆಯುತ್ತಾರೆ. ಹಿಂದೆ ಭಾಷೆಯಲ್ಲಿ ಇದನ್ನು 'ಸಹಜನ' ಅಥವಾ 'ಮುಂಗಾ' ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಇದರ ಎಲೆ, ಕಾಯಿ (ಬೀಜ) ಮತ್ತು ಹೂವುಗಳನ್ನು ಅಡುಗೆಗಾಗಿ ಉಪಯೋಗಿಸಲಾಗುತ್ತದೆ. ಇದರಲ್ಲಿ,

ಗಜ್ಜರಿಗಿಂತ 4 ಪಟ್ಟು ಹೆಚ್ಚು ವಿಟಮಿನ್ 'ಎ'
ಹಾಲಿಗಿಂತ 4 ಪಟ್ಟು ಹೆಚ್ಚು ಕ್ಯಾಲ್ಸಿಯಂ
ಪಾಲಕ್‌ಗಿಂತ 2 ಪಟ್ಟು ಹೆಚ್ಚು ಕಬ್ಬಿಣಾಂಶ
ಮೋಸಂಬಿಗಿಂತ 7 ಪಟ್ಟು ಹೆಚ್ಚು ವಿಟಮಿನ್ 'ಸಿ'
ಮೊಸರಿಗಿಂತ 2 ಪಟ್ಟು ಹೆಚ್ಚು ಪ್ರೋಟಿನ್
ಕೊಲೆಸ್ಟ್ರಾಲ್ ಸೊನ್ನೆ ಪ್ರಮಾಣದಲ್ಲಿ ಇರುತ್ತದೆ.

ಈ ಎಲ್ಲ ಕಾರಣಗಳಿಂದ ನುಗ್ಗೇಕಾಯಿಯ ಮಹತ್ವವು ಅತಿ ಹೆಚ್ಚಾಗುತ್ತದೆ. ಆಯುರ್ವೇದದಲ್ಲೂ ಸಹ ಇದರ ಬಳಕೆಯನ್ನು ಹೇಳಲಾಗಿದೆ. ಆದರೆ,

**ಸಸ್ಯಶಾಸ್ತ್ರದ ಹೆಸರು :** Moringa oleifera

**ಕುಲ** (Family) **:** Moringaceae



**ಸಂಸ್ಕೃತ ಭಾಷೆಯಲ್ಲಿ :** ಶಿಗ್ರು, ಶೋಭಾಂಜನ, ತೀಕ್ಷ್ಣ ಗಂಧ, ಅಪೇವ, ಮೋಚಕ

**ಕನ್ನಡ ಭಾಷೆಯಲ್ಲಿ :** ನುಗ್ಗೆ ಮರ, ನುಗ್ಗೆಕಾಯಿ

**ಹಿಂದಿ ಭಾಷೆಯಲ್ಲಿ :** ಸಹಿಜನ, ಮುನಗ

**ಆಂಗ್ಲ ಭಾಷೆಯಲ್ಲಿ :** Drumstick plant, Moringa Horse raddish tree

**ಆಯುರ್ವೇದದ ಪ್ರಕಾರ ಗುಣಧರ್ಮಗಳು**

**ರಸ :** ಕಟ್ಟು ಪಚನಕ್ರಿಯೆಯ (ಖಾರವಾಗಿರುವುದು), ತಿಕ್ತ (ಕಹಿರಸ)

**ಗುಣ:** ಲಘು (ಪಚನ ಕ್ರಿಯೆಗೆ ಲಘುವಾಗಿರುವುದು, ರೂಕ್ಷ (ಒಣ ಸ್ವಭಾವವಿರುವುದು)ತೀಕ್ಷ್ಣವಾಗಿರುವುದು.

**ವಿಪಾಕ :** ಕಟು ಪಚನಕ್ರಿಯೆಯ ನಂತರ ಉಳಿಯುವ ರಸ

**ವೀರ್ಯ :** ಉಷ್ಣ

**ದೋಷಕರ್ಮ :** ವಾತ ಮತ್ತು ಕಫ ದೋಷಗಳನ್ನು ನಿಯಂತ್ರಿಸುತ್ತದೆ.

**ನುಗ್ಗೆಯ ಪೋಷಕಾಂಶಗಳ ವಿವರ**

ನುಗ್ಗೆಯನ್ನು 'ಅದ್ಭುತ ಮರ' ಮತ್ತು 'ತಾಯಿಯ ಒಳ್ಳೆಯ ಸಂಗಾತಿ' ಎಂದು ಹೇಳಲಾಗುತ್ತದೆ. ಇದರ ಹಸಿ



ಎಲೆಯಲ್ಲಿ ವಿಟಮಿನ್ 'ಸಿ'ಯ ಪ್ರಮಾಣವು ಹೆಚ್ಚಿರುತ್ತದೆ. ಇದು 100 ಗ್ರಾಂ ಹಸಿ ಎಲೆಯಲ್ಲಿ ವಿಟಮಿನ್ 'ಎ', 'ಬಿ', 'ಸಿ' ಮತ್ತು ಖನಿಜಾಂಶಗಳು, 8.3 ಗ್ರಾಂ. ಪ್ರೋಟಿನ್, 434 ಮಿ.ಗ್ರಾಂ . ಕ್ಯಾಲ್ಸಿಯಂ, 404ಮಿ. ಗ್ರಾಂ. ಪೊಟ್ಯಾಸಿಯಂ, 738 ಮೈಗ್ರಾಂ ವಿಟಮಿನ್ 'ಎ' ಮತ್ತು 164 ಮಿ.ಗ್ರಾಂ. ವಿಟಮಿನ್ 'ಸಿ' ಇರುತ್ತದೆ. ಇದರಲ್ಲಿರುವ ಪೋಷಕಾಂಶಗಳ ವಿವರವು ಈ ಕೆಳಗಿನಂತಿವೆ.

ಆ್ಯಂಟಿ - ಆಕ್ಸಿಡೆಂಟ್ಸ್ ಇದರಲ್ಲಿ 46 ಪ್ರಕಾರದ ಆ್ಯಂಟಿ ಆಕ್ಸಿಡೆಂಟ್ಸ್‌ಗಳಿದ್ದು,ದೇಹವನ್ನು ರಕ್ಷಿಸುವಲ್ಲಿ ಸಹಾಯ ಮಾಡುತ್ತವೆ ಮತ್ತು ರೋಗ ತಡೆಗಟ್ಟುವಲ್ಲಿ ಸಹಾಯಕಾರಿ.

ವಿಟಮಿನ್ಸ್ ಇದರಲ್ಲಿ ವಿಟಮಿನ್ 'ಎ', 'ಬಿ', 'ಬಿ1', 'ಬಿ2', 'ಬಿ3', 'ಬಿ5', 'ಬಿ6','ಸಿ', 'ಡಿ','ಇ', 'ಕೆ', ಫೋಲಿಕ್ ಆಸಿಡ್ ಮತ್ತು ಬಯೋಟಿನ ಇರುತ್ತದೆ.

ಖನಿಜಾಂಶಗಳು - ಕ್ಯಾಲ್ಸಿಯಂ, ಕ್ರೋಮಿಯಮ್, ತಾಮ್ರ,ಫ್ಲೋರಿನ್,ಕಬ್ಬಿಣಾಂಶ,ಮ್ಯಾಂಗನೀಸ್, ಮೆಗ್ನೀಶಿಯಮ್ಸ್ ಮಾಲಿಬ್ಡೆನಮ್, ಫಾಸ್ಟರಸ್, ಪೊಟ್ಯಾಶಿಯಮ್, ಸೋಡಿಯಮ್, ಸೆಲೇನಿಯಮ್, ಗಂಧಕ ಝಿಂಕ್.

### ಅಮೈನೊ ಆ್ಯಸಿಡ್ಸ್

ಐಸೋಲ್ಯುಸಿನ್,ಲ್ಯುಸಿನ್, ಮಿಥಿಯೋನಿನ್, ಫಿನೈಲ್ ಅಲನಿನ್,ಥಿಯೋನಿನ್,ಟ್ರೆಪ್ಟೋಫ್ಯಾನ್,ವ್ಯಾಲಿನ್, ಅಲನಿನ್,ಅರ್ಜಿನಿನ್,ಅಸ್ಪರ್ಟಿಕ ಆ್ಯಸಿಡ್,ಸಿಸ್ಟೀನ್, ಗ್ಲೈಟಮಿನ್, ಗ್ಲೈಸಿನ್, ಹಿಸ್ಟಿಡಿನ್, ಪ್ರೋಲಿನ್, ಸಿರೀನ್, ಟೈರೋಸಿನ್.

ಆಯುರ್ವೇದದ ಪ್ರಕಾರ ಮೂರು ವಿಧವಾದ ಆ ನುಗ್ಗೆಯನ್ನು ಹೇಳಲಾಗಿದೆ.

1) ಶ್ಯಾಮ - ಕಪ್ಪು ಪ್ರಕಾರ

2) ಶ್ವೇತ - ಬಿಳಿ ಪ್ರಕಾರ ಮತ್ತು

3) ರಕ್ತ - ಕೆಲವು ಪ್ರಕಾರ ಇದನ್ನು 'ಮಧು ಶಿಗ್ರು' ಎಂದೂ ಸಹ ಕರೆಯಲಾಗುತ್ತದೆ.

ಕಪ್ಪು ಪ್ರಕಾರದ ನುಗ್ಗೇಕಾಯಿಯನ್ನು ಸಾಮಾನ್ಯವಾಗಿ ಬಳಸಲಾಗುತ್ತದೆ. ಡಾ.ಜೆ.ವಿ. ಹೆಬ್ಬಾರ್ ಅವರು ತಮ್ಮ ಬ್ಲಾಗ್‌ನಲ್ಲಿ ಈ ರೀತಿಯಾಗಿ ಹೇಳಿದ್ದಾರೆ. ಕಪ್ಪು ಪ್ರಕಾರದ ನುಗ್ಗೇಯ ಗುಣಗಳು ಈ ಕೆಳಗಿನಂತಿವೆ.

♦ ಇದು ಕಟುರಸ ಹೊಂದಿದ್ದು, ತೀಕ್ಷ್ಣವಾಗಿದೆ.

♦ ಇದರ ವೀರ್ಯವು ಉಷ್ಣವಾಗಿದೆ.

♦ ರಸದಲ್ಲಿ ಕಟುರಸದೊಂದಿಗೆ ಸ್ವಲ್ಪ ಮಧುರ (ಸಿಹಿ) ರಸವೂ ಸಹ ಇದೆ.

♦ ಇದು ಲಘು, ರೂಕ್ಷವಾಗಿದ್ದು ಪಚನಕ್ರಿಯೆಯನ್ನು ಹೆಚ್ಚಿಸುತ್ತದೆ ಮತ್ತು ಬಾಯಿಯ ರುಚಿಯನ್ನು ಸಹ ಹೆಚ್ಚಿಸುತ್ತದೆ.

♦ಇದು ಸಂಗ್ರಾಹಿ, ಅಂದರೆ ಅತಿಸಾರದಲ್ಲಿ ಕೊಡಬಹುದು.

♦ಒಂದು ಸಂಶೋಧನೆಯ ಪ್ರಕಾರ ಇದು ವೀರ್ಯದ ಪ್ರಮಾಣ ಮತ್ತು ಸಂಖ್ಯೆಯನ್ನು ಹೆಚ್ಚಿಸುತ್ತದೆ. ಆದರೆ ವೀರ್ಯಾಣುವಿನ ಅವಧಿಯನ್ನು ಕಡಿಮೆಗೊಳಿಸುತ್ತದೆ.

♦ ಇದು ಹೃದಯಕ್ಕೆ ಒಳ್ಳೆಯದು.

♦ ಇದು ದಾಹವನ್ನು ಉಂಟುಮಾಡುತ್ತದೆ. ಪಿತ್ತ ಮತ್ತು ರಕ್ತದೋಷದಿಂದ ಬಳಲುವವರಿಗೆ ಇದನ್ನು ಕೊಡಬಾರದು. ಮಹಿಳೆಯರಿಗೆ ಮುಟ್ಟುಸ್ರಾವ ದಿನದಲ್ಲಿ ಇದನ್ನು ಕೊಡಬಾರದು.

♦ಚಕ್ಷುಷ್ಯ: ಇದು ದೃಷ್ಟಿಯ ಕ್ಷಮತೆಯನ್ನು ಹೆಚ್ಚಿಸುತ್ತದೆ. ಕಣ್ಣಿಗೆ ತುಂಬಾ ಒಳ್ಳೆಯದು.

♦ಇದಕ್ಕೆ ವ್ರಣರೋಪಣ ಗುಣವಿದೆ. ಇದರ ಕಲ್ಕವನ್ನು ಬಾಹ್ಯರೂಪದಲ್ಲಿ ಹಚ್ಚುವುದರಿಂದ ಮತ್ತು ಆಭ್ಯಂತರವಾಗಿ ಪ್ರಯೋಗಿಸುವುದರಿಂದ ಗಾಯವು ಬೇಗ ಕಡಿಮೆಯಾಗುತ್ತದೆ.

♦ಹೊಟ್ಟೆಯಲ್ಲಾಗುವ ಕ್ರಿಮಿಗೆ ತುಂಬಾ ಒಳ್ಳೆಯದು.

♦ ಇದು ವಿಷರಹ

♦ ಮೇದುಹರ - ಬೊಜ್ಜು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಇತ್ಯಾದಿ.

**ಬಿಳಿ ನುಗ್ಗೆಯ ಪ್ರಯೋಗಗಳು**

ಇದರ ಗುಣಗಳು ಕಪ್ಪು ಪ್ರಕಾರಕ್ಕೆ ಸಮಾನವಾಗಿದೆ. ದಾಹಕೃತ್ - ಇದು ದಾಹವನ್ನು ಉತ್ಪತ್ತಿ ಮಾಡುತ್ತದೆ.

ಇದು ಸ್ಕಿನ್‌ಗೆ ಸಂಬಂಧಿಸಿದ ವಿದ್ರಧಿಯಲ್ಲಿ ಸಹಾಯ ಮಾಡುತ್ತದೆ.

ಗಾಯವನ್ನು ಶೀಘ್ರದಲ್ಲಿ ಗುಣಪಡಿಸುವಲ್ಲಿ ಸಹಾಯ ಕಾರಿ

ಪಿತ್ತ ಮತ್ತು ರಕ್ತವನ್ನು ಹೆಚ್ಚಿಸುತ್ತದೆ.

**ಕೆಂಪು ನುಗ್ಗೆಯ ಪ್ರಯೋಗಗಳು**

♦ ಇದನ್ನು 'ಮಧುಶೀಗ್ರು' ಎಂದು ಕರೆಯಲಾಗುತ್ತದೆ.

♦ ಹಸಿವೆಯನ್ನು ಹೆಚ್ಚಿಸುತ್ತದೆ.

ಮಲಬದ್ಧತೆಯ ನಿವಾರಣೆಗೆ ಸಹಾಯಕಾರಿ

**ಆಮಯಿಕ ಪ್ರಯೋಗ**

ಬೇರೆ ಸೊಪ್ಪಿನ ತರಹ ನುಗ್ಗೆಯ ಸೊಪ್ಪನ್ನು ಅಡುಗೆ ಯಲ್ಲಿ ಉಪಯೋಗಿಸಬಹುದು. ವಾತ ಮತ್ತು ಕಫ ದೋಷದ ತೊಂದರೆಗಳಿಗೆ ಸಹಾಯಕಾರಿ.

ಇದು ಹೃದ್ರೋಗಿಗಳಿಗೆ ಒಳ್ಳೆಯದು. ಇದರಲ್ಲಿ ಸೊನ್ನೆ ಪ್ರತಿಶತ ಕೊಲೆಸ್ಟ್ರಾಲ್ ಇರುವುದರಿಂದ ಉಚ್ಚರಕ್ತಚಾಪದ ರೋಗಿಗಳಿಗೆ ಒಳ್ಳೆಯದು.

ನಿಯಮಿತ ನುಗ್ಗೆಯ ಬಳಿಕೆಯಿಂದ ಕ್ಯಾನ್ಸರ್ ಅನ್ನು 80% ತನಕ ತಡೆಯಬಹುದು. ಕ್ಯಾನ್ಸರ್ ಬೇಗ ಗುಣಮುಖ ಹೊಂದಲು ಮತ್ತು ಕ್ಯಾನ್ಸರ್ ರೋಗಿಗಳು ಆರೋಗ್ಯವಾಗಿ ಬದುಕಲು ಇದು ಸಹಕಾರಿ.

♦ಇದರಲ್ಲಿ ವಿಟಮಿನ್ 'ಎ' ದ ಪ್ರಮಾಣವು ಹೆಚ್ಚಿರುವು ದರಿಂದ ದೃಷ್ಟಿಗೆ ತುಂಬಾ ಒಳ್ಳೆಯದು ಮತ್ತು ವಯಸ್ಸಿಗನು ಗುಣವಾಗಿ ಆಗುವ ದೃಷ್ಟಿಮಾಂದ್ಯತೆಯನ್ನು ತಡೆಯುತ್ತದೆ.

♦ಮಧುಮೇಹದಿಂದ ಬಳಲುವವರೂ, ಸಹ ಇದನ್ನು ಪ್ರಯೋಗಿಸಬಹುದು.

♦ನುಗ್ಗೆಯ ಎಲೆಯನ್ನು ಮೂರು ವಾರದವರೆಗೆ ನಿಯ ಮಿತವಾಗಿ ಉಪಯೋಗಿಸುವುದರಿಂದ ದೇಹದಲ್ಲಿರುವ ದೋಷಗಳನ್ನು ಹೊರಹಾಕುತ್ತದೆ.ಶರೀರದ ರೋಗ ಪ್ರತಿ ರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.

♦ನುಗ್ಗೆಯ ಎಲೆಗಳನ್ನು ಜಾಡಲ ಎಣ್ಣೆಯಲ್ಲಿ ಹುರಿದು ಊತದ ಮೇಲೆ ಕಟ್ಟುವುದರಿಂದ ಊತವು ಕಡಿಮೆಯಾಗು ತ್ತದೆ.

♦ಎಲೆಗಳಲ್ಲಿ ಕ್ಯಾಲ್ಸಿಯಂನ ಪ್ರಮಾಣವು ಹೆಚ್ಚಿರುತ್ತದೆ. ಪ್ರತಿದಿನ ಒಂದು ಚಮಚ ಎಲೆಯ ರಸವನ್ನು ಹಾಲಿನೊಂದಿಗೆ ದಿನಕ್ಕೆರಡು ಬಾರಿ ಕೊಡುವುದರಿಂದ ಮೂಳೆಯ ಸಾಂದ್ರ ತೆಯು ಹೆಚ್ಚಾಗುತ್ತದೆ.

♦ಎಲೆಯ ರಸ+ನಿಂಬೆಯ ರಸವನ್ನು ಮಿಶ್ರಣ ಮಾಡಿ ಮುಖಕ್ಕೆ ಹಚ್ಚುವುದರಿಂದ ಮುಖದ ಮೇಲಿನ ಮೊಡುವೆಗಳು ಕಡಿಮೆ ಆಗುತ್ತವೆ.

♦ನುಗ್ಗೆಯ ಬೀಜವನ್ನು ಕುದಿಸಿ ಅದೇ ನೀರಿ ನೊಂದಿಗೆ ಸೇವಿಸುವುದರಿಂದ, ಲಿವರ್, ಸ್ಕಿನ್‌ನ ತೊಂದರೆ ಗಳಿಗೆ ಒಳ್ಳೆಯದು ಇದು ಪಚನಕ್ರಿಯೆಗೂ ಸಹ ಸಹಾಯ ಮಾಡುತ್ತದೆ. ಇದು ಕೂದಲಿಗೂ ಸಹ ಒಳ್ಳೆಯದು.

♦ದವಡೆ ಊದು ಕೊಂಡಿದ್ದು, ನೋಯುತ್ತಿದ್ದರೆ ಅಥವಾ ಗಂಟಲು ನೋವಿದ್ದರೆ, ಇದರ ಮೂಲವನ್ನು ಕುದಿ ಸಿದ ನೀರಿನಿಂದ ಬಾಯಿ ತೊಳೆಯಬೇಕು (Gargle) ಇದ ರಿಂದ ಈ ತೊಂದರೆ ಕಡಿಮೆ ಆಗುತ್ತವೆ.

♦ಇದರ ಕಾಂಡದ ಚೂರ್ಣವನ್ನು ಚಿಕಿತ್ಸೆಯಲ್ಲಿ ಪ್ರಯೋಗಿಸಲಾಗುತ್ತದೆ.

♦ಇದರಲ್ಲಿ ಊತವನ್ನು ಕಡಿಮೆ ಮಾಡುವ ಗುಣ ಇರು ವುದರಿಂದ ಗಾಯಗಳಲ್ಲಿ, ಸಂಧಿನೋವು ಸಂಧಿ ಊತದಲ್ಲಿ ಇದರ ಕಲ್ಕವನ್ನು ಉಪಯೋಗಿಸಲಾಗುತ್ತದೆ.



♦ತಲೆನೋವು ತುಂಬಾ ಇದ್ದರೆ, ಇದರ ಬೀಜದ ಪುಡಿಯನ್ನು ಮೂಗಿನಲ್ಲಿ ಹಾಕಲಾಗುತ್ತದೆ.

♦ಎಲೆ ಮತ್ತು ಹಣ್ಣಿನ ಬಳಕೆಯು ಪಚನಕ್ರಿಯೆಯನ್ನು ಹೆಚ್ಚಿಸುತ್ತದೆ ಮತ್ತು ಜಠರದಲ್ಲಿ ಆಗುವ ನೋವನ್ನು ಕಡಿಮೆಗೊಳಿಸುತ್ತದೆ.

♦ಬೀಜವು ಹೊಟ್ಟೆಯಲ್ಲಾಗುವ ಜಂತು ಹುಳುವಿಗೆ ಒಳ್ಳೆಯದು.

♦ಎಲೆ ಮತ್ತು ಕಾಂಡದ ರಸವು ಪ್ರಾಕೃತಿಕ ನೋವು ನಿವಾರಕಗಳು.

♦ನುಗ್ಗೆ ಎಲೆಯ ಕಲ್ಕವು ಪೈಲ್ಸ (ಅರ್ಶರೋಗ)ನಲ್ಲಿ ಒಳ್ಳೆಯದು. ಇದರ ಕಲ್ಕವನ್ನು ಜಾಗದಲ್ಲಿ ಹಚ್ಚುವುದರಿಂದ ಲಾಭಕಾರಿ.

♦ನುಗ್ಗೆ ಎಲೆಯ ಕಲ್ಕವನ್ನು ಹಣೆಗೆ ಹಚ್ಚುವುದರಿಂದ ತಲೆನೋವು ಕಡಿಮೆ ಆಗುತ್ತದೆ.

♦ನುಗ್ಗೇಕಾಯಿಯಲ್ಲಿ ಪ್ರೋಟಿನ್, ವಿಟಮಿನ್, ಖನಿಜಾಂಶ ಮತ್ತು ಆ್ಯಂಟಿ ಆಕ್ಸಿಡೆಂಟ್ಸ್‌ಗಳು ಇರುವುದರಿಂದ ಗರ್ಭಿಣಿಯರಿಗೆ ಕೊಡಬಹುದು. ಆದರೆ, ನುಗ್ಗೆಯ ಎಲೆ, ಕಾಂಡದ ತೊಗಟೆ ಮತ್ತು ಹೂವನ್ನು ಕೊಡಬಾರದು ಪ್ರಸೂತಾವಸ್ಥೆಯಲ್ಲೂ ಸಹ ಇದನ್ನು ಕೊಡಬಾರದು.

♦ನುಗ್ಗೆಯ ಎಲೆ ಮತ್ತು ಕಾಂಡವನ್ನು ನರದೌರ್ಬಲ್ಯತೆಯಲ್ಲಿ ಕೊಡಲಾಗುತ್ತದೆ.

♦ ಇದರಲ್ಲಿ ರಕ್ತ ಶೋಧಕ ಗುಣವಿದೆ. ನಿಯಮಿತವಾಗಿ ಇದನ್ನು ಬಳಸುವುದರಿಂದ ರಕ್ತ ಸಂಚಲನೆಯಲ್ಲಿ ಸಹಾಯ ಮಾಡುತ್ತದೆ.

♦ ಇದರಲ್ಲಿ ವಿಟಮಿನ್ 'ಸಿ'ಯ ಪ್ರಮಾಣವು ಹೆಚ್ಚಿರುವುದರಿಂದ ಶ್ವಾಸ ಸಂಬಂಧಿತ ಅಲರ್ಜಿಗಳನ್ನು ತಡೆಯಲು ಸಹಾಯಕಾರಿ.

♦ಇದರ ಎಲೆಯ ಕಲ್ಕವು ಗಾಯದಿಂದಾದ ರಕ್ತಸ್ರಾವವನ್ನು ತಡೆಯುತ್ತದೆ.

♦ ಇದರಲ್ಲಿ ಕಬ್ಬಿಣಾಂಶ ಇರುವುದರಿಂದ ರಕ್ತಹೀನತೆಯಲ್ಲಿ ಇದನ್ನು ಕೊಡಬಹುದು.

♦ ಕುಪೋಷಣೆಯಲ್ಲಿ ಇದನ್ನು ಬಳಸಲಾಗುತ್ತದೆ.

♦ನುಗ್ಗೆ ಹೂವಿನ ರಸವು ಮೂತ್ರವಿಸರ್ಜನೆಯಲ್ಲಿ ಸರಳತೆಯನ್ನುಂಟು ಮಾಡುತ್ತದೆ. ಆದ್ದರಿಂದ ಮೂತ್ರಕೋಶಕ್ಕೆ ಸಂಬಂಧಿಸಿದ ತೊಂದರೆಯಲ್ಲಿ ಬಳಸಲಾಗುತ್ತದೆ ಇತ್ಯಾದಿ.

## ಮುನ್ನೆಚರಿಕಾ ಕ್ರಮಗಳು

ಕೆಲವು ಪ್ರಮುಖ ಅಂಶಗಳನ್ನು ನೆನಪಿಡಬೇಕು.

ಕೆಲವರಲ್ಲಿ ನುಗ್ಗೆಯು ದಾಹವನ್ನುಂಟು ಮಾಡುತ್ತದೆ. ಅಂತಹವರು ಇದನ್ನು ಉಪಯೋಗಿಸದೇ ಇರುವುದು ಒಳ್ಳೆಯದು.

♦ ಇದು ಪಿತ್ತ ಮತ್ತು ರಕ್ತದೋಷವನ್ನು ಹೆಚ್ಚಿಸುವುದರಿಂದ ಮುಟ್ಟು ಸ್ರಾವದ ದಿನಗಳಲ್ಲಿ ಮತ್ತು ರಕ್ತಸ್ರಾವದ ತೊಂದರೆ ಇರುವವರು ಇದನ್ನು ಉಪಯೋಗಿಸಬಾರದು.

♦ ನುಗ್ಗೆಯ ಎಲೆ, ಕಾಂಡ ಮತ್ತು ಹೂವುಗಳನ್ನು ಗರ್ಭಿಣಿಯವರಿಗೆ ಕೊಡಬಾರದು. ನುರಿತ ತಜ್ಞ ಆಯುರ್ವೇದ ವೈದ್ಯರ ಸಲಹೆಯ ಮೇರೆಗೆ ಇದನ್ನು ಪ್ರಯೋಗಿಸಬೇಕು.

## ಪಾಠಕರಿಗೆ ವಿಜ್ಞಪ್ತಿ

ಸಪ್ತಗಿರಿ ಮಾಸಪತ್ರಿಕೆ ನಿಮಗೆ ಸಕಾಲದಲ್ಲಿ ತಲುಪದಿದ್ದರೆ ಪ್ರಧಾನ ಸಂಪಾದಕ ಕಾರ್ಯಾಲಯಕ್ಕೆ ಕೆಲಸದ ದಿನಗಳಲ್ಲಿ ಕರೆ ಮಾಡಬೇಕು. ನಂತರವೇ ನಿಮಗೆ ಮತ್ತೊಂದು ಪತ್ರಿಕೆಯನ್ನು ಕಳಿಸುತ್ತಾರೆ.ಕೆಳಗಿನ ವಿವರಗಳಲ್ಲಿರುವ ದೂರವಾಣಿ ಸಂಖ್ಯೆಗೆ ಕರೆ ಮಾಡಿ. ನಿಮ್ಮ ಚಂದಾ ನಂಬರ್, ಮತ್ತು ನಿಮ್ಮ ವಿಳಾಸ, ನಿಮ್ಮ ಊರಿನ ಪಿನ್‌ಕೋಡ್ ನಂಬರ್, ನಿಮ್ಮ ದೂರವಾಣಿ ನಂಬರ್ ಅನ್ನು ವಿವರವಾಗಿ ತಿಳಿಸಬೇಕು.....

**ಪ್ರಧಾನ ಸಂಪಾದಕರ ಕಾರ್ಯಾಲಯದ**
**ದೂರವಾಣಿ ಸಂಖ್ಯೆ : 0877-2264543**

# ಧರ್ಮ ಪರೀಕ್ಷಣೆ

ಮೂಲ.ಡಾ॥ ವೈಷ್ಣವಾಂಘ್ರಿಸೇವಕ್‌ದಾಸ್
ಅನುವಾದ: ಡಿ.ಎಸ್. ಬದ್ರಿನಾಥ್

ಇದು ಕಲಿಯುಗ ಅಂದರೆ ಕಲಹಗಳ ಯುಗ. ಕೋಲಾಹಲದ ಯುಗ.ಕಪಟದ ಯುಗ. ಕಲ್ಮಷದ ಯುಗ. ಕರ್ಕಶಯುಗ.ಇಷ್ಟು ದುರ್ಗುಣಗಳ ಈ ಯುಗದಲ್ಲಿ ಶಾಂತಿ ಎಲ್ಲಿಂದ ಬರಬೇಕು? ಕಲಿಯುಗ ಎಲ್ಲರ ಕೈಲಿ ಪಾಪಗಳನ್ನು ಮಾಡುವಂತೆ ಪ್ರೇರೇಪಿಸುತ್ತದೆ. ಅದರ ಮೂಲಕ ಎಲ್ಲರಿಗೂ ದುಃಖವನ್ನು ಉಂಟುಮಾಡುತ್ತದೆ. ಆದರೆ ಈ ಕಲಿ ಪುರುಷ ಹೇಗೆ ಪ್ರವೇಶಿಸಿದ್ದಾನೆ.ಹೇಗೆ ಸಮಸ್ತವನ್ನು ಆಕ್ರಮಿಸಿಕೊಂಡಿದ್ದಾನೆ.ಹೇಗೆ ಅವನ ಪ್ರಭಾವದಿಂದ ನಮ್ಮನ್ನು ನಾವು ರಕ್ಷಿಸಿ ಕೊಳ್ಳಬೇಕು ಎಂದು ತಿಳಿಸುವುದೇ ಈ ಕಥೆ. ಇನ್ನೊಂದು ಮುಖ್ಯ ವಿಷಯವೇನೆಂದರೆ, ಕಲಿಯುಗವು ಪ್ರಾರಂಭಿಕ ಹಂತದಲ್ಲಿದೆ. ಆದ್ದರಿಂದಲೇ ಮಂತ್ರಗಳಲ್ಲಿ "ಕಲಿಯುಗೇ ಪ್ರಥಮಪಾದೇ" ಎಂದು ಹೇಳುವುದು ನಮಗೆ ಕಂಡು ಬರುತ್ತದೆ. ಈ ಪ್ರಥಮ ಹಂತದಲ್ಲೇ ಜೀವನ ಇಷ್ಟು ದುರ್ಭರವಾಗಿ ಹೋಗುತ್ತಿದ್ದರೆ ಇನ್ನು ಕಲಿಯುಗದ ಮುಂಬರುವ ಸಮಯದಲ್ಲಿ ಇನ್ನೆಷ್ಟು ದುಷ್ಪ್ರಭಾವಗಳು ಮಾನವನನ್ನು ಅಟ್ಟಿಸಿಕೊಂಡು ಬರುತ್ತವೆಯೋ ಊಹಿಸುವುದು ಕಷ್ಟವೇನೂ ಅಲ್ಲ.

ನೈಮಿಶಾರಣ್ಯದಲ್ಲಿ ಶೌನಕಾದಿ ಋಷಿಗಳು ಅಸೀನರಾಗಿ ಕಲಿ ಪ್ರಭಾವವನ್ನು ನಿಯಂತ್ರಿಸಲು ಸಾವಿರ ವರ್ಷಗಳು ಜರುಗಿಸಬೇಕಾದ ಒಂದು ಯಜ್ಞವನ್ನು ಮೊದಲಿಟ್ಟಿದ್ದಾರೆ.ಕಲಿಪ್ರಭಾವವನ್ನು ಕಡಿಮೆ ಮಾಡುವುದೇ ಅವರ ಯಜ್ಞಸಂಕಲ್ಪ. ಆದರೆ ಅವರು ಅಂದು ಕೊಂಡದ್ದು ಲಭಿಸದೇ ಹೋಗುವಂತೆ ಕಂಡು ಬಂದಲ್ಲಿ ಅವರು ಭಾಗವತವನ್ನು ಶ್ರವಣಿಸಲು ಸಿದ್ಧರಾಗಿದ್ದಾರೆ. ಭಾಗವತವು "ಕಲಿತಿಮಿರ ಭಾಸ್ಕರ" ಅಂದರೆ ಕಲಿಯುಗವೆಂಬ ಕತ್ತಲೆಗೆ ಸೂರ್ಯನಂತೆ ಎಂದು ಹೇಳಲಾಗಿದೆ. ಶ್ರೀಕೃಷ್ಣನು ಧರ್ಮಜ್ಞಾನಾದಿಗಳಿಂದ ಪರಂಧಾಮಕ್ಕೆ ತೆರಳುತ್ತಲೇ ಭಾಗವತನು ಅವತರಿಸಿದ್ದಾನೆ. ಕಲಿಯುಗವು ಜನರ ಸತ್ವಗುಣಗಳನ್ನು ಬೇಧಿಸಿ ಅವರ ನಾಶವನ್ನುಂಟು ಮಾಡುತ್ತದ್ದಾದ್ದರಿಂದ ಅವರ ಸತ್ವ ಗುಣವನ್ನು ಬಲಿಷ್ಠಗೊಳಿಸಲು, ಸ್ಥಿರವಾಗಿ ನಿಲ್ಲಿಸಲು ಭಾಗವತ ಪುರಾಣವು ಉದಯಿಸಿದೆ. ಕಲಿಯುಗ ಪ್ರಭಾವದಿಂದ ಮಾನವರನ್ನು ರಕ್ಷಿಸುವುದು ಭಾಗವತವೊಂದೇ. ಆದ್ದರಿಂದಲೇ ಭಾಗವತವನ್ನು ರಚಿಸಿ ಸರ್ವ ಗ್ರಂಥ ಪುರಾಣ ರಚನಾಕಾರರಾದ ಶ್ರೀ ವ್ಯಾಸರು ಮನಶ್ಯಾಂತಿಯನ್ನು ಹೊಂದಿದರು.

ದೇವದೇವನಾದ ಶ್ರೀಕೃಷ್ಣನು ಭೂಲೋಕದಲ್ಲಿ ತನ್ನ ಲೀಲೆಗಳನ್ನೆಲ್ಲಾ ಪೂರೈಸಿ ಪರಂಧಾಮಕ್ಕೆ ತೆರಳುತ್ತಲೇ ಆತನ ಪ್ರಿಯಭಕ್ತರಾದ ಪಾಂಡವರು ಸಹಾ ತಮ್ಮ ಸ್ವಾಮಿಯ ವಿರಹವನ್ನು ಸಹಿಸಲೊಲ್ಲದೇ ಮಹಾಪ್ರಸ್ಥಾನ ಕೈಗೊಂಡಿದ್ದಾರೆ. ಎಲ್ಲರೂ ಒಬ್ಬೊಬ್ಬರಾಗಿ ಪರಂಧಾಮವನ್ನು ಸೇರಿ ಕೊಂಡಿದ್ದಾರೆ. ಆದರೆ ಈ ಕಾರ್ಯಕೈಗೊಳ್ಳುವ ಮುನ್ನ ಎಲ್ಲರೂ ತಮ್ಮ ಕರ್ತವ್ಯದಂತೆ ಪರೀಕ್ಷಿತ ರಾಜನನ್ನು ಇಡೀ ಭೂಮಂಡಲಕ್ಕೇ ಚಕ್ರವರ್ತಿಯನ್ನಾಗಿ ಮಾಡಿದ್ದಾರೆ. ಅಭಿಮನ್ಯುವಿನ ಪುತ್ರನಾದ ಪರೀಕ್ಷಿತನು ಉತ್ತರನ ಕುಮಾರಿಯನ್ನು ವಿವಾಹಗೈದು ಜಯಮೇಜಯನೇ ಮೊದಲಾದ ನಾಲ್ಕು ಮಂದಿ ಪುತ್ರರನ್ನು ಹೊಂದಿದ್ದಾನೆ. ಉತ್ತರನು ವಿರಾಟ ರಾಜನ ಸುತನು. ಆತನ ಮಗಳೇ ಇರಾವತಿ. ಆಕೆ ಪರೀಕ್ಷಿತನಿಗೆ ನಾದಿನಿ. ಒಂದೇ ಗೋತ್ರದವರಾಗದಿದ್ದಲ್ಲಿ ಸೋದರಮಾವ ಮತ್ತು ಸೋದರ ಸೊಸೆ ಮಧ್ಯೆ ಸೋದರಿಕೆ ವಿವಾಹವು ಅತಿ ಯೋಗ್ಯವೆಂದು ಶಾಸ್ತ್ರಗಳು ಹೇಳುತ್ತವೆ. ಪರೀಕ್ಷಿತ್ತು ಮಹಾ ಚಕ್ರವರ್ತಿಯಾಗುತ್ತಾನೆಂದೂ ಮಹೋನ್ನತ ಯಶಸ್ಸನ್ನು ಸಾಧಿಸುತ್ತಾನೆಂದೂ ಜನ್ಮ ವೇಳೆಯಲ್ಲೇ ಜ್ಯೋತಿಷಿಗಳು ಶುಭ ನುಡಿದಿದ್ದಾರೆ. ರಾಜ್ಯಾಭಿಷಕ್ತನಾಗುತ್ತಲೇ ಪರೀಕ್ಷಿತನು ಕೃಪಾಚಾರ್ಯರ ಮಾರ್ಗದರ್ಶನದಲ್ಲಿ ಮೂರು ಅಶ್ವ



ಮೇಧ ಯಜ್ಞಗಳನ್ನು ಮಾಡಿದ್ದಾರೆ. ಯಜ್ಞಕರಿಗೆ ಭರ್ಜರಿ ದಕ್ಷಿಣೆಗಳನ್ನು ನೀಡಿದ್ದಾನೆ.

ವೈಭವೋಪೇತವಾಗಿ ಕೈಗೊಂಡ ಈ ಯಜ್ಞ ಕಾರ್ಯಕ್ಕೆ ಪಾಲ್ಗೊಳ್ಳಲು ಬಂದ ಮಾನವರಿಗೆ ಪರಮಾಶ್ಚರ್ಯವನ್ನುಂಟು ಮಾಡಿದೆ. ಆದರೆ ಸ್ವಲ್ಪ ಕಲಾನಂತರವೇ ಕಲಿಯು ತನ್ನ ಪ್ರಭಾವವನ್ನು ತೋರಿಸಲು ಆರಂಭಿಸಿದ್ದಾನೆ. ದೇವಾದಿ ದೇವನಾದ ಶ್ರೀಕೃಷ್ಣ ಭೂಮಿ ಮೇಲಿರುವವರೆಗೂ ಕಲಿಪುರುಷನು ತನ್ನ ಪ್ರಭಾವವನ್ನು ತೋರಗೊಡಲಿಲ್ಲ. ಆದರೆ ಶ್ರೀಕೃಷ್ಣ ಪರಂಧಾಮಕ್ಕೆ ತೆರಳುತ್ತಲೇ ಆತನು ತನ್ನ ಪ್ರಭಾವವನ್ನು ತೋರಿಸಲು ಮೊದಲಿಟ್ಟಿದ್ದಾನೆ. ಪರೀಕ್ಷಿತನು ಈ ಪರಿಸ್ಥಿತಿಯನ್ನು ಗಮನಿಸಿದ್ದಾನೆ. ಈ ಅಂಶವೇ ಭಾಗವತದಲ್ಲಿ "ಕಲಿ ಪ್ರವಿಷ್ಟಂ ನಿಜ ಚಕ್ರವರ್ತೇ"ಎಂದು ಹೇಳಲಾಗಿದೆ. ಕಲಿ ಪ್ರಭಾವ ಮೊದಲುಗೊಂಡಿದೆಯೆಂಬುದು ತಿಳಿದು ಬಂದದ್ದು ಹೇಗೆ? ಸ್ತ್ರೀ ಪುರುಷರ ಅಕ್ರಮ ಸಂಬಂಧ, ಮಾಂಸಭಕ್ಷಣೆ, ಮಾದಕವಸ್ತು ಸ್ವೀಕಾರ, ದ್ಯೋತವೆಂಬುವು ಕಲಿಯುಗದ ಲಕ್ಷಣಗಳು ಪ್ರದೂಕ್ಷಣೆ ಕಲಬೆರಕೆ ಕಲ್ಮಷಗಳು ಕಲಿಯಗವನ್ನು ಸ್ಪಷ್ಟವಾಗಿ ತೋರುತ್ತವೆ.

ತನ್ನ ರಾಜ್ಯದ ಗಡಿಯಲ್ಲಿ ಕಲಿ ಪ್ರವೇಶಿಸಿದ್ದಾನೆಂಬುದನ್ನು ಪರೀಕ್ಷಿತನು ಸಹಿಸದೇ ಕೂಡಲೇ ಚತುರಂಗ ಬಲಿ ಸಮೇತವಾಗಿ ವಿಜಯಯಾತ್ರೆಗೆ ಹೊರಟಿದ್ದಾನೆ. ಕರಿ



ಕುದುರೆಗಳೊಂದಿಗೆ ಕಟ್ಟಿದ ರಥದಲ್ಲಿ ಸಿಂಹಾಧ್ವಜಾರೂಢನಾಗಿ ಪರೀಕ್ಷಿತನು ಭದ್ರಾಶ್ವ, ಕೇತುಮಾಲಿ, ಭಾರತ, ಉತ್ತರ ಕುರುಪ್ರಾಂತ್ಯ, ಕಿಂಪುರುಷ ವರ್ಷದ ಮೂಲಕ ಪಯಣಿಸುತ್ತಾ ದುಷ್ಟರಾಜರುಗಳನ್ನು ಜಯಿಸಿದ್ದಾನೆ. ಅವರಿಂದ ಕಪ್ಪಕಾಣಿಕೆಗಳನ್ನು ಪಡೆದಿದ್ದಾನೆ. ಆತನು ಎಲ್ಲಿ ಸಾಗಿದರೂ ಪಾಂಡವರ ಸಂಕೀರ್ತಿ ಎಲ್ಲೆಡೆಯೂ ಕೇಳಿ ಬಂದಿದೆ. ಯಾವ ಪ್ರಾಂತ್ಯದಲ್ಲಿ ಗಾಯಕರು ಪಾಂಡವರ ಗುಣಗಾನ ಮಾಡಿದ್ದಾರೋ ಅವರೆಲ್ಲರಿಗೂ ಪರೀಕ್ಷಿತನು ಉನ್ನತವಾದ ಕಾಣಿಕೆಗಳನ್ನು ಧನ ಸಂಪತ್ತುಗಳನ್ನು ಪ್ರಸಾದಿಸಿದ್ದಾನೆ. ಈ ರೀತಿಯಾಗಿ ಪ್ರಪಂಚ ಪರ್ಯಟನೆ ಮಾಡುತ್ತಾ ಪರೀಕ್ಷಿತನು ಒಂದು ಕಡೆ ಒಂದು ಅಪೂರ್ವವಾದ ದೃಶ್ಯವನ್ನು ಕಂಡಿದ್ದಾನೆ. ಅಲ್ಲಿ ಒಂದು ಗೋವು - ಒಂದು ಎತ್ತು ಸಂವಾದ ನಡೆಸಿವೆ. ಎತ್ತಿಗೆ ಮೂರು ಕಾಲು ಮುಂದು ಹೋಗಿವೆ ಅದು ಕುಂಟುತ್ತಿದೆ. ಹಸು ತನ್ನ ಆಶ್ರಯದಾತನನ್ನು ಬೇಡಿಕೊಳ್ಳುವಂತೆ ಗೋಗರೆಯುತ್ತಿದೆ. ಆದರೆ ಅವು ಸಾಮಾನ್ಯವಾದ ಗೋವೃಷಭಗಳಾಗಿರಲಿಲ್ಲ. ಗೋವು ಸಾಕ್ಷಾತ್ ಭೂದೇವಿಯಾದರೆ ಎತ್ತು ಸಾಕ್ಷಾತ್ ಧರ್ಮದೇವತೆ. ಎತ್ತು ಎಷ್ಟೋ ಪರಿತಪಿಸುತ್ತಾ ಗೋವನ್ನು ಏಕೆ ಅಳುತ್ತಿರುವೆಯೆಂದು ಕೇಳಿದೆ. ಹಾಗೆಯೇ ಸಹಾ ಎತ್ತಿನ ದುಃಸ್ಥಿತಿಯ ಬಗ್ಗೆ ಪ್ರಶ್ನಿಸಿದೆ. ಅವರಿಬ್ಬರ ಮಧ್ಯೆ ಧರ್ಮಬುದ್ಧಿವಾದ ಸಂವಾದ ಸಂದಿದೆ. ಪರೀಕ್ಷಿತ ಮಹಾರಾಜ ಅವುಗಳನ್ನು ಕೇಳಿಸಿಕೊಂಡಿದ್ದಾನೆ.

ಅಷ್ಟರಲ್ಲಿ ಒಬ್ಬ ದುಮಾರ್ಗನು ಅಲ್ಲಿಗೆ ಬಂದಿದ್ದಾನೆ. ಆತನು ರಾಜನ ವೇಷ-ಭೂಷಣದಲ್ಲಿದ್ದಾನೆ. ಆದರೆ ಕಳಾಹೀನನಂತಿದ್ದಾನೆ. ರಾಕ್ಷಸನಿಗೆ ರಾಜನ ವೇಷ ಹಾಕಿದರೆ ಹೇಗಿರುತ್ತದೋ ಹಾಗೆ ಕಂಡಿದ್ದಾನೆ. ಅವನು ಅಲ್ಲಿಗೆ ಬಂದಂದ್ದೊಂದೇ ಅಲ್ಲದೇ ದಂಡದಿಂದ ಎತ್ತನ್ನು ಹೊಡೆಯಲು ಮುಂದಾಗಿದ್ದಾನೆ. ವೃಷಭವು ಇದರಿಂದ ಭಯಭೀತಗೊಂಡು ಮೂತ್ರವನ್ನು ವಿಸರ್ಜಿಸಿದೆ. ಅದಕ್ಕೂದಗಿದ ಹೀನಾಯ ಸ್ಥಿತಿಯನ್ನು ಕಂಡ ಹಸುವು ಮತ್ತಷ್ಟೂ ದುಃಖಿಸಲು ಮೊದಲುಗೊಂಡಿದೆ. ತನ್ನ ಕಣ್ಮುಂದೆಯೇ ಇಂತಹ ಘೋರ ಕೃತ್ಯವೆಸಗುವುದನ್ನು ಪರೀಕ್ಷಿತನು ಸಹರಿಸಲಾರದೇ ಹೋಗಿದ್ದಾನೆ ಒಂದೇ ಉಸಿರಿಗೆ ಸೊಂಟದಿಂದ ಖಡ್ಗವನ್ನು ಹೊರತೆಗೆದು ಆ ಧೂರ್ತನನ್ನು ಸಂಹರಿಸಲು ಮುಂದಾಗಿದ್ದಾನೆ. ತನ್ನ ಎದುರಲ್ಲಿ ಪರಮ ವೀರನಾಗಿ, ಪೌರುಷನಾಗಿ, ಪರಾಕ್ರಮಿಯಾಗಿ ನಿಂತ ಪರೀಕ್ಷಿತನನ್ನು ಕಾಣುತ್ತಲೇ ಕಲಿಪುರುಷನು ಆತನ ಕಾಲ ಬಳಿಗೆ ಬಂದಿದ್ದಾನೆ. ತನ್ನನ್ನು ಕ್ಷಮಿಸಬೇಕೆಂದು, ಪ್ರಾಣಭಿಕ್ಷೆ ನೀಡಬೇಕೆಂದು ಬೇಡಿದ್ದಾನೆ. ಹೀಗೆ ಪರೀಕ್ಷಿತನು ಗೋವೃಷಭಗಳಿಗೆ ಸಾಂತ್ವನದ ಮಾತುಗಳನ್ನು ಹೇಳಿ ಧೈರ್ಯವನ್ನು ಮೈಗೂಡಿಸಿದ್ದಾನೆ. ಅವು ಸ್ವಲ್ಪ ಮಟ್ಟಿಗೆ ಶಾಂತಗೊಂಡಿವೆ.

ಬಳಿಕ ಕಲಿಪುರುಷನು ತನ್ನ ಕಿರೀಟ, ರಾಜ ಮುದ್ರಿಕೆಗಳನ್ನು ಒದಿಗೆಸೆಯಲು ಪ್ರಯತ್ನಿಸುತ್ತಿರುವಾಗಲೇ ಪರೀಕ್ಷಿತನು ಆತನನ್ನು ಕ್ಷಮಿಸಿ ಕೂಡಲೇ ತನ್ನ ರಾಜ್ಯದಿಂದ ಹೊರಹೋಗು

ವಂತೆ ಆದೇಶಿಸಿದ್ದಾನೆ. ಶ್ರೀಕೃಷ್ಣನ ಪ್ರೀತ್ಯರ್ಥವಾಗಿ ಸರ್ವ ಧರ್ಮ ಸಂಯೋಗಯುತವಾಗಿ ಯಜ್ಞಾಚರಣೆಗಳು ಜರಗುವ ತನ್ನ ರಾಜ್ಯದಲ್ಲಿ ಕಲಿಗೆ ಸ್ಥಾನವಿಲ್ಲವೆಂದು ನಿಷ್ಕರುಣೆಯಿಂದ ಪರೀಕ್ಷಿತನು ಹೇಳಿದ್ದಾನೆ. ಆದರೆ ಕಲಿಯ ಗೂಣಗೂಣ ಗೊಣ ಗುಟ್ಟುತ್ತಾ "ರಾಜಾ! ನಾನು ಎಲ್ಲಿ ಹೋಗೋಲಿ? ರಾಜ್ಯವೆಲ್ಲಾ ನಿನ್ನದೇ, ಅದೇ ಅಲ್ಲದೇ ನಾನೆಲ್ಲಿ ಹೋದರೂ ನಿನ್ನ ಉಗ್ರ ಸ್ವರೂಪವೇ ಕಂಡು ಬರುತ್ತದೆ. ಆದ್ದರಿಂದ ನಾನು ಮನ ಶ್ಯಾಂತಿಯಿಂದ ಇರಲಾರೆನು. ಆದಕಾರಣ ನಾನು ನಿರ್ಭಯ ವಾಗಿ ಇರಬಹುದಾದ ಸ್ಥಳಗಳನ್ನು ನನಗೆ ಪ್ರಸಾದಿಸಿದಲ್ಲಿ ಅಲ್ಲಿಯೇ ಇದ್ದು ಬಿಡುತ್ತೇನೆ ಆ ಸ್ಥಾನಗಳನ್ನೆಂದೂ ದಾಟಿ ಹೊರಬರುವುದಿಲ್ಲ" ಎಂದು ಹೇಳುತ್ತಾನೆ.

ಆಗ ಪರೀಕ್ಷಿತನು ಆತನಿಗೆ ದ್ಯೂತದ ಸ್ಥಾನ , ಮಧ್ಯ ಶಾಲೆ, ವ್ಯಭಿಚಾರಗೃಹ, ಪಶುವಧೆಯ ಸ್ಥಳಗಳನ್ನು ಕಲಿ ಪುರುಷನಿಗೆ ನೆಲೆಯಾಗಿ ಕೊಟ್ಟಿದ್ದಾನೆ. ಆ ನಾಲ್ಕು ಸ್ಥಾನಗಳನ್ನು ಪಡೆದು ಕೊಂಡರೂ ಕಲಿಗೆ ಸಂತೃಪ್ತಿಯಾಗಲಿಲ್ಲ. ಯಾರು ಸತ್ತ್ವಗುಣ ಹೊಂದಿರುತ್ತಾರೋ ಅವರು ಇವುಗಳಿಂದ ದೂರವೇ ಇರುತ್ತಾರೆ. ಆದ್ದರಿಂದ ಆಧ್ಯಾತ್ಮಕ್ಕಾಗಿ ಪುರೋಗ ಮನ ಮಾಡುವವರು ಇವುಗಳನ್ನು ದೂರವೇ ಇರಿಸುತ್ತಾರೆ. ದೂರವೇ ಉಳಿಯುತ್ತೇವೆಂದು ವಚನವನ್ನು ಸ್ವೀಕರಿಸುತ್ತಾರೆ. ಆಗಲೇ ಪಾಪಗಳು ತೊಲಗಿಬಿಡುತ್ತವೆ. ಪಾಪವಿದೂರವಾದ ಹೃದಯದಲ್ಲಿ ಶ್ರೀಕೃಷ್ಣ ಪ್ರೇಮ, ಭಗವತ್ಪ್ರೇಮ ಉಂಟಾಗುತ್ತದೆ. ಕಲಿಪುರುಷನು ಸಂತೃಪ್ತಿ ಪಡದೇಯಿರಲು ಕಾರಣ ಪರೀ ಕ್ಷಿತನ ರಾಜ್ಯದಲ್ಲಿ ಕಲಿಸ್ಥಾನಗಳಿಲ್ಲದಿರುವುದು. ಅದಕ್ಕೆ ಆತನು ಮತ್ತೊಂದು ಸ್ಥಾನವನ್ನು ತನಗೆ ಕೊಡಬೇಕೆಂದು ಕೇಳಿ ಕೊಂಡಿದ್ದಾನೆ. ಆಗ ಕಲಿಯು ಆತನಿಗೆ ಬಂಗಾರವನ್ನು ಐದನೇ ಸ್ಥಾನವನ್ನಾಗಿ ನೀಡಿದ್ದಾನೆ. ಬಂಗಾರವು ಎಲ್ಲಿರು ತ್ತದೋ ಅಲ್ಲಿ ಅಸತ್ಯ, ಅಹಂಕಾರ, ಕಾಮ, ಈರ್ಷೆ, ವೈರತ್ವವು ನೆಲೆಸಲು ಉಚಿತವಾದ ನೆಲೆಯೊದಗುವ ಅವಕಾಶವಿರುತ್ತದೆ.

ರಾಜರು, ಪ್ರಜಾನೇತಾರರು, ಬ್ರಾಹ್ಮಣರು, ಸನ್ಯಾಸಿ ಗಳು ಕಲಿಯುಗದ ಆ ನಾಲ್ಕು ಲಕ್ಷಣಗಳಿಂದ ದೂರವಿರ ಬೇಕೆಂದು ಭಾಗವತವು ಹೇಳುತ್ತದೆ. ಈ ನಾಲ್ಕು ಕಲಿಕುರುಹು ಗಳಿಂದ ದೂರವಿದ್ದು ಬಂಗಾರವನ್ನು ಭಗವತ್ಸೇವೆಯಲ್ಲಿ ವಿನಿಯೋಗಿಸುವುದರ ಮೂಲಕ ಮಾನವರು ಪೂರ್ತಿಯಾಗಿ ಕಲಿ ಪ್ರಭಾವದಿಂದ ದೂರವಾಗುತ್ತಾರೆ. ಈ ರೀತಿಯಾಗಿ ಪರೀಕ್ಷಿತ ಮಹಾರಾಜ ತನ್ನ ಪೌರುಷದಿಂದ ಬಟ್ಟಬಯಲಾಗಿ ವ್ಯಾಪಿಸುವ ಕಲಿಯ ವಿಸ್ತಾರವನ್ನು ಕೇವಲ ಹಲವು ಸ್ಥಾನ ಗಳಿಗೆ ಮಾತ್ರ ಸೀಮಿತಗೊಳಿಸಿದ್ದಾನೆ. ಈ ವಿಧವಾಗಿ ಕಲಿ ಪ್ರಭಾವದಿಂದ ಜನರು ತಮ್ಮನ್ನು ತಾವು ರಕ್ಷಿಸಿಕೊಳ್ಳಬಲ್ಲ ಸೂಕ್ಷ್ಮ ಪರಿಸ್ಥಿತಿ ಒದಗಿ ಬಂದಿದೆ. "ವಿಶೇಷತೋ ಧರ್ಮ ಶಿಲೋ ರಾಜಾಲೋಕಪತಿರ್ಗುರು"ಎಂದು ಭಾಗವತದಲ್ಲಿ ಸ್ಪಷ್ಟವಾಗಿ ಹೇಳಲಾಗಿ ರಾಜರು,ಪ್ರಜಾನೇತಾರರೂ, ಬ್ರಾಹ್ಮಣರು, ಸನ್ಯಾಸಿಗಳು ಪ್ರಜಾ ಸಂಕ್ಷೇಮವನ್ನು ಸಾಧಿಸುತ್ತಾ ಸಕಲರಿಗೆ ಮಾರ್ಗ ದರ್ಶನ ಮಾಡುವ ಉದ್ದೇಶದಿಂದ ಕಲಿಸ್ಥಾನಗಳಿಂದ ದೂರವಿರಬೇಕು.

ಈ ರೀತಿಯಾಗಿ ಪರೀಕ್ಷಿತ ಮಹಾರಾಜ ಕಲಿ ಪುರುಷ ನನ್ನು ಪೂರ್ತಿಯಾಗಿ ನಿಗ್ರಹಿಸಿ ಧರ್ಮದೇವತೆಯ ಕಡಿಯ ಲಾದ ಮೂರು ಪಾದಗಳನ್ನು ಪುನಃ ಪ್ರಸಾದಿಸಿದ್ದಾನೆ. ಸತ್ಯ, ದಯೆ, ತಪಸ್ಸು, ಶೌಚ ಎಂಬುವೇ ಆ ಧರ್ಮ ದೇವತೆಗಿರುವ ನಾಲ್ಕು ಪಾದಗಳು. ಕಲಿಪ್ರಭಾವದಿಂದಾಗಿ ದಯೆ, ತಪಸ್ಸು ಶೌಚ ಎಂಬ ಮೂರು ಪಾದಗಳು ಮುರಿದು ಹೋಗಿವೆ. ಅವನ್ನು ಪರೀಕ್ಷಿತನು ತಿರುಗಿ ಬರುವಂತೆ ಮಾಡಿದ್ದಾನೆ. ಇದರಿಂದಾಗಿ ಧರ್ಮದೇವತೆ ಪೂರ್ತಿಯಾಗಿ ನಾಲ್ಕು ಕಾಲುಗಳ ಮೇಲೆ ನಡೆಯಲು ಶುರುಮಾಡಿದೆ.ಧರ್ಮ ದೇವತೆಯ ಕಷ್ಟಗಳು ತೊಲಗುತ್ತಿದ್ದಂತೇ ಭೂದೇವಿಯೂ ಸಹಾ ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾಳೆ. ಈ ವಿಧವಾಗಿ ಭೂದೇವಿ - ಧರ್ಮದೇವತೆಯರನ್ನು ಸಂತೃಪ್ತಿಗೊಳಿಸಿ ಪರೀ ಕ್ಷಿತ ಮಹಾರಾಜ ತನ್ನ ರಾಜಧಾನಿಗೆ ಮರಳಿ ಬಂದಿದ್ದಾನೆ. ತಾನು ಕಲಿಪುರುಷನಿಗೆ ಐದು ಸ್ಥಾನಗಳನ್ನು ಪೂರ್ತಿಯಾಗಿ ನೀಡಿದ್ದೇನೆಂಬ ತಿಳುವಳಿಕೆಯಿಂದ ಪರೀಕ್ಷಿತನು ಆ ಸ್ಥಾನ ಗಳು ವೃದ್ಧಿಗೊಳ್ಳದೇ ಜಾಗ್ರತೆವಹಿಸಿ ಕಲಿಯನ್ನು ಕಡಿವಾಣ ದಲ್ಲಿರಿಸಿದ್ದಾನೆ. ಈ ರೀತಿಯಾಗಿ ಜನರು ಪರೀಕ್ಷಿತ ರಾಜನ ಪ್ರಜಾಪಾಲನೆಯಲ್ಲಿ ಸರ್ವತೋಮುಖ ಅಭಿವೃದ್ಧಿಯನ್ನು, ಸಂತೃಪ್ತಿ, ಶಾಂತಿಗಳನ್ನು ಹೊಂದಿದ್ದಾರೆ. ಹೀಗೆ ಪರೀಕ್ಷಿತನು ನಿಗ್ರಹಿಸಿದ ಕಲಿಪ್ರಭಾವ ರಹಿತ ಸ್ಥಿತಿಗತಿಯನ್ನು ಹೊಂದಲು ಒಂದೇ ಒಂದು ಮಾರ್ಗವುಂಟು. ಅದೇ ಹರಿನಾಮ ಸಂಕೀ ರ್ತನೆ. ಈ ವಿಷಯವು ಕಲಿಸಂತರಣೋಪನಿಷತ್ತಿನಲ್ಲಿ ಸ್ಪಷ್ಟ ವಾಗಿ ಹೇಳಲಾಗಿದೆ. ಅದೇ "ಹರೇ ಕೃಷ್ಣ ಹರೇ ಕೃಷ್ಣ! ಕೃಷ್ಣ ಕೃಷ್ಣ ಹರೇ ಹರೇ॥ ಹರೇ ರಾಮ ಹರೇ ರಾಮ। ರಾಮ ರಾಮ ಹರೇ ಹರೇ॥ ಎನ್ನುವ ಷೋಡಶಕಂನಾಮಗಳನ್ನು ನಿತ್ಯ ಜಪಿಸಿ ದಲ್ಲಿ, ಪಠಿಸಿದಲ್ಲಿ ಕಲಿಕಲ್ಮಶದಿಂದ ತಾವಾಗೇ ಹೊರ ಬರುತ್ತೇವೆಂದು ಹೇಳಲಾಗಿದೆ. "ಇತಿ ಷೋಡಶನಾಮ್ನಂ ಕಲಿ ಕಲ್ಮಷನಾಶನಂ"ಎಂದು ಸ್ಪಷ್ಟವಾಗಿ ಹೇಳಲಾದ ಉಪ ನಿಷತ್ ವಾಕ್ಯವನ್ನು ಅರಿತು ಕಲಿದೋಷಗಳಿಂದ ಹೊರಬರು ವವರು ಪರಿಶುದ್ಧವಾದ ಸಾಂಗತ್ಯದಿಂದ ಹರಿನಾಮ ಸಂಕೀರ್ತನೆಯನ್ನು ಮಾಡುತ್ತಾ ಸಂಪೂರ್ಣ ರಕ್ಷಣೆ ಯಿಂದಿರಬಹುದು. ಹೊರಗೆ ಬಿಸಿಲುಂಡೆಗಳು ಬೀಳುತ್ತಿದ್ದರೂ ಎ.ಸಿ. ಕೋಣೆಯಲ್ಲಿ ಕುಳಿತಿರುವವನಿಗೆ ಬಿಸಿಲಿನ ಪ್ರಭಾವ ತಗಲದಿರುವಂತೆ ನಿರಂತರವಾಗಿ 'ಹರೇ ಕೃಷ್ಣ' ಮಹಾ ಮಂತ್ರವನ್ನು ಜಪಿಸುವವನಿಗೆ ಎಳ್ಳಷ್ಟೂ ಕಲಿ ಪ್ರಭಾವದ ಅನುಭೂತಿಯಾಗದು. ಆಗ ಮಾನವನು ಪೂರ್ತಿಯಾಗಿ ಶಾಂತಿಯುತವಾಗಿ, ಪುರೋಗತಿಯಿಂದ ಜೀವಿಸಿ ಬಳಿಕ ಭಗ ವತ್ಪ್ರಾಪ್ತಿಯನ್ನು ಹೊಂದುತ್ತಾರೆ. ಹರಿನಾಮ ಸಂಕೀರ್ತನವೇ ಕಲಿಪ್ರಭಾವಕ್ಕೆ ಸಿಂಹಸ್ವಪ್ನವಾದ ಅಕ್ಷರ ಸತ್ಯ.

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ



# ಸ್ವಾಮಿಯ ಆರ್ಜಿತ ಸೇವೆಗಳು – ತಿರುಮಲೆ

## ಆರ್ಜಿತ ಸೇವೆಗಳು/ ಉತ್ಸವಗಳು

| ಸಂ. | ಸೇವೆ / ಉತ್ಸವದ ಹೆಸರು | ದಿನ | ಸೇವಾ / ಪ್ರವೇಶ ಸಮಯ | ಪ್ರವೇಶ | ಟಿಕೆಟ್ಟು ಬೆಲೆ |
|---|---|---|---|---|---|
| | **ಸೇವೆಗಳು** | | | | |
| 1. | ಸುಪ್ರಭಾತ | ಪ್ರತಿದಿನ | ಬೆ. 2.00-3.00 ಗಂ॥ | 1 | ರೂ. 120.00 |
| 2. | ತೋಮಾಲ ಸೇವೆ (ಮಂಗಳ, ಬುಧ, ಗುರು) | ಪ್ರತಿದಿನ | ಬೆ. 3.00-3,30 ಗಂ॥ | 1 | ರೂ. 220.00 |
| 3. | ಅರ್ಚನೆ (ಮಂಗಳ, ಬುಧ, ಗುರು) | ಪ್ರತಿದಿನ | ಬೆ. 4.00-4.30 ಗಂ॥ | 1 | ರೂ. 220.00 |
| | **ನಿತ್ಯ ಉತ್ಸವಗಳು** | | | | |
| 4. | ಕಲ್ಯಾಣೋತ್ಸವ | ಪ್ರತಿದಿನ | ಮ. 10.00-12.00 ಗಂ॥ | 2 | ರೂ. 1,000.00 |
| 5. | ಡೋಲೋತ್ಸವ ( ಊಂಜಲ್ ಸೇವೆ) | ಪ್ರತಿದಿನ | ಮ. 11.00-1.00 ಗಂ॥ | 1 | ರೂ. 200.00 |
| 6. | ಆರ್ಜಿತ ಬ್ರಹ್ಮೋತ್ಸವ | ಪ್ರತಿದಿನ | ಮ. 12.30-2.00 ಗಂ॥ | 1 | ರೂ. 200.00 |
| 7. | ವಸಂತೋತ್ಸವ | ಪ್ರತಿದಿನ | ಮ. 2.30-3.00 ಗಂ॥ | 1 | ರೂ. 300.00 |
| 8. | ಸಹಸ್ರದೀಪಾಲಂಕರಣ ಸೇವೆ | ಪ್ರತಿದಿನ | ಸಾ. 5.00-5.30 ಗಂ॥ | 1 | ರೂ. 200.00 |
| | **ವಾರದ ಸೇವೆಗಳು** | | | | |
| 9. | ವಿಶೇಷಪೂಜೆ | ಸೋಮವಾರ | ಬೆ. 6.00-6,30 ಗಂ॥ | 1 | ರೂ. 600.00 |
| 10. | ಅಷ್ಟದಳ ಪಾದಪದ್ಮಾರಾಧನೆ | ಮಂಗಳವಾರ | ಬೆ. 5.00-5.30 ಗಂ॥ | 1 | ರೂ. 1,250.00 |
| 11. | ಸಹಸ್ರ ಕಲಶಾಭಿಷೇಕ | ಬುಧವಾರ | ಬೆ. 5.00-5.30 ಗಂ॥ | 1 | ರೂ. 850.00 |
| 12. | ತಿರುಪ್ಪಾವಡ ಸೇವೆ | ಗುರುವಾರ | ಬೆ. 5.00-5.30 ಗಂ॥ | 1 | ರೂ. 850.00 |
| 13. | ವಸ್ತ್ರಾಲಂಕಾರ ಸೇವೆ | ಶುಕ್ರವಾರ | ಬೆ. 3.00-4.00 ಗಂ॥ | 2 (ಗಂಡ ಹೆಂಡತಿ) | ರೂ. 12,250.00 |
| ಅ. | ಪೂರಾಭಿಷೇಕ (12 ವರ್ಷದ ಮಕ್ಕಳನ್ನು ಅನುಮತಿಸುವುದಿಲ್ಲ) | ಶುಕ್ರವಾರ | ಬೆ. 3.00-4.00 ಗಂ॥ | 1 | ರೂ. 750.00 |
| 14. | ನಿಜಪಾದ ದರ್ಶನ | ಶುಕ್ರವಾರ | ಬೆ. 4.30-5.30 ಗಂ॥ | 1 | ರೂ. 200.00 |
| | **ವಾರ್ಷಿಕ ಸೇವೆಗಳು / ಪ್ರತ್ಯೇಕ ಸಂದರ್ಭ ಸೇವೆಗಳು** | | | | |
| 15. | ತೆಪ್ಪೋತ್ಸವ | ಫೆಬ್ರವರಿ/ ಮಾರ್ಚ್ | ಸಾ.6.00-7-00 ಗಂ॥ | 1 | ರೂ. 500.00 |
| 16. | ವಸಂತೋತ್ಸವ | ಮಾರ್ಚ್/ ಏಪ್ರಿಲ್ | ಮ. 1.00-2.00 ಗಂ॥ | 1 | ರೂ. 300.00 |
| 17. | ಪದ್ಮಾವತಿ ಪರಿಣಯ | ಮೇ | ಸಾ. 4-00-4.30 ಗಂ॥ | 1 | ರೂ. 1,000.00 |
| 18. | ಅಭಿಧೇಯಕ ಅಭಿಷೇಕ | ಜೂನ್ | ಬೆ. 8-00 ಗಂ॥ | 1 | ರೂ. 400.00 |
| 19. | ಪುಷ್ಪಪಲ್ಲಕಿ | ಜುಲೈ | ಸಾ. 6-30-7-30 ಗಂ॥ | 1 | ರೂ. 200.00 |
| 20. | ಪವಿತ್ರೋತ್ಸವ | ಆಗಸ್ಟ್ | ಬೆ. 8-00-9-00 ಗಂ॥ | 1 | ರೂ. 2,500.00 |
| 21. | ಪುಷ್ಪಯಾಗ | ನವೆಂಬರ್ | ಬೆ. 8-00-9-00 ಗಂ॥ | 1 | ರೂ. 700.00 |
| 22. | ಕೋಯಿಲ್ ಆಳ್ವಾರ್ ತಿರುಮಂಜನ | ವರ್ಷಕ್ಕೆ 4 ಬಾರಿ | ಬೆ. 10-00-11-00 ಗಂ॥ | 1 | ರೂ. 300.00 |

Call Centre : 0877–2233333,
0877–2277777
Toll free : 18004254141,
1800425333333
What's app : 9399399399
e-mail : helpdesk@tirumala.org

ಮೇಲಿನ ಸೇವೆಗಳಿಗೆ ಸಂಬಂಧಿಸಿದ ಆನ್‌ಲೈನ್‌ನಲ್ಲಿ ಮಾತ್ರವೇ ಟಿಕ್ಕೆಟ್ ಬುಕ್ ಮಾಡಿಕೊಳ್ಳಬೇಕು. ಇತರ ವಿವರಗಳಿಗೆ : ತಿ.ತಿ.ದೇ. ವೆಬ್‌ಸೈಟ್ : www.ttdsevaonline.com / www.tirumala.org ನು ಸಂಪ್ರದಿಸಬೇಕು.




## ಕುಲಶೇಖರ ಆಳ್ವಾರ್

ಕೇರಳದ ದೃಢವ್ರತರಾಜನ ಮಗ ಕುಲಶೇಖರ ಆಳ್ವಾರ್ , ಆತ ಬರೆದಿದ್ದು ಪೆರುಮಾಳ್ ತಿರುಮೊಳಿ. ಇದರ ಹನ್ನೊಂದು ಪಾಶುರಗಳಲ್ಲಿ ಆತ ವೆಂಗಡದೊಡೆಯನನ್ನು ಕೀರ್ತಿಸಿದ್ದಾರೆ. ಆತ ಮುಕುಂದ ಮಾಲೆಯೆಂಬ ಸಂಸ್ಕೃತ ಕೃತಿಯನ್ನೂ ಬರೆದಿದ್ದಾರೆ.

ಪೆರುಮಾಳ್ ತಿರುಮೊಳಿಯ ನಾಲ್ಕನೆಯ ದಶಕದ ಮೊದಲ ಪದ್ಯದಲ್ಲಿ ಆತ ಹೇಳುವುದಿಷ್ಟು - ಏಳು ವೃಷಭಗಳನ್ನು ಕೊಂದು ನೀಳಾದೇವಿಯ ಕೈಹಿಡಿದ ದೇವರ ಸೇವೆಯಲ್ಲಿ ತನುವನ್ನು ತೇಯಲು ಬಯಸುವ ಅವರು ಮನುಷ್ಯ ಜನ್ಮ ಪಡೆಯಲಿಚ್ಛಿಸುವುದು ಮಾಂಸಪುಷ್ಕಲವಾದ ದೇಹವನ್ನು ಬೆಳೆಸಲೆಂದಲ್ಲ ತನ್ನ ಸರ್ವಂಕಷತೆಯನ್ನು ಪ್ರಕಟಿಸಲೆಂದು ಸೀಳಿದ ಶಂಖವನ್ನು ಕೈಯಲ್ಲಿ ಹಿಡಿದ ದೇವರು ನೆಲೆಸಿರುವ ವೆಂಗಡದ ಆಲಯದ ಬದಿಯಲ್ಲಿರುವ ಹೊಳೆಯಲ್ಲಿ ಮೀನಾಗಿಯಾದರೂ ಹುಟ್ಟಬೇಕೆಂಬುದು ಅವರ ಅಪೇಕ್ಷೆ.

ಎರಡನೆಯ ಪಾಶುರದಲ್ಲಿ ಅವರು-ರಂಭೆಯೇ ಮುಂತಾದ ಅಪ್ಸರೆಯರೊಡನೆ ನಿತ್ಯಯೌವನದಿಂದ ಕೂಡಿದ ಸ್ವರ್ಗಸುಖವನ್ನು ಅನುಭವಿಸಲು ಅಪೇಕ್ಷಿಸದೆ, ಭೂಮಿಯನ್ನು ಬಹುಕಾಲ ಆಳುವ ಅಪೇಕ್ಷೆಯನ್ನು ದೂರ ಮಾಡಿ, ಹಲವಾರು ಹೂದೋಟಗಳಿಂದ ಕೂಡಿದ ತಿರುವೆಂಗಡದ ಅಸಂಖ್ಯಾತ ಹೊಳೆಗಳಲ್ಲಿನ ಯಾವುದಾದರೂ ಒಂದು ಹೊಳೆಯಲ್ಲಿ ಮೀನಾಗಿ ಹುಟ್ಟಲು ಅಪೇಕ್ಷಿಸುವುದಾಗಿ ಹೇಳುವರು.

ಮೂರನೆಯ ಪಾಶುರದಲ್ಲಿ ಬ್ರಹ್ಮ, ಇಂದ್ರ, ಕೂದಲು ಜಡೆಗಟ್ಟಿದ ಶಿವ ಮೊದಲಾದವರು ವೈಕುಂಠದ ಬಾಗಿಲಿನಲ್ಲಿ ನಾಮುಂದು ತಾಮುಂದು ಎನ್ನುತ್ತ ಸ್ವಾಮಿ ದರ್ಶನಕ್ಕೆ ನುಗ್ಗುತ್ತಿರಲು, ಸ್ವಾಮಿಯ ಅಂತರಂಗದ ಸೇವಕರೊಡನೆ ತಾವೂ ಸೇರಿ ಸ್ವಾಮಿಯ ತಾಂಬೂಲವನ್ನುಗಿಯುವ ಪೀಕದಾನಿಯನ್ನು ಹಿಡಿದು ನಿಂತು ಸೇವೆ ಮಾಡಲು ಅಪೇಕ್ಷಿಸುವರು.

ಹವಳಗಳನ್ನು ದಡಕ್ಕೆ ತಂದು ಹಾಕುವ ಅಲೆಗಳ ಹಾಲುಗಡಲಿನಲ್ಲಿ ಪವಡಿಸುವವನಿರುವ ಮಾಯಾವಿಯಾದ ವೆಂಕಟೇಶನ ತಿರುವೆಂಗಡದಲ್ಲಿ, ಮಕರಂದದ ಆಸೆಯಿಂದ ದುಂಬಿಗಳು ಗುಂಪುಗೂಡಿ ಹಾಡುತ್ತ ನೆರೆಯುವ ಹೂವುಗಳನ್ನು ಹೊಂದಿದ ಸಂಪಿಗೆ ಮರವಾಗಿ ಹುಟ್ಟಿ ಆತನ ಪಾದಗಳನ್ನು ನೋಡುವ ಆಸೆಯನ್ನು ನಾಲ್ಕನೆಯ ಪಾಶುರದಲ್ಲಿ ವ್ಯಕ್ತಗೊಳಿಸಿದ್ದಾರೆ.

ತಮ್ಮ ಉದ್ಧಾರಕರ್ತನೂ, ಪುರುಷೋತ್ತಮನೂ ಆಗಿರುವ ಸ್ವಾಮಿಯು ನೆಲೆಸಿರುವ ವೆಂಗಡದ ಪರ್ವತದಲ್ಲಿ ಯಾರೂ ಕೈ ಹಾಕದ ಒಂದು ಗಿಡದ ಪೊದೆಯಾಗಿ ಹುಟ್ಟುವುದೂ ಸಹ,ಚಕ್ರವರ್ತಿಯ ಸೌಭಾಗ್ಯಗಳನ್ನು ಅನುಭವಿಸುತ್ತ ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತು ಮೆರವಣಿಗೆಯಲ್ಲಿ ಹೋಗುವುದಕ್ಕಿಂತಲೂ ಹೆಚ್ಚು ಅಪೇಕ್ಷಣೀಯವೆಂದು ಐದನೆಯ ಪಾಶುರದಲ್ಲಿ ತಿಳಿಸುವರು.

ಜುಳು ಜುಳು ಧ್ವನಿಯಲ್ಲಿ ಹರಿಯುವ ಹೊಳೆಗಳನ್ನು ಹೊಂದಿದ ವೆಂಗಡ ಪರ್ವತದಲ್ಲಿ ಒಂದು ಶಿಖರವಾಗಿ ನಿಂತಿರುವುದೂ ಸಹ ರಂಭೆ ಊರ್ವಶಿ ಮೇನಕೆಯರೇ ಮುಂತಾದ ಅಪ್ಸರೆಯರ ಸೇವೆ ಪಡೆಯುವ ಭಾಗ್ಯಕ್ಕಿಂತ ಮಿಗಿಲಾದದ್ದು. ಆದ್ದರಿಂದ ಹೀಗೆ ನಿಶ್ಚಲವಾಗಿ ನಿಲ್ಲುವುದೇ ತಮ್ಮ ಆಸೆಯೆಂದು ಆರನೆಯ ಪಾಶುರದಲ್ಲಿ ತಿಳಿಸಿದ್ದಾರೆ.

ಆಗಸದಲ್ಲಿ ತಿರುಗಾಡುವ ಚಂದ್ರನ ರೀತಿಯಲ್ಲಿರುವ ಧವಳವರ್ಣದ ರಾಜ ಛತ್ರದಡಿಯಲ್ಲಿ ಸಾಮಂತರಿಂದ ಓಲೈಸಿಕೊಂಡು, ಸಾಮಾನ್ಯರಿಂದ ಶ್ಲಾಘ್ಯಗೊಂಡು ನಿಲ್ಲುವ ಭಾಗ್ಯವೂ ಸಹ ಅತಿಕಡಿಮೆಯದೆಂದು ಭಾವಿಸುತ್ತ, ಮಧು ತುಂಬಿದ ಹೂವುಗಳ ನಂದನವನಗಳಿರುವ ವೆಂಗಡದ ಮೇಲೆ ಹೊಳೆಯುವ ಹರಿಯುವುದನ್ನೇ ಅಪೇಕ್ಷಿಸುವೆ ಎಂಬುದಾಗಿ ಏಳನೆಯ ಪಾಶುರದಲ್ಲಿ ತಿಳಿಸುವರು.

ಜಡೆಗಟ್ಟಿದ ಮುಡಿಯಲ್ಲಿ ಚಂದ್ರನನ್ನು ಪಡೆದ ಶಿವನೂ, ಇಂದ್ರ ಬ್ರಹ್ಮರುಗಳೂ ಸಹ ತಮ್ಮ ತಮ್ಮ ಅಂತಸ್ತಿಗೆ ತಕ್ಕಂತೆ



ಯಜ್ಞ ಯಾಗಾದಿಗಳನ್ನು ಮಾಡಿದರೆ ಅವರ ಅಪೇಕ್ಷೆಗಳನ್ನು ಪೂರೈಸುವವನಾಗಿ, ವೇದಗಳಿಂದಲೂ ಸಂಸ್ತುತ್ಯನಾದ ದೇವರು ಇರುವಂತಹ ತಂಪಾದ ಸುಗಂಧ ಪೂರ್ಣವಾದ ಅರಣ್ಯಗಳನ್ನು ಹೊಂದಿದ ತಿರುವೆಂಗಡದಲ್ಲಿನ ಹಾದಿಯ ರೂಪದಲ್ಲಿ ಇರುವುದಾದರೂ ಸರಿಯೇ,ತಮಗೆ ಅದು ಸಂಪೂರ್ಣ ಸಮ್ಮತವೆಂದು ಎಂಟನೆಯ ಪಾಶುರದಲ್ಲಿ ತಿಳಿಸುವರು.

ಒಂಭತ್ತನೆಯ ಪಾಶುರದಲ್ಲಿ ಅವರು ಪ್ರಾರ್ಥನೆ ಹೀಗೆ ಸಾಗುತ್ತದೆ. ಪುರುಷೋತ್ತಮ! ಲಕ್ಷ್ಮೀಪತಿ! ಮಾನವರ ಪಾಪಗಳನ್ನು ಕತ್ತರಿಸುವವನೆ! ವೆಂಗಡದಲ್ಲಿ ನಿಂತವನೆ! ರಂಭೆಯೇ ಮುಂತಾದ ಅಪ್ಸರೆಯರೂ, ಮತ್ತಿತರ ದೇವತೆಗಳೂ ನಿನ್ನ ದರುಶನಕ್ಕೆಂದು ಬಂದು ಹೋಗುವ ದಾರಿಯ ಮೆಟ್ಟಲಾಗಿ ನಿಂತು ನಿನ್ನ ಹವಳದಂತಹ ತುಟಿಗಳನ್ನು ಕಾಣಲು ಅಪೇಕ್ಷಿಸುವೆ.

ಮೇಲಿನ ಲೋಕಗಳನ್ನು ತಮ್ಮ ವಶಕ್ಕೆ ಪಡೆದುಕೊಂಡು ಅವುಗಳನ್ನು ಆಳುವುದು ತಮ್ಮಗೆ ಇಷ್ಟವಾದ ಕೆಲಸವಲ್ಲ






ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

## 2019 ಸ್ವಾಮಿಯವರ ಕ್ಯಾಲೆಂಡರ್‌ಗಳು ಹಾಗೂ ಡೈರಿಗಳು

2019 ನೇ ವರ್ಷದ ತಿರುಮಲೆ ಶ್ರೀ ಶ್ರೀನಿವಾಸನ ಕ್ಯಾಲೆಂಡರ್‌ಗಳು ಹಾಗೂ ಡೈರಿಗಳನ್ನು ತಿರುಮಲೆ ತಿರುಪತಿ ದೇವಸ್ಥಾನವು ಅತ್ಯಂತ ಸುಂದರವಾಗಿ ಮುದ್ರಿಸಿ ಭಕ್ತರಿಗೆ ಒದಗಿಸುತ್ತಿದೆ.

ಇವುಗಳನ್ನು ಭಕ್ತರು ತಿರುಮಲೆ ತಿರುಪತಿ ದೇವಸ್ಥಾನದ ದೆಹಲಿ, ಮುಂಬೈ, ಬೆಂಗಳೂರು, ಹೈದರಾಬಾದ್, ಚೆನ್ನೈ ನಗರಗಳಲ್ಲಿರುವ ಹಾಗೂ ಇನ್ನಿತರ ಕಡೆಗಳಲ್ಲಿರುವ ಸಮಾಚಾರ ಕೇಂದ್ರಗಳಿಂದ ಅಥವಾ ತಿ.ತಿ.ದೇ.ಕಲ್ಯಾಣ ಮಂಟಪಗಳಿಂದ ಕೊಂಡುಕೊಳ್ಳ ಬಹುದು. ಅಷ್ಟಲ್ಲದೆ ತಿರುಮಲೆ ತಿರುಪತಿ ದೇವಸ್ಥಾನದ ವೆಬ್‌ಸೈಟ್ www.ttdsevaonline.com ಮೂಲಕ online ಮಾಧ್ಯಮದಿಂದ ಹಣವನ್ನು ಕಳುಹಿಸಿ ಕೂಡ ಪಡೆಯಬಹುದು.

**ವಿವರಗಳಿಗಾಗಿ 0877 - 2264209**

### ಕ್ಯಾಲೆಂಡರ್‌ಗಳು, ಡೈರಿಗಳ ಬೆಲೆಗಳ ಪಟ್ಟಿಕೆ

| ವರ್ಗ | ಬೆಲೆ.(ರೂ.) |
|---|---|
| 12 ಪುಟದ ಕ್ಯಾಲೆಂಡರ್‌ಗಳು | 100.00 |
| ಟೇಬುಲ್ ಟಾಪ್ ಕ್ಯಾಲೆಂಡರ್‌ಗಳು | 60.00 |
| ಡೈರಿ (ಡಿಲಕ್ಸ್) | 130.00 |
| ಡೈರಿ (ಆರ್ಡಿನರಿ) | 100.00 |
| ಎಸ್. ವಿ. ದೊಡ್ಡ ಕ್ಯಾಲೆಂಡರ್ | 15.00 |
| ಎಸ್.ಪಿ. ದೊಡ್ಡ ಕ್ಯಾಲೆಂಡರ್ | 15.00 |
| ಎಸ್.ವಿ. & ಎಸ್.ಪಿ.ಕ್ಯಾಲೆಂಡರ್ | 10.00 |
| ತೆಲುಗು ಪಂಚಾಂಗ ಕ್ಯಾಲೆಂಡರ್ | 20.00 |

ಉಪಕಾರ್ಯನಿರ್ವಹಣಾಧಿಕಾರಿ ತಿ.ತಿ.ದೇ. ಪುಸ್ತಕ ವಿಕ್ರಯಶಾಲೆ. ಕೆ.ಟಿ. ರೋಡ್ ತಿರುಪತಿ - 517507.

ವೆಂದೂ, ಸುವರ್ಣದ ಸೊಂಟಪಟ್ಟಿಯನ್ನು ಹೊಂದಿದ ಊರ್ವಶಿಯೇ ಮುಂತಾದ ಅಪ್ಸರೆಯರ ಸೇವೆ ಪಡೆಯು ವುದೂ ತಮಗೆ ಇಷ್ಟವಲ್ಲವೆಂದೂ, ತಿರುವೆಂಗಡದ ಪರ್ವತ ದಲ್ಲಿ ಸ್ವಾಮಿ ಇರುವುದರಿಂದಾಗಿ ಅಲ್ಲಿ ಏನಾದರೂ ಆಗಿ ಹುಟ್ಟಿ ಸ್ವಾಮಿಯ ಹವಳದ ತುಟಿಗಳನ್ನು ಕಾಣಲು ತಾವು ಇಚ್ಛಿಸುವು ದಾಗಿ ಹತ್ತನೆಯ  ಪಾಶುರದಲ್ಲಿ ಹೇಳುತ್ತಾರೆ.

ಹನ್ನೊಂದನೆಯ ಪಾಶುರದಲ್ಲಿ ಕುಲಶೇಖರರು ಫಲಶ್ರುತಿಯನ್ನು ಕುರಿತು ಹೇಳುವರು. ಶತ್ರುಗಳನ್ನು ಅಳಿಸ ಲೆಂದೇ ಇರುವ ಕೂರಾದ ಶಲ್ಯವನ್ನು ಹಿಡಿದ ಕುಲಶೇಖರನು ಉತ್ತರದಲ್ಲಿನ ವೆಂಗಡದಲ್ಲಿರುವ ಸ್ವಾಮಿಯನ್ನು ಕಾಣುವ ಆಸೆ ಯಲ್ಲಿ ವಿನಯದಿಂದ  ತಲೆಬಾಗಿ ಚೆಂದಮಿಳಿನಲ್ಲಿ ಹೇಳಿದ ಈ ಪದ್ಯಗಳನ್ನು ಯಾರು ಪಾರಾಯಣ ಮಾಡುವರೋ ಅವರು ಸ್ವಾಮಿಯ ಮನಕ್ಕೆ ಮುದವನ್ನುಂಟು ಮಾಡುವ ಭಕ್ತ ರಾಗುವರು.

(ಶುತ್ರುವಧೆಯ ಕೂರ್‌ವೇಲು ಹಿಡಿದ ಕುಲಶೇಖರನ್ ಎಂಬ ಪದ ಸಮುಚ್ಚಯವನ್ನು ಬಳಸುವಾಗ ಕವಿ ಅವರ ದಿವ್ಯ ಜೀವನದ ಅನುಭಾವದಲ್ಲಿಯೂ, ಮೇಲಿನ ಪದ್ಯಗಳಲ್ಲಿ ಕಂಡು ಬರುವ ಉದಾತ್ತ ಧ್ಯೇಯಗಳ ನಡುವೆಯೂ ಪರ ವಿರೋಧಭಾವವನ್ನು ಹೊಂದಿರುವಿಕೆಯನ್ನೇ ಪ್ರಕಟಿಸುವುದು.)

ಪೆರುಮಾಳ್ ತಿರುಮೊಳಿಯ ರಚನೆಯೊಡನೆ ಕುಲ ಶೇಖರ್ ಆಳ್ವಾರರು ಸಂಸ್ಕೃತದಲ್ಲಿ 42 ಪದ್ಯಗಳ ಮುಕುಂದ ಸ್ತುತಿಯ ಮುಕುಂದ ಮಾಲೆಯೆಂಬ ಶ್ಲಾಘ್ಯ ಕೃತಿಯನ್ನೂ ರಚಿಸಿರುವರಾದರೂ ಅದರ 17 ನೆಯ ಪದ್ಯದಲ್ಲಿ ಮೂರನೇ ಸಾಲಿನಲ್ಲಿ ಇತರ ದೇವರುಗಳನ್ನು ಕ್ಷುದ್ರರೆಂದು ಕೀಟಗಳೆಂದೂ ಹೀಯಾಳಿಸಿ ನುಡಿಯುವರು. ಕೀಟಾಸಮ ಸ್ತುಸ್ಸುರಃ-ಮುಕುಂದನನ್ನು ಹೋಗಳುವ ಭರದಲ್ಲಿ ಈ ಮಾತನ್ನು ಬಳಸಿದ್ದಾರೆ.ಇಂತಹ ಹೇಳಿಕೆಗಳು ಅವರ ಧಾರ್ಮಿಕ ಸಂಕೋಚಗಳನ್ನು ವೀರ ವೈಷ್ಣವತೆಯ ಗುರುತುಗಳನ್ನು ಸೂಚಿಸುತ್ತವೆಯಷ್ಟೇ, ವೈಷ್ಣವ ಪಂಥದಲ್ಲಿ ಬ್ರಹ್ಮ, ಶಿವ, ಇಂದ್ರ ಮುಂತಾದವರೆಲ್ಲ ದೇವತಾ ಶ್ರೇಣಿಯಲ್ಲಿ ಎರಡು ಮೂರು ಮತ್ತಿತರ ಸ್ಥಾನಗಳನ್ನು ಪಡೆಯುವರು ಹೀಗಾಗಿ ಇಲ್ಲಿನ ವಿವರಣೆ ತುಸು ಕಷ್ಟಕರವಾಗುತ್ತದೆ.

ದೇವರೊಬ್ಬನೇ ಮಾಡುವ ಕಾರ್ಯ ಕ್ಷೇತ್ರಗಳಿಗೆ ತಕ್ಕಂತೆ ಬ್ರಹ್ಮವಿಷ್ಣುಶಿವ ಎಂದು ಬೇರೆ ಬೇರೆಯ ಹೆಸರುಗಳನ್ನು ಪಡೆದಿರುವರು.  ಪೊಯ್ಗೈ, ಪೇಯಾಳ್ವಾರರು ವೆಂಗಡತ್ತಾನನು (ವೆಂಕಟೇಶ್ವರ ಸ್ವಾಮಿಯು) ಹರಿಹರರ ಮತ್ತೂ ಮುಂದು ರೆದು ಬ್ರಹ್ಮನೂ ಸೇರಿ ಆದ ಮೂರ್ತಿ ಎಂದೇ ವಿವರಿಸುವರು. ಏಕ ಮೇವನಾದ ಮುಕುಂದನೇ ಸೃಷ್ಟಿಕರ್ತ ರಕ್ಷಕ, ಲಯ ಕರ್ತನಾಗಿರುವುದರಿಂದ ಕುಲಶೇಖರರು ಹೇಳುವ ಬ್ರಹ್ಮಶಿವರುಗಳ ಕ್ರಿಯಾ ರೂಪಗಳಾದ ಸೃಷ್ಟಿಲಯ ಕಾರ್ಯ ಗಳಲ್ಲಿ  ಅವರನ್ನು ಎರಡನೆಯ ವರನ್ನಾಗಿ ನೋಡುವ ದೃಷ್ಟಿ ಮುಕುಂದನಿಗೇ  ಅನ್ವಯವಾಗಬೇಕಾಗುವುದು. ಹೀಗಾಗಿ ಕುಲಶೇಖರ ಆಳ್ವಾರರು ತಾವು ಸ್ತುತಿಸಲು ಹೊರಟ ಮುಕುಂದ ನನ್ನೇ ಪರೋಕ್ಷವಾಗಿ ನಿಂದನೆಗೆ ಗುರಿಯಾಗಿಸಿದ್ದಾರೆ ಎಂದು ಹೇಳಲು ಬರುವುದು.

ಸರ್ವಶಕ್ತನಾದ ಪರಮಾತ್ಮನೇ ಜಗತ್ತಿನಲ್ಲಿ ಹುಟ್ಟಿಸುವ ಸಲಹುವ, ಕೊಲ್ಲುವ ಶಕ್ತಿಯಾಗಿ ಸರ್ವ ಮಾನವರ, ಕ್ರಿಯೆ, ಸಂಘಟನೆಗಳೆಲ್ಲವನ್ನೂ ನಿಯಂತ್ರಿಸುವ ಸೂತ್ರಧಾರನಾಗಿರು ವನೆಂಬುದು ಸರ್ವ ಸಾಧಾರಣ ತತ್ವವಾಗಿದೆಯೆನ್ನಬೇಕು. ಶ್ವೇತಾಶ್ವರ ಉಪನಿಷತ್ತು (ಅಧ್ಯಾಯ 1-5-10) ಹೇಳುವಂತೆ ಕ್ಷರಂ ಪ್ರಧಾನ ಮಮೃತಾಕ್ಷರಂ ಹರಃ  ಕ್ಷರಾತ್ಮನಾ ವೀಶತೇ ದೇವ ಏಕಃ- ಆತನ ಗುಣಗಳನ್ನು ಪ್ರಧಾನವೆಂದೂ ಪ್ರಕೃತಿ ಯೆಂದೂ ವಿವರಿಸಲಾಗಿದ್ದು, ಇದು ನಾಶವಾಗತಕ್ಕದ್ದು ಎಂದೂ, ಹರನು (ಪರಮೇಶ್ವರನು)ಪ್ರಳಯ ಕಾಲದಲ್ಲಿ ಎಲ್ಲವನ್ನೂ ತನ್ನೊಳಕ್ಕೆ ಸೆಳೆದುಕೊಂಡು ರಕ್ಷಿಸುವವನಾಗುವುದರಿಂದ ಅಕ್ಷರನೆಂದು ಹೇಳಿದೆ. ಏಕಃ - ದೇವಃ - ಒಬ್ಬನೇ ದೇವರು - ಕ್ಷರ ಆತ್ಮನನ್ನು ಸೃಜಿಸುವನು ಎಂದರೆ - ಜಗತ್ತು ಜೀವ,ಆತ್ಮ ಗಳನ್ನು ಸೃಜಿಸಿ ಅವುಗಳನ್ನು ನಿಯಂತ್ರಿಸುವನು.

ನಮ್ಮಾಳ್ವಾರರು ತಮ್ಮ ತಿರುವಾಯ್ಮೊಳಿಯ ಹತ್ತನೆಯ ಶತಕದ ಆರನೆಯ ದಶಕದ ಮೊದಲ ಪಾಶುರದಲ್ಲಿ ದೇವರನ್ನು ಉಲಗಂ ಉಂಡ ಪೆರುವಾಯಾ (ಪ್ರಳಯ ಕಾಲದಲ್ಲಿ ಜಗತ್ತನ್ನು ನುಂಗಿಬಿಡುವ ದೇವರು) ಎಂದು ಕರೆಯುವರು.ತಿರುಮಂಗೈ ಆಳ್ವಾರರು ಆತನನ್ನು ಮತ್ತೂ ಸ್ಪಷ್ಟವಾಗಿ ಗುರುತಿಸುತ್ತಾರೆ. ಅವರ ತಿರುಮೊಳಿಯ ಎಂಟನೆಯ ಶತಕದ ಮೊದಲ ದಶಕದ ಆರನೆಯ ಪಾಶುರದಲ್ಲಿ, ಹತ್ತನೆಯ ಶತಕದ ಮೊದಲ ದಶಕದ ಮೂರನೆಯ ಪಾಶುರದಲ್ಲಿ ಪರಮಾತ್ಮನು ಎಂಟು ದಿಕ್ಕುಗಳನ್ನೂ ಏಳು ಲೋಕಗಳನ್ನೂ, ಸಾಗರ ಪೃಥ್ವಿಗಳನ್ನೂ ಅವುಗಳಲ್ಲಿರುವ ಪ್ರಾಣಿಗಳನ್ನೂ ತನ್ನ ಉದರದಲ್ಲಿಟ್ಟುಕೊಂಡು ಪ್ರಳಯ ಕಾಲದಲ್ಲಿ ಅವು ನಾಶವಾಗದಂತೆ ನೋಡಿಕೊಳ್ಳುವನು ಎಂದಿದ್ದಾರೆ.

ಬ್ರಹ್ಮ ವಿಷ್ಣು ಮಹೇಶ್ವರರೆಂಬ ಹೆಸರುಗಳು ಅವರುಗಳ ಕರ್ತೃತ್ವರಾದ ಕಾರ್ಯ ವಿಭಜನೆಯಾಗಿದೆಯೇ ಹೊರತು, ಮೇಲುಕೀಳಿನ ಗುರುತುಗಳಿಗಾಗಿ ಅಲ್ಲ, ಇದಕ್ಕೆ ಒಂದು ಒಳ್ಳೆಯ ಉದಾಹರಣೆಯೆಂದರೆ ಶ್ರೀ ಲಕ್ಷ್ಮೀ ಸ್ತೋತ್ರದಲ್ಲಿ ಆಕೆಯನ್ನು ಬ್ರಹ್ಮಾವಿಷ್ಣು ಶಿವಾತ್ಮಿಕಾ ಎಂದು ಕರೆಯಲಾಗಿದೆ. ಹೀಗೆಯೇ ಪಾರ್ವತಿಯು ತನ್ನೆಲ್ಲ ಅವತಾರಗಳಲ್ಲಿಯೂ, ಮೇಲಾಗಿ ಸರಸ್ವತಿಯನ್ನೂ ಸಹ ತ್ರಿಮೂರ್ತಿಗಳೂ ಬ್ರಹ್ಮ ವಿಷ್ಣುಶಿವರು (ಹರಿಹರ ಬ್ರಹ್ಮಾದಿ ಭಿಃ ಸೇವಿತಂ ತಿಳಿಸಲಾಗಿದೆ. ಅದೇ - ಮೊದಲಿನ ಪ್ರಾರ್ಥನಾಭಾಗದಲ್ಲಿ) ಹಾಗೆಂದ ಮೇಲೆ ಸರ್ವೋತ್ತಮ ಎಂದರೇನು!

- ಸಶೇಷ

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂದು ಪತ್ರ

ಹೆಸರು ಮತ್ತು ವಿಳಾಸ :

(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥ ವಾಗುವಂತೆ ಇಂಗ್ಲೀಷಿ ನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ / ಆಜೀವಚಂದಾ : ☐ ರೂ.60/- ☐ ರೂ.500/-

(ಸಂಸ್ಕೃತ ಸಪ್ತಗಿರಿಗಾಗಿ ಆಜೀವ ಚಂದಾ ಸ್ವೀಕರಿಸಲಾಗುವುದಿಲ್ಲ.)

ಚಂದಾ ಪುನರುದ್ಧರಣೆ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ :

(ಚೆಕ್ಕು, ಪಿ.ಒ.ಗಳನ್ನು ಸ್ವೀಕರಿಸುವುದಿಲ್ಲ )

ಸ್ಥಳ :

ದಿನಾಂಕ :

ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.60/-, ಆಜೀವ ಚಂದಾ ರೂ.500/- ಗಳು ಡಿ.ಡಿ/ಎಂ.ಓ. ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯಬೇಕು.

ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು / ತಮ್ಮ ಚಂದಾವನ್ನು ಪುನರುದ್ಧರಿಸಿ ಕೊಳ್ಳುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.

ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ - "ಪ್ರಧಾನಸಂಪಾದಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ.ಟಿ.ರೋಡ್ಡು, ತಿರುಪತಿ - 517 507".

## ಸಪ್ತಗಿರಿ ಚಂದಾದಾರರಲ್ಲಿ ವಿನಂತಿ

ಸಪ್ತಗಿರಿ ಚಂದಾದಾರರು ತಮ್ಮ ಚಂದಾ ಹಣವನ್ನು ಕಳುಹಿಸುವಾಗ (ಇ) ಎಂ.ಓ. / ಡಿ.ಡಿ.ಗಳನ್ನು ಕಳುಹಿಸುತ್ತಿರುವುದು ಸರಿಯಷ್ಟೆ. ಅಂಚೆಯಲ್ಲಿ ಪೋಸ್ಟಲ್ ಇ.ಎಂ.ಓ. ಕಳುಹಿಸುವಾಗ ಚಂದಾದಾರರು ಪೂರ್ತಿವಿಳಾಸ ವಿವರ ನೀಡಬೇಕು. ಈಗ "ಪೋಸ್ಟಲ್ ಇ.ಎಂ.ಓ" ವಿಧಾನದಲ್ಲಿ ಹಣ ಕಳುಹಿಸುವವರು ಬರೆಯುವ ಅವಕಾಶವೇ ಇರುವುದಿಲ್ಲವಾಗಿ, ನಿಮ್ಮ ವಿಳಾಸವನ್ನು ಅವರು ಕಂಪ್ಯೂಟರ್‌ನಲ್ಲಿ ಸಂಪೂರ್ಣವಾಗಿ ದಾಖಲುಮಾಡುವಂತೆ ನೋಡಿಕೊಳ್ಳಬೇಕು. ನಿಮ್ಮ ಪೂರ್ಣವಿಳಾಸ ಕಂಪ್ಯೂಟರಿನಲ್ಲಿ ದಾಖಲೆ ಆಗದಿದ್ದರೆ ಹಣ ಸೇರಿದರೂ ವಿಳಾಸವಿಲ್ಲದೆ ಸಪ್ತಗಿರಿ ನಿಮ್ಮನ್ನು ಸೇರುವುದಿಲ್ಲ.

ಅ. ತಾವು ಹಳೆಯ ಚಂದಾದಾರರಾಗಿದ್ದರೆ ಚಂದಾ ಪುನರುದ್ಧಾರ - ಪುರ್ನವೀಕರಿಸುವಾಗ ಇ.ಎಂ.ಓ / ಎಂ.ಓ ಮಾಡುವಾಗ ಚಂದಾ ಕ್ರಮ ಸಂಖ್ಯೆಯನ್ನು ತಪ್ಪದೆ ನಮೂದಿಸುವುದು.

ಆ. ಇದರಲ್ಲಿ ನಿಮ್ಮ ಊರಿನ ಪೂರ್ತಿವಿಳಾಸದೊಡನೆ ಅಂಚೆ ಪಿನ್ ಕೋಡ್ ಇರುವಂತೆ ನೋಡಿಕೊಳ್ಳಬೇಕು.

ಇ. ನಿಮಗೆ ಬೇಕಾದ ಭಾಷೆಯನ್ನು ಖಚಿತವಾಗಿ ನಮೂದಿಸಬೇಕು.

ಇವೆಲ್ಲ ವಿವರಗಳನ್ನೂ ಸರಿಯಾಗಿರುವಂತೆ ಮಾಡಿದ್ದೇ ಆದಲ್ಲಿ ಸಪ್ತಗಿರಿ ಖಚಿತವಾಗಿ ಶ್ರೀವೆಂಕಟೇಶ್ವರ ಸ್ವಾಮಿಯ ಅನುಗ್ರಹವನ್ನು ಹೊತ್ತು ನಿಮ್ಮ ಮನೆ ಸೇರುವುದು.

**ಸಪ್ತಗಿರಿ ಚಂದಾ ವಿವರಣೆಗಾಗಿ**

**0877- 2264359**

**0877-2264543**


Edited and Published on behalf of T.T.Devasthanams by Dr. K. Radha Ramana, M.A., M.Phil., Phd., Chief Editor, T.T.D. and Printed at T.T.D. Press by Sri R.V. Vijaya Kumar, B.A., B.Ed., Dy. E.O. (Publications & Press), T.T.D. Press, Tirupati - 517 507.



ತಿರುಮಲ ಸ್ವಾಮಿಯವರ ಆಲಯದಲ್ಲಿ ತಿ.ತಿ.ದೇ., ದೊಡ್ಡಜೀಯರ್ ಸ್ವಾಮಿಯವರ ನೇತೃತ್ವದಲ್ಲಿ ಕಾರ್ತಿಕ ದೀಪೋತ್ಸವ



ತಿರುಮಲ ಸ್ವಾಮಿಯವರ ಆಲಯದಲ್ಲಿ ಕಾರ್ತಿಕ ದೀಪವನ್ನು ಬೆಳಗಿಸುತ್ತಿರುವ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್., ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ಕೆ.ಎಸ್. ಶ್ರೀನಿವಾಸರಾಜು, ಐ.ಡಿ.ಇ.ಎಸ್.



ತಿರುಮಲ ಸ್ವಾಮಿಯವರ ಆಲಯದಲ್ಲಿ ಕಾರ್ತಿಕ ದೀಪೋತ್ಸವದ ದೃಶ್ಯಗಳು



ತಿರುಮಲ ಸ್ವಾಮಿಯವರ ಪುಷ್ಕರಿಣಿಯಲ್ಲಿ ಕಾರ್ತಿಕ ದೀಪೋತ್ಸವವನ್ನು ನಿರ್ವಹಿಸುತ್ತಿರುವ ದೃಶ್ಯ



ತಿರುಮಲ ಸ್ವಾಮಿಯವರನ್ನು (05-12-2018) ದರ್ಶಿಸಿದ ಉಭಯ ತೆಲುಗು ರಾಜ್ಯದ ರಾಜ್ಯಪಾಲರು ಮಾನ್ಯ ಶ್ರೀ ಇ.ಎಸ್.ಎಲ್.ನರಸಿಂಹನ್ ರವರು



ಸ್ವಾಮಿಯವರ ತೀರ್ಥ ಪ್ರಸಾದಗಳನ್ನು ಮಾನ್ಯ ಶ್ರೀ ರಾಜ್ಯಪಾಲ ದಂಪತಿಯವರಿಗೆ ನೀಡುತ್ತಿರುವ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ್ ಕುಮಾರ್ ಸಿಂಘಾಲ್, ಐ.ಎ.ಎಸ್.



ಪ್ರತಿವರ್ಷ ತಿ.ತಿ.ದೇ., ನಿರ್ವಹಿಸುವ ಸನಾತನ ಧಾರ್ಮಿಕ ಶಿಕ್ಷಣ ಪರೀಕ್ಷೆಗಳ ಬಹುಮಾನ ಪ್ರಧಾನೋತ್ಸವದ ದೃಶ್ಯಗಳು



ತಿ.ತಿ.ದೇ., ವೈಭವವಾಗಿ ನಿರ್ವಹಿಸಿದ "ಪಂಚಮಿ" ತೀರ್ಥೋತ್ಸವಕ್ಕೆ ಪುಷ್ಪಾದಿದ್ರವ್ಯಗಳನ್ನು ತೆಗೆದುಕೊಂಡು ಹೋಗುತ್ತಿರುವ ತಿ.ತಿ.ದೇ., ಪಾಲಕಮಂಡಳಿ ಅಧ್ಯಕ್ಷರಾದ ಶ್ರೀ ಪುಟ್ಟಾ ಸುಧಾಕರ್ ಯಾದವ್, ತಿರುಪತಿ ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ಪೋಲಾ ಭಾಸ್ಕರ್, ಐ.ಎ.ಎಸ್. ತಿ.ತಿ.ದೇ., ಭದ್ರತೆ ಮತ್ತು ನಿಘಾ ಪ್ರಧಾನ ಅಧಿಕಾರಿ ಶ್ರೀ ಗೋಪಿನಾಥ್ ಜಟ್ಟಿ, ಐ.ಪಿ.ಎಸ್. ಇತರ ತಿ.ತಿ.ದೇ., ಉನ್ನತಾಧಿಕಾರಿಗಳು.



SAPTHAGIRI (KANNADA)
ILLUSTRATED MONTHLY
Published by
Tirumala Tirupati Devasthanams
25-12-2018
Regd. with the Registrar of Newspapers
under "RNI" No.10742,
Postal Regd.No.TRP/14 - 2018-2020
Licensed to post without prepayment
No.PMGK/RNP-/DLGS/SAPTHAGIRI-
Dt 24-11-2017